
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 ಸಂಚಿಕೆ 5 | ಜನವರಿ 29–ಫೆಬ್ರವರಿ 4, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಡಾರ್ವಿನ್ ಸಿದ್ಧಾಂತ ತಪ್ಪೆಂದ
ಶಿಕ್ಷಣ ರಾಜ್ಯ ಮಂತ್ರಿ
ಡಾ. ಸತ್ಯಪಾಲ್ ಸಿಂಗ್



ನೂತನ ಪಿಂಚಣಿ ಯೋಜನೆ ರದ್ದುಪಡಿಸಿ



ಬೆಳಕು ಕೊಡುವ ಕಾರ್ಮಿಕರ ಬದುಕಿನಲ್ಲಿ ಬೆಳಕು ತರಬೇಕಾಗಿದೆ



ಸಂವಿಧಾನಕ್ಕೆ ದೊಡ್ಡ ಬೆದರಿಕೆ

ಕರಡು ರಾಜಕೀಯ ನಿರ್ಣಯವೂ, ಮಾಧ್ಯಮವೂ





ತ್ರಿಪುರಾ : 8ನೇ ಎಡರಂಗ ಸರಕಾರ ರಚನೆಗೆ ಹೋರಾಟ



22ನೇ ಸಿಪಿಐ(ಎಂ) ಮಹಾಧಿವೇಶನದತ್ತ:

ಕೇಂದ್ರ ಸಮಿತಿಯಿಂದ ಕರಡು ರಾಜಕೀಯ ಠರಾವು ಅಂಗೀಕಾರ

ಬಿಜೆಪಿಯನ್ನು ಸೋಲಿಸುವುದು ಪ್ರಧಾನ ಕಾರ್ಯಭಾರ, ಕಾಂಗ್ರೆಸಿನೊಂದಿಗೆ ಮೈತ್ರಿ/ರಾಜಕೀಯ ರಂಗ ಇಲ್ಲ-ಯೆಚುರಿ

ಜನವರಿ 19ರಿಂದ 21 ರ ವರೆಗೆ ಕೊಲ್ಕತದಲ್ಲಿ ನಡೆದ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸಭೆ ಪಕ್ಷದ 22ನೇ ಮಹಾಧಿವೇಶನದಲ್ಲಿ ಮಂಡಿಸಬೇಕಾದ ರಾಜಕೀಯ ಠರಾವಿನ ಕರಡನ್ನು ಚರ್ಚಿಸಿ ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕರಿಸಿದೆ. ಈ ಕರಡನ್ನು ಪಕ್ಷದಲ್ಲಿ ಚರ್ಚಿಸಲು, ಮಹಾಧಿವೇಶನಕ್ಕೆ ನಿಗದಿ ಪಡಿಸಿದ ದಿನಾಂಕಗಳಿಗಿಂತ ಎರಡು ತಿಂಗಳ ಮೊದಲು ಬಿಡುಗಡೆ ಮಾಡಲಾಗುವುದು ಎಂದು ಕೇಂದ್ರ ಸಮಿತಿಯ ಹೇಳಿಕೆ ತಿಳಿಸಿದೆ.

ಇದನ್ನು ದೇಶಾದ್ಯಂತ ಪಕ್ಷದ ಸದಸ್ಯರು ಎಲ್ಲ ಘಟಕಗಳಲ್ಲಿ ಆಮೂಲಾಗ್ರವಾಗಿ ಚರ್ಚಿಸಿ ಕೇಂದ್ರ ಸಮಿತಿಗೆ ತಿದ್ದುಪಡಿಗಳನ್ನು ಕಳಿಸುತ್ತಾರೆ. ಇವನ್ನು ಮಹಾಧಿವೇಶನದ ಮುಂದಿಡಲಾಗುವುದು. 22ನೇ ಮಹಾಧಿವೇಶನ ಹೈದರಾಬಾದಿನಲ್ಲಿ ಎಪ್ರಿಲ್ 18ರಿಂದ 22 ರ ವರೆಗೆ ನಡೆಯಲಿದೆ.

ಆಂತರಿಕ-ಪ್ರಜಾಪ್ರಭುತ್ವದ ಉನ್ನತ ಮಟ್ಟದ ನಿರ್ವಹಣೆ



ಈ ಸಭೆಯ ನಂತರ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಮಾಧ್ಯಮ ವ್ಯಕ್ತಿಗಳಿಗೆ ಈ ಪ್ರಕ್ರಿಯೆಯನ್ನು ವಿವರಿಸುತ್ತ, ನಾಲ್ಕು ತಿಂಗಳ ಚರ್ಚೆಗಳು ಮತ್ತು ಮೂರನೇ ಕೇಂದ್ರ ಸಮಿತಿಯ ಸಭೆಯ ನಂತರ ಈ ಕರಡು ರಾಜಕೀಯ ಠರಾವನ್ನು ಕೇಂದ್ರ ಸಮಿತಿ ಅಂಗೀಕರಿಸಿದೆ ಎಂದರು. ಪೊಲಿಟ್‌ಬ್ಯುರೊ ಮಂಡಿಸಿದ ಕರಡಿಗೆ ಸಭೆಯಲ್ಲಿ ಸೂಚಿಸಿದ ತಿದ್ದುಪಡಿಗಳ ಮೇಲೆ ಮತದಾನ ನಡೆದು ಕರಡನ್ನು ಬಹುಮತದ ನಿರ್ಣಯದಿಂದ ಅಂಗೀಕರಿಸಲಾಗಿದೆ ಎಂದು ತಿಳಿಸುತ್ತ, ಈ ಅಂಗೀಕಾರ ಪ್ರಕ್ರಿಯೆಯನ್ನು ಅತ್ಯುನ್ನತ ಮಟ್ಟದ ಆಂತರಿಕ ಪ್ರಜಾಪ್ರಭುತ್ವದಿಂದ ನಿಭಾಯಿಸಲಾಗಿದೆ ಎಂದು ಯೆಚುರಿ ಹೇಳಿದರು.

ಕರಡಿನ ಬಗ್ಗೆ ವಿವರಣೆ ನೀಡುತ್ತ ಅವರು ಈಗಿನ ಪ್ರಧಾನ ಕಾರ್ಯಭಾರ ಎಂದರೆ ಬಿಜೆಪಿಯನ್ನು ಮತ್ತು ಅದರ ಸರಕಾರವನ್ನು ಸೋಲಿಸುವುದು ಎಂದು ಕರಡು ಹೇಳುತ್ತದೆ ಎಂದರು. ಬಿಜೆಪಿ ಭಾರತೀಯ ಜನತೆಯ ಮೇಲೆ ನಾಲ್ಕು ರೀತಿಗಳಲ್ಲಿ ದಾಳಿ ನಡೆಸುತ್ತಿದೆ.



ಮೊದಲನೆಯದಾಗಿ, ಆರ್ಥಿಕ ದಾಳಿ. ಬಿಜೆಪಿ ಕೊಟ್ಟ ಎಲ್ಲ ಭರವಸೆಗಳೂ ಟೊಳ್ಳೆಂದು ಸಾಬೀತಾಗಿವೆ. ರೈತಾಪಿ ಜನಗಳು ಬಿಕ್ಕಟ್ಟಿಗೊಳಗಾಗಿದ್ದಾರೆ, ನಿರುದ್ಯೋಗ ಪರಿಸ್ಥಿತಿ ಹದಗೆಡುತ್ತಿದೆ, ಬಡವರು ಮತ್ತು ಶ್ರೀಮಂತರ ನಡುವಿನ ಕಂದರ ಹಿಂದೆಂದೂ ಕಾಣದ ಮಟ್ಟಕ್ಕೆ ಬೆಳೆದಿದೆ.

ಎರಡನೆಯ ದಾಳಿ ಹಿಂದುತ್ವ ಪಡೆಗಳಿಂದ ಕೋಮುವಾದೀಕರಣ ಮತ್ತು ಧ್ರುವೀಕರಣ. ಇದು ದೇಶದ ಸಮಗ್ರತೆಗೇ ಬೆದರಿಕೆಯೊಡ್ಡಿದೆ.

ಮೂರನೆಯ ದಾಳಿಯ ರಂಗವೆಂದರೆ ಸಂಸದೀಯ ಪ್ರಜಾಪ್ರಭುತ್ವ. ಸಂಸದೀಯ ಸಂಸ್ಥೆಗಳ ಮೇಲೆ ಸರ್ವಾಧಿಕಾರಶಾಹೀ ಹಲ್ಲೆಗಳು ಎಲ್ಲೆಡೆಗಳಲ್ಲಿ ವ್ಯಕ್ತಗೊಳ್ಳುತ್ತಿವೆ-ಮಾಧ್ಯಮಗಳಲ್ಲಿ, ಸುಪ್ರಿಂ ಕೋರ್ಟಿನಲ್ಲಿ, ಸಂಶೋಧನಾ ಸಂಸ್ಥೆಗಳಲ್ಲಿ. ಚಲನಚಿತ್ರ ಬಿಡುಗಡೆಯ ಪ್ರಾಧಿಕಾರವನ್ನೂ ಬಿಜೆಪಿ ರಾಜ್ಯಸರಕಾರಗಳು ಉಲ್ಲಂಘಿಸುತ್ತಿವೆ.

ನಾಲ್ಕನೆಯದೆಂದರೆ, ಅಮೆರಿಕನ್ ಹಿತಾಸಕ್ತಿಗಳಿಗೆ ಸಂಪೂರ್ಣ ಶರಣಾಗತಿ. ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮರಿಕ ಮಿತ್ರನಾಗಿ ಸರಕಾರ ಅವರ ಗರಿಷ್ಟ ಲಾಭಕ್ಕೆ ಆರ್ಥಿಕದ ಎಲ್ಲ ವಲಯಗಳನ್ನು ತೆರೆದು ಕೊಡುತ್ತಿದೆ. ರಕ್ಷಣೆ, ಹಣಕಾಸು ವಲಯ ಮತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ(ಎಫ್‌ಡಿಐ)ಗಳಿಗೆ ಅವಕಾಶ ನೀಡಲಾಗಿದೆ.

ಇಂತಹ ಸನ್ನಿವೇಶದಲ್ಲಿ ನಾವು ಬಿಜೆಪಿಯ ವಿರುದ್ಧ ಎಲ್ಲ ಜಾತ್ಯತೀತ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಅಣಿನೆರೆಸ ಬಯಸುತ್ತೇವೆ ಎಂದು ಯೆಚುರಿ ಹೇಳಿದರು. ಬಿಜೆಪಿಯ ವಿರುದ್ಧ ಗರಿಷ್ಟ ಶಕ್ತಿಯನ್ನು ಸೇಳೆಯಲು ಸೂಕ್ತ ಚುನಾವಣಾ ತಂತ್ರಗಳನ್ನು ಕೈಗೊಳ್ಳಲಾಗುವುದು ಎಂದು ಈ ಕರಡಿನಲ್ಲಿ ಹೇಳಿದ್ದೇವೆ ಎಂದ ಅವರು ಕಾಂಗ್ರೆಸ್ ಪಕ್ಷದೊಂದಿಗೆ ರಾಜಕೀಯ ರಂಗವಾಗಲೀ, ಮೈತ್ರಿಯಾಗಲೀ ಇಲ್ಲ ಎಂದು ಹೇಳಿದರು.

ಕೇಂದ್ರ ಸಮಿತಿ ಮುಂಬರುವ ಮೂರು ರಾಜ್ಯಗಳ ಚುನಾವಣೆಗಳ ಬಗ್ಗೆ, ಅದರಲ್ಲೂ ತ್ರಿಪುರಾದಲ್ಲಿ ಚುನಾವಣೆಯ ಬಗ್ಗೆ ಚರ್ಚಿಸಿತು ಎಂದು ಯೆಚುರಿ ತಿಳಿಸಿದರು. ತ್ರಿಪುರಾದಲ್ಲಿ ಬಿಜೆಪಿ ಎಡ-ವಿರೋಧಿ ಧ್ರುವವಾಗಿ ಮೂಡಿ ಬರುತ್ತಿದೆ. ಅವರು ಎಲ್ಲ ರೀತಿಗಳ ವಿಚ್ಛಿದ್ರಕಾರಿ ಮತ್ತು ಉಗ್ರಗಾಮಿ ಶಕ್ತಿಗಳನ್ನು ಕಲೆ ಹಾಕುತ್ತಿದ್ದಾರೆ. ಒಂದೆಡೆಯಲ್ಲಿ ಬಿಜೆಪಿ ದೇಶಾದ್ಯಂತ ತಮ್ಮ ನಮೂನೆಯ ದೇಶಪ್ರೇಮವನ್ನು ಪ್ರತಿಪಾದಿಸುತ್ತ ರಾಷ್ಟ್ರೀಯವಾದದ ಡಂಗುರ ಸಾರುತ್ತಿದ್ದಾರೆ. ಇನ್ನೊಂದೆಡೆಯಲ್ಲಿ ತ್ರಿಪುರಾವನ್ನು ಭಾರತದಿಂದ ಪ್ರತ್ಯೇಕಿಸುವ ಆಗ್ರಹದೊಂದಿಗೆ ತನ್ನ ಪಯಣವನ್ನು ಆರಂಭಿಸಿರುವ ಐಪಿಎಫ್‌ಟಿ ಯೊಂದಿಗೆ ಕೈಜೋಡಿಸುತ್ತಿದ್ದಾರೆ. ಎಡಶಕ್ತಿಗಳಿಗೆ ಎದುರಾಗಿ ಬಿಜೆಪಿ ಯಾವ ಮಟ್ಟಕ್ಕೂ ಹೋಗಲು ಸಿದ್ಧ ಎಂಬುದನ್ನು ಇದು ತೋರಿಸುತ್ತದೆ ಎಂದು ಯೆಚುರಿಯವರು ಹೇಳಿದರು. ಅವರು ಉದ್ವಿಗ್ನತೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ, ಆದರೆ ಜನತೆ ಅವನ್ನು ವಿಫಲಗೊಳಿಸಿದ್ದಾರೆ, ಎಡರಂಗ ಬಿಜೆಪಿಯನ್ನು ಸೋಲಿಸುವ ಸವಾಲನ್ನು ಕೈಗೆತ್ತಿಕೊಳ್ಳುತ್ತದೆ ಎಂದು ಸೀತಾರಾಮ್ ಯೆಚುರಿಯವರು ಹೇಳಿದರು.

ಆಧಾರಹೀನ ಊಹಾಪೋಹಗಳು



ಸಿಪಿಐ(ಎಂ) ಕೇಂದ್ರಸಮಿತಿ ಪಕ್ಷದ 22ನೇ ಮಹಾಧಿವೇಶನದ ರಾಜಕೀಯ ಠರಾವಿನ ಕರಡನ್ನು ಅಂಗೀಕರಿಸುರಯವ ಸಂದರ್ಭದಲ್ಲಿ ಮಾಧ್ಯಮಗಳಲ್ಲಿ ಪಕ್ಷದೊಳಗೆ 'ಬಿಕ್ಕಟ್ಟು' ಮತ್ತು ಗುಂಪುಗಾರಿಕೆಯ ವಿವಾದಗಳಿವೆ ಎಂದು ಲಂಗುಲಗಾಮಿಲ್ಲದ, ಆಧಾರಹೀನ ಊಹಾಪೋಹಗಳು ಹರಡಿವೆ. ಇದು ಒಂದು ಕಮುನಿಸ್ಟ್ ಪಕ್ಷವಾಗಿ ಸಿಪಿಐಎಂ)ನ ಚೈತನ್ಯಪೂರ್ಣ ಆಂತರಿಕ ಪ್ರಜಾಪ್ರಭುತ್ವದ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದನ್ನು ತೋರಿಸುತ್ತದೆ.

ಪ್ರಕಾಶ ಕಾರಟ್

ಸಿಪಿಐ(ಎಂ)ನ 22ನೇ ಮಹಾಧಿವೇಶನಕ್ಕೆ ಕರಡು ರಾಜಕೀಯ ಠರಾವನ್ನು ಜನವರಿ 21ರಂದು ಕೊಲ್ಕತಾದಲ್ಲಿ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ ಬಹುಮತದಿಂದ ಅಂಗೀಕರಿಸಿದ್ದು ಮಾಧ್ಯಮಗಳಲ್ಲಿ ಮತ್ತು ರಾಜಕೀಯ ವಲಯಗಳಲ್ಲಿ ಬಹಳಷ್ಟು ಟಿಪ್ಪಣಿಗಳನ್ನು ಎಬ್ಬಿಸಿದೆ.

ಕೇಂದ್ರ ಸಮಿತಿಯ ಸಭೆಯ ಮೊದಲೇ ಅದರ ಮುಂದೆ ಒಂದು ಪೊಲಿಟ್‌ಬ್ಯುರೊ ಕರಡು ನಿರ್ಣಯ ಮತ್ತು ಒಂದು ಅಲ್ಪಮತದ ಕರಡು ನಿರ್ಣಯವನ್ನು ಮಂಡಿಸಲಾಗುವುದು ಎಂದು ತಿಳಿದು ಬಂದಾಗ ಮುಖ್ಯಧಾರೆಯ ಮಾಧ್ಯಮಗಳಲ್ಲಿ ಬಹಳಷ್ಟು ಮಂದಿಗೆ ಒಂದು ಕಮ್ಯುನಿಸ್ಟ್ ಪಕ್ಷವಾಗಿ ಸಿಪಿಐ(ಎಂ)ನ ಕಾರ್ಯನಿರ್ವಹಣೆಯ ಶೈಲಿಯ ಬಗ್ಗೆ ಸರಿಯಾದ ಮಾಹಿತಿ ಇರಲಿಲ್ಲ, ಅಥವ ಅವರು ಪಕ್ಷದ ಮುಖಂಡತ್ವವನ್ನು ಕೆಟ್ಟದಾಗಿ ಚಿತ್ರಿಸುವ ಉದ್ದೇಶದಿಂದ ದುರುದ್ದೇಶಪೂರಿತ ಮತ್ತು ವಿಕೃತ ತೀರ್ಮಾನಗಳಿಗೆ ಬರಲು ಈ ಸಂದರ್ಭವನ್ನು ಬಳಸಿಕೊಂಡಿದ್ದಾರೆ.

ಉದಾಹರಣೆಗೆ, ಮಾಧ್ಯಮಗಳಲ್ಲಿ, ಅದರಲ್ಲೂ ಪಶ್ಚಿಮ ಬಂಗಾಲದಲ್ಲಿ ಮತ್ತು ಕೇರಳದಲ್ಲಿ, ಕಾಣ ಬಂದ ಸಾಮಾನ್ಯ ವಿಷಯ ಎಂದರೆ ಕೇಂದ್ರ ಸಮಿತಿಯ ಸಭೆಯಲ್ಲಿ "ಎರಡು ಗುಂಪುಗಳು" ಎರಡು ಕರಡುಗಳನ್ನು ಮಂಡಿಸಿದವೆಂದು ಬಿಂಬಿಸುವುದು. ಕೆಲವರು ಇನ್ನೂ ಮುಂದೆ ಹೋಗಿ ಇದನ್ನು ಇಬ್ಬರು ವ್ಯಕ್ತಿಗಳ ನಡುವಿನ, ಇಲ್ಲಿ ಪ್ರಸಕ್ತ ಪ್ರಧಾನ ಕಾರ್ಯದರ್ಶಿಗಳು ಮತ್ತು ಹಿಂದಿನ ಪ್ರಧಾನ ಕಾರ್ಯದರ್ಶಿಗಳ ನಡುವಿನ ತಿಕ್ಕಾಟ ಎಂದು ಬಿಂಬಿಸಿದವು.

ಇದು ಆಧಾರಹೀನ ಮತ್ತು ತಪ್ಪು ಚಿತ್ರಣ. ಏಕೆಂದರೆ ಇಲ್ಲಿ ಪಕ್ಷದೊಳಗಿನ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಭಿನ್ನ ರಾಜಕೀಯ ಅಭಿಪ್ರಾಯಗಳು ಮತ್ತು ನಿಲುವುಗಳನ್ನು ವ್ಯಕ್ತಿಗತ ತಿಕ್ಕಾಟಗಳು ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯಗಳ ಮಟ್ಟಕ್ಕೆ ಇಳಿಸಲಾಗಿದೆ. ಇನ್ನೊಂದು ತಪ್ಪು, ಮತ್ತು ಸಾಮಾನ್ಯವಾದ ಭಾವನೆಯೆಂದರೆ ಕರಡು ರಾಜಕೀಯ ಠರಾವು ಮುಖ್ಯವಾಗಿ 2019ರ ಲೋಕಸಭಾ ಚುನಾವಣೆಗಳ ವೇಳೆಯಲ್ಲಿ ತಳೆಯಬೇಕಾದ ಚುನಾವಣಾ ತಂತ್ರಕ್ಕೇ ಸಂಬಂಧಪಟ್ಟಿದ್ದು ಎಂಬುದು.

ಸಿಪಿಐ(ಎಂ) ಒಂದು ಕಮ್ಯುನಿಸ್ಟ್ ಪಕ್ಷವಾಗಿ ಕಾರ್ಯನಿರ್ವಹಣೆಯ ಒಂದು ವಿಶಿಷ್ಟ ವಿಧಾನವನ್ನು ಅನುಸರಿಸುತ್ತದೆ. ಅದು ಪ್ರಜಾಸತ್ತಾತ್ಮಕ ಕೇಂದ್ರವಾದದ ಸಂಘಟನಾ ನೀತಿಗಳನ್ನು ಆಧರಿಸಿದೆ. ಇದರ ಅರ್ಥ ಪಕ್ಷದ ಎಲ್ಲ ನೇತೃತ್ವದ ಸಮಿತಿಗಳು ಆಂತರಿಕ ಪ್ರಜಾಪ್ರಭುತ್ವವನ್ನು ಹೊಂದಿವೆ. ಅಲ್ಲಿ ಎಲ್ಲ ರಾಜಕೀಯ ಮತ್ತು ಸಂಘಟನಾತ್ಮಕ ವಿಷಯಗಳನ್ನು ಚರ್ಚಿಸಿ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತದೆ. ರಾಜಕೀಯ ಪ್ರಶ್ನೆಗಳ ಮೇಲೆ ಒಬ್ಬ ಸದಸ್ಯ ಅಥವ ಸದಸ್ಯರ ಒಂದು ಗುಂಪು ತಮ್ಮ ರಾಜಕೀಯ ಅಭಿಪ್ರಾಯಗಳನ್ನು ಸಮಿತಿಯ ಮುಂದೆ ವ್ಯಕ್ತಪಡಿಸಬಹುದು, ಮಂಡಿಸಬಹುದು. ಮುಕ್ತ ಮತ್ತು ನೇರ ಚರ್ಚೆಗಳ ಮೂಲಕ ಸಮಿತಿ ಒಂದು ನಿರ್ಣಯಕ್ಕೆ ಬರುತ್ತದೆ. ಅಗತ್ಯವಿದ್ದರೆ, ನಿರ್ಣಯಕ್ಕೆ ಬರಲು ಮತದಾನ ನಡೆಸಬಹುದು, ಆಗ ಬಹುಮತದ ಅಭಿಪ್ರಾಯ ಸಮಿತಿಯ ಸಾಮೂಹಿಕ ಅಭಿಪ್ರಾಯವಾಗುತ್ತದೆ.

ಒಂದು ಸಮಿತಿಯೊಳಗೆ ಒಂದು ರಾಜಕೀಯ ಪ್ರಶ್ನೆಯ ಮೇಲೆ ಒಂದು ಬಹುಮತದ ಅಭಿಪ್ರಾಯ ಮತ್ತು ಒಂದು ಅಲ್ಪಮತದ ಅಭಿಪ್ರಾಯ ಇರುವುದನ್ನು ಗುಂಪುಗಾರಿಕೆ ಎಂದು ಕಾಣಲಾಗದು. ಪಕ್ಷದ ಸಂವಿಧಾನದ ಪ್ರಕಾರ ಗುಂಪುಗಾರಿಕೆ

ಪುಟ 7 ನೋಡಿ



ತ್ರಿಪುರ ಎಡರಂಗದ ಸಂಯೋಜಕರು ಖಗೇನ್ ದಾಸ್ ನಿಧನ

ತ್ರಿಪುರ ಎಡರಂಗದ ಸಂಯೋಜಕರೂ, ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಅಗಿದ್ದ ಖಗೇನ್ ದಾಸ್ ಜನವರಿ 21ರಂದು ಕೊಲ್ಕತಾದಲ್ಲಿ ನಿಧನರಾಗಿದ್ದಾರೆ. ಅವರಿಗೆ 80 ವರ್ಷ ವಯಸ್ಸಾಗಿತ್ತು. ಸಿಪಿಐ(ಎಂ) ಕೇಂದ್ರ ಸಮಿತಿ ಸಭೆಯಲ್ಲಿ ಭಾಗವಹಿಸಲು ಅವರು ಕೊಲ್ಕತಾಕ್ಕೆ ಬಂದಿದ್ದರು.

ಈಗ ಬಾಂಗ್ಲಾದೇಶದಲ್ಲಿರುವ ಕೊಮಿಲ್ಲಾದಲ್ಲಿ ಜನಿಸಿದ ಖಗೇನ್ ದಾಸ್ ಶಿಕ್ಷಣಕ್ಕಾಗಿ ಕೊಲ್ಕತಾ ಬಂದರು. ಅಲ್ಲಿ ಸ್ನಾತಕೋತ್ತರ ಪದವಿ ಪಡೆದು ಸ್ವಲ್ಪ ಕಾಲ ಕೊಲ್ಕತ ಬಂದರು ಮಂಡಳಿಯಲ್ಲಿ ಕೆಲಸ ಮಾಡಿದ ನಂತರ 1960ರ ದಶಕದಲ್ಲಿ ಅಗರ್ತಲಾಕ್ಕೆ ಹೋಗಿ ಶಾಲಾ ಶಿಕ್ಷಕ ವೃತ್ತಿಯನ್ನು ಕೈಗೊಂಡರು. ಆಗ ಶಿಕ್ಷಕರ ಆಂದೋಲನದತ್ತ ಆಕರ್ಷಿತರಾದ ಅವರು 1968ರಲ್ಲಿ ಸಿಪಿಐ(ಎಂ) ಸೇರಿದರು. ಅವರು ತ್ರಿಪುರಾದಲ್ಲಿ ಡಿವೈಎಫ್‌ಐನ ಸ್ಥಾಪಕ ಕಾರ್ಯದರ್ಶಿ. 1994ರಲ್ಲಿ ಪಕ್ಷದ ರಾಜ್ಯಕಾರ್ಯದರ್ಶಿಮಂಡಳಿಗೆ ಆಯ್ಕೆಯಾದ ಅವರು 2005ರಲ್ಲಿ ಸಿಪಿಐ(ಎಂ)ನ 18ನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಆಯ್ಕೆಯಾದರು.

ತ್ರಿಪುರಾದ ರೈತರ ನಡುವೆ ದುಡಿದ ಖಗೇನ್ ದಾಸ್ 1995ರಿಂದ 2006 ರ ವರೆಗೆ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಕೇಂದ್ರೀಯ ಕಿಸಾನ್ ಮಂಡಳಿ(ಸಿಕೆಸಿ) ಸದಸ್ಯರೂ ಆಗಿದ್ದರು.

ಖಗೇನ್ ದಾಸ್ ಎರಡು ಬಾರಿ, 1978ರಲ್ಲಿ ಮತ್ತು 1983ರಲ್ಲಿ ತ್ರಿಪುರ ವಿಧಾನಸಭೆಗೆ ಚುನಾಯಿತರಾದರು. ಎರಡನೇ ಎಡರಂಗ ಸರಕಾರದಲ್ಲಿ ಅವರು ರೆವಿನ್ಯೂ ಮಂತ್ರಿಗಳಾಗಿಯೂ ದುಡಿದರು. 1996ರಿಂದ 1998ರ ವರೆಗೆ ರಾಜ್ಯಸಭಾ ಸದಸ್ಯರಾಗಿದ್ದ ಇವರು 1998ರ ಲೋಕಸಭಾ ಚುನಾವಣೆಯಲ್ಲಿ ಚುನಾಯಿತರಾಗಿ 2014 ರವರೆಗೂ ಲೋಕಸಭಾ ಸದಸ್ಯರಾಗಿದ್ದರು.

ಕೊಲ್ಕತಾದಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು. ಎಐಕೆಎಸ್ ಕೂಡ ಖಗೇನ್ ದಾಸ್ ತ್ರಿಪುರದಲ್ಲಿ' ಪ್ರತಿಗಾಮಿ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಎದುರಾಗಿ ಹೋರಾಡಿ ದುಡಿಯುವ ಜನಗಳ ಐಕ್ಯತೆಯನ್ನು ಕಟ್ಟಿದವರು ಎಂದು ತನ್ನ ಶ್ರದ್ಧಾಂಜಲಿ ಅರ್ಪಿಸಿದೆ.

ಕೆಲವೇ ದಿನಗಳ ಹಿಂದೆ ಖಗೇನ್ ದಾಸ್ ರಾಜ್ಯದಲ್ಲಿ 8ನೇ ಎಡರಂಗ ಸರಕಾರವನ್ನು ಸ್ಥಾಪಿಸಲು ಸರ್ವ ಪ್ರಯತ್ನ ನಡೆಸಬೇಕು ಎಂದು ತ್ರಿಪುರಾದ ಜನತೆಗೆ ಕರೆ ನೀಡಿದ್ದರು.

ಅಗರ್ತಲಾದಲ್ಲಿ 80 ಕೆಂಬಾವುಟಗಳನ್ನು ಹಿಡಿದ ಸ್ವಯಂಸೇವಕರನ್ನು ಅನುಸರಿಸಿ ನಡೆದ ಅವರ ಅಂತಿಮ ಯಾತ್ರೆ ತಲುಪಿದ್ದು ಅಗರ್ತಲಾ ಮೆಡಿಕಲ್ ಕಾಲೇಜ್ ಆಸ್ಪತ್ರೆಯನ್ನು. ಅವರ ಇಚ್ಛೆಯಂತೆ ಅವರ ಇಡೀ ದೇಹವನ್ನು ವೈದ್ಯಕೀಯ ಸಂಶೋಧನೆಗೆ ದಾನ ಮಾಡಲಾಯಿತು.

ಸಂಪಾದಕೀಯ

ಜನತೆಯ 'ಸ್ವಾತಂತ್ರ್ಯ ಉದ್ಯಾನ' ಕಸಿಯುವ ಹುನ್ನಾರ ನಿಲ್ಲಿಸಿ!

ಬೆಂಗಳೂರು ನಗರ ಕೇಂದ್ರದಲ್ಲಿರುವ 'ಸ್ವಾತಂತ್ರ್ಯ ಉದ್ಯಾನ' (ಫ್ರೀಡಂ ಪಾರ್ಕ್)ವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಪ್ರವಾಸೋದ್ಯಮ ಇಲಾಖೆ ಯೋಜಿಸಿದೆ. ಈ ಜಾಗವನ್ನು ಇಲಾಖೆಗೆ ವರ್ಗಾಯಿಸಲು ಅದು ಬಿ.ಬಿ.ಎಂ.ಪಿ.ಯನ್ನು ಕೇಳಿಕೊಂಡಿದೆ. ಜನವರಿ 29ರಂದು ನಡೆಯಲಿರುವ ಬಿ.ಬಿ.ಎಂ.ಪಿ. ಕೌನ್ಸಿಲ್ ಸಭೆಯಲ್ಲಿ ಇದಕ್ಕೆ ಒಪ್ಪಿಗೆ ಕೊಡಲು ಸಿದ್ಧತೆ ನಡೆದಿದೆ ಎಂದು ವರದಿಯಾಗಿದೆ. ರಾಜ್ಯ ಸರಕಾರದ ಒಪ್ಪಿಗೆಯೂ ಇದಕ್ಕಿದೆ ಎಂದು ಹೇಳಲಾಗಿದೆ. ಇದಕ್ಕೆ ಜನತೆಯ ದನಿಯಾಗಿ ಕೆಲಸ ಮಾಡುವ ಟ್ರೇಡ್ ಯೂನಿಯನುಗಳು, ರೈತ–ಕೃಷಿಕೂಲಿ– ದಲಿತ ಸಂಘಟನೆಗಳು, ವಿದ್ಯಾರ್ಥಿ–ಯುವಜನ–ಮಹಿಳಾ ಸಂಘಟನೆಗಳು, ಸಾಮಾಜಿಕ ಚಳುವಳಿಗಳು, ರಾಜಕೀಯ ಸಂಘಟನೆಗಳು, ಪ್ರಗತಿಪರ ವ್ಯಕ್ತಿಗಳು ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ನಗರದಲ್ಲಿ ಈಗ ಜನತೆಯ ಪ್ರತಿಭಟನೆಯ ಅಭಿವ್ಯಕ್ತಿಗೆ 'ಸ್ವಾತಂತ್ರ್ಯ ಉದ್ಯಾನ'ದಲ್ಲಿ ಮಾತ್ರ ಅವಕಾಶ ಕೊಡಲಾಗುತ್ತಿದ್ದು, ಅದನ್ನು ಕಸಿದುಕೊಳ್ಳಲಾಗುತ್ತಿರುವುದರ ಬಗ್ಗೆ ಈಗಾಗಲೇ ಮೇಲೆ ಹೇಳಿದ ಸಂಘಟನೆಗಳ ಒಕ್ಕೂಟವೂ 'ಸ್ವಾತಂತ್ರ್ಯ ಉದ್ಯಾನ ಉಳಿಸಿ ಹೋರಾಟ ಸಮಿತಿ'ಯ ಹೆಸರಲ್ಲಿ ರಚಿತವಾಗಿದ್ದು, ಒಂದು ಪತ್ರಿಕಾ ಗೋಷ್ಠಿ ನಡೆಸಿ ಹೋರಾಟಗಳ ಘೋಷಣೆ ಮಾಡಿದೆ. ಮೊದಲ ಕ್ರಮವಾಗಿ ಜನವರಿ 27ರಂದು (ಫ್ರೀಡಂ ಪಾರ್ಕ್‌ನಲ್ಲಿರುವ ಭಗತ್ ಸಿಂಗ್ ಪ್ರತಿಮೆ ಎದುರು ಜಂಟಿ ಪ್ರತಿಭಟನೆ ಮಾಡುವುದಾಗಿ ಸಮಿತಿ ಹೇಳಿದೆ. ಆದರೆ ಬಿ.ಬಿ.ಎಂ.ಪಿ. ಪ್ರವಾಸೋದ್ಯಮ ಇಲಾಖೆಗೆ ವರ್ಗಾಯಿಸುವ ಅಥವಾ ಹೋರಾಟಗಳಿಗೆ ಅವಕಾಶ ವಂಚನೆ ಮಾಡುವ ಯಾವುದೇ ಪ್ರಸ್ತಾವವಿಲ್ಲ ಎಂದಿದೆ.

ಆದರೆ ಇತ್ತೀಚಿನ ವರ್ಷಗಳಲ್ಲಿ ಜನತಾ ಚಳುವಳಿಗಳು ಹೋರಾಟಗಳ ಬಗ್ಗೆ ಸರಕಾರಗಳ ಧೋರಣೆ ನೋಡಿದರೆ ಮತ್ತು ದೇಶದ ಇತರೆಡೆ ಇಂತಹುದೇ ಧೋರಣೆಗಳನ್ನು ಗಮನಿಸಿದರೆ ಈ ಸುದ್ದಿ ನಿಜವಲ್ಲ ಎಂದು ತಳ್ಳಿ ಹಾಕಲು ಸಾಧ್ಯವಿಲ್ಲ. ಜನತಾ ಚಳುವಳಿಗಳು ಹೋರಾಟಗಳ ಸ್ವಾತಂತ್ರ್ಯ ಹಾಗೂ ಮುಕ್ತ ಅವಕಾಶಗಳ ಮೇಲೆ ಸತತವಾಗಿ ಹೆಚ್ಚೆಚ್ಚು ನಿರ್ಬಂಧಗಳನ್ನು ಹೊರಿಸುತ್ತಾ ಬಂದಿದೆ. ಸಾರ್ವಜನಿಕ ಸ್ಥಳದಲ್ಲಿ ನಡೆಯುವ ಎಲ್ಲಾ ಸಣ್ಣ ದೊಡ್ಡ ಕಾರ್ಯಕ್ರಮಗಳಿಗೂ ಪೋಲಿಸ್ ಅನುಮತಿ ಪಡೆಯಬೇಕು, ಮತ್ತು ಅದನ್ನು ಪಡೆಯುವಲ್ಲಿ ಇರುವ ವ್ಯಾಪಕ ತಾಳ್ಮೆಗೆಡಿಸುವ ತೀವ್ರ ವಿಳಂಬ ಈಗಾಗಲೇ ಚಳುವಳಿಗಳ ಹೋರಾಟಗಳ ಸ್ವಾತಂತ್ರ್ಯ ಹಾಗೂ ಮುಕ್ತ ಅವಕಾಶಗಳನ್ನು ಸಾಕಷ್ಟು ಮೊಟಕುಗೊಳಿಸಿದೆ. ಆದರೆ ಅದೇ ಸಮಯದಲ್ಲಿ ಜನ–ವಿರೋಧಿ, ಕೋಮುವಾದಿ ಚಳುವಳಿಗಳಿಗೆ, ಸಮಾಜ–ವಿರೋಧ ಶಕ್ತಿಗಳಿಗೆ ಇಂತಹ ನಿರ್ಬಂಧಗಳು ಲಗಾವಾಗುವಂತೆ ಕಾಣಲಿಲ್ಲ.

ಮೊದಲು ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆಗಳಿಗೆ ವಿಧಾನ ಸೌಧದ ಎದುರೂ ಹಾಗೂ ಕಬ್ಬನ್ ಪಾರ್ಕಿನಲ್ಲೂ ಅವಕಾಶ ಇತ್ತು. ಅದರ ಮೇಲೆ ನಿರ್ಬಂಧ ಹೊರಿಸಿ, ಪ್ರತಿಭಟನೆ ಪ್ರದರ್ಶನಗಳ ಸ್ಥಳವನ್ನು ಕೆ. ಆರ್. ಸರ್ಕಲ್ ಗೆ ವರ್ಗಾಯಿಸಲಾಯಿತು. ಆ ಮೇಲೆ 'ಸ್ವಾತಂತ್ರ್ಯ ಉದ್ಯಾನ'ಕ್ಕೆ ವರ್ಗಾಯಿಸಲಾಯಿತು. 'ಸ್ವಾತಂತ್ರ್ಯ ಉದ್ಯಾನ' ಹಿಂದೆ ಕೇಂದ್ರೀಯ ಜೈಲು ಇದ್ದ ಜಾಗವಾಗಿದ್ದು ಜೈಲು ಪರಪ್ಪನ ಅಗ್ರಹಾರಕ್ಕೆ ವರ್ಗಾಯಿಸುವಾಗಲೇ ಹೊಸ ಉದ್ಯಾನವನ್ನು ಜನತೆಯ ಸ್ವತಂತ್ರ ಅಭಿವ್ಯಕ್ತಿಗೆ ಮುಕ್ತ ಅವಕಾಶ ಕೊಡುವ ಪಾರ್ಕ್ ಆಗಿ ಅಭಿವೃದ್ಧಿಪಡಿಸುವುದಾಗಿ ಆಶ್ವಾಸನೆ ಕೊಡಲಾಗಿತ್ತು. ಆದರೆ 'ಸ್ವಾತಂತ್ರ್ಯ ಉದ್ಯಾನ' ವಾಣಿಜ್ಯ ಚಟುವಟಿಕೆಗಳಿಗೆ 'ಸಂತೆ' 'ಫೇರ್' ಗಳಿಗೆ ಹೆಚ್ಚೆಚ್ಚು ಬಳಕೆಯಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹತ್ತಾರು ಸಾವಿರ ಜನರ ಭಾರೀ ಪ್ರತಿಭಟನೆಗಳ ತಾಣವಾಗುತ್ತಿರುವ 'ಪಾರ್ಕ್' ಹತ್ತಿರವೇ ಅಧಿಕಾರ ಕೇಂದ್ರದಲ್ಲಿರುವ ಆಳುವ ವರ್ಗಗಳ ಪ್ರತಿನಿಧಿಗಳಾದ ರಾಜಕಾರಣಿಗಳ ಅಧಿಕಾರಶಾಹಿಯ 'ನೆಮ್ಮದಿ' ಕೆಡಿಸಿರಬೇಕು. ಆದ್ದರಿಂದಲೆ ಈ ಜಾಗವನ್ನು ಹೋರಾಟಗಾರರಿಂದ ಕಸಿದುಕೊಳ್ಳುವ ಹುನ್ನಾರ ನಡೆದಿದೆ.

ಈ ಹುನ್ನಾರವನ್ನು ನವ–ಉದಾರವಾದಿ ನೀತಿಗಳನ್ನು ಜನತೆಯ ಮೇಲೆ ಹೊರಿಸುವ ಹಿನ್ನೆಲೆಯಲ್ಲಿ ನೋಡಬೇಕು. ಆ ನೀತಿಗಳ ದುಷ್ಪರಿಣಾಮಗಳ ವಿರುದ್ಧ ಜನತೆಯ ಆಕ್ರೋಶದ ಅಭಿವ್ಯಕ್ತಿ ತಡೆಯಲು, ಪ್ರಜಾಪ್ರಭುತ್ವವನ್ನು ಬರಿಯ ಹಣ–ತೋಳ್ಬಲಗಳ ಮೇಲೆ ನಡೆಯುವ ಚುನಾವಣೆಗೆ ಸೀಮಿತಗೊಳಿಸುವ, ಜನತೆಯ ಇತರ ಅಭಿವ್ಯಕ್ತಿಯ ಅವಕಾಶಗಳನ್ನು ಹೊಸಕಿ ಹಾಕುವ, ಪ್ರಜಾಪ್ರಭುತ್ವದ ಮೇಲೆ ಆಳುವ ವರ್ಗಗಳ ಸಮಗ್ರ ದಾಳಿಯ ಹಿನ್ನೆಲೆಯಲ್ಲಿ ನೋಡಬೇಕು. ದೆಹಲಿಯಲ್ಲಿ ಪ್ರಸಿದ್ಧ ಜಂತರ್ ಮಂತರ್ ನಲ್ಲಿ ಪರಿಸರ ಮಾಲಿನ್ಯದ ಹೆಸರಲ್ಲಿ ಪ್ರತಿಭಟನೆಗಳನ್ನು ನಿಷೇಧಿಸಿರುವುದು, ಹೈದರಾಬಾದಿನಲ್ಲಿ "ಧರಣಿ ಚೌಕ" ಎಂದೇ ಪ್ರಸಿದ್ಧವಾದ ತಾಣದಲ್ಲಿ ಇದೇ ರೀತಿ ಪ್ರತಿಭಟನೆಗಳ ಮೇಲೆ ನಿಷೇಧ ಹೇರಲಾಯಿತು. ಈ ಎರಡರಲ್ಲೂ ಪ್ರತಿಭಟನೆಗಳನ್ನು ನಗರ ಕೇಂದ್ರದಿಂದ ಜನತೆಯ ಗಮನ ಸೆಳೆಯದ ದೂರದ ಜಾಗಕ್ಕೆ ಸಾಗ ಹಾಕುವ ಪ್ರಯತ್ನ ನಡೆಯಿತು, ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.


ಜನತೆಯಿಂದ 'ಸ್ವಾತಂತ್ರ್ಯ ಉದ್ಯಾನ' ಕಸಿಯುವ ಹುನ್ನಾರ ನಿಲ್ಲಿಸುವಂತೆ ಎಲ್ಲಾ ಪ್ರಗತಿಪರ ಜನತಾ ಚಳುವಳಿಗಳು ಹೋರಾಟಗಾರರು ಸಂಘಟನೆಗಳು ರಾಜ್ಯ ಸರಕಾರದ ಮೇಲೆ ಒತ್ತಡ ಹೇರಬೇಕು.

ಮಾತೆಂದರೆ ಇದು

ಕೈಗಾರಿಕಾ ಮೀಸಲು ಪಡೆ

ಶ್ರಮಿಕ ಸಮುದಾಯ, ಬಂಡವಾಳಶಾಹಿ ಆಧಾರದ ಮೇಲಿನ ಸಂಚಯದ ಅಥವಾ ಸಂಪತ್ತಿನ ಅಭಿವೃದ್ಧಿಯ ಅಗತ್ಯ ಉತ್ಪನ್ನವಾಗಿದ್ದರೆ, ಈ ಮಿಗುತಾಯ ಜನಸಂಖ್ಯೆಯು ವ್ಯತಿರಿಕ್ತ ರೀತಿಯಲ್ಲಿ ಬಂಡವಾಳ ಸಂಚಯದ ಸನ್ನೆಗೋಲಾಗುತ್ತದೆ, ಅಲ್ಲ, ಬಂಡವಾಳಶಾಹಿ ಉತ್ಪಾದನಾ ವಿಧಾನದ ಅಸ್ತಿತ್ವದ ಸ್ಥಿತಿಯಾಗುತ್ತದೆ. ಅದು (ಮಿಗುತಾಯ ಜನಸಂಖ್ಯೆ) ಬಂಡವಾಳವು ತನ್ನದೇ ಖರ್ಚಿನಲ್ಲಿ ಬೆಳೆಸಿ ತನಗೇ ಸಂಪೂರ್ಣವಾಗಿ ಸೇರಿದ್ದೆಂಬಂತೆ ಬೇಡವೆಂದಾಗ ಎಸೆದು ಬಿಡಬಹುದಾದ ಕೈಗಾರಿಕಾ ಮೀಸಲು ಪಡೆಯೂ ಆಗಿರುತ್ತದೆ.

– ಕಾರ್ಲ್ ಮಾರ್ಕ್ಸ್
(ಬಂಡವಾಳ ಸಂ.1)



ಕೇಳಿಸಿದ್ದು

ಧರ್ಮಕ್ಷೇತ್ರಕ್ಕೆ ಕಾಲಿಟ್ಟ ಮಂಗನ ಕಾಯಿಲೆ

– ನಾಗೇಶ ಹೆಗಡೆ

ತಿಳಿಗೊಳಕ್ಕೆ ಕಲ್ಲೆಸೆಯುವುದೆಂದರೆ ನಮ್ಮ ಸಚಿವ ಪುಂಗವರಿಗೆ ಅದೆಂಥ ಮೋಹವೋ ಏನೊ.

'ಮಂಗನಿಂದ ಮಾನವ ಎಂಬ ಡಾರ್ವಿನ್ ಸಿದ್ಧಾಂತ ವೈಜ್ಞಾನಿಕವಾಗಿ ತಪ್ಪು! ಮಂಗವೊಂದು ಮಾನವನಾಗಿ ಬದಲಾಗಿದ್ದನ್ನು ಯಾರೂ ನೋಡಿಲ್ಲ. ಈಗಿನವರೂ ನೋಡಿಲ್ಲ; ಹಿಂದಿನ ಯಾರೂ ನೋಡಿಲ್ಲ. ಮನುಷ್ಯ ಆರಂಭದಿಂದಲೂ ಮನುಷ್ಯ ರೂಪದಲ್ಲೇ ಇದ್ದಾನೆ'– ಹೀಗೆಂದರು, ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಖಾತೆಯ ಕಿರಿಯ ಸಚಿವ ಡಾ. ಸತ್ಯಪಾಲ್ ಸಿಂಗ್.

ಮಹಾರಾಷ್ಟ್ರದ ಔರಂಗಾಬಾದ್ ನಲ್ಲಿ ಕಳೆದ ಶನಿವಾರ ನಡೆದಿದ್ದ ಅಖಿಲ ಭಾರತ ವೈದಿಕ ಸಮ್ಮೇಳನದಲ್ಲಿ ಆಡಿದ ಅವರ ಈ ಮಾತುಗಳು ಜೇನುಗೂಡಿಗೆ ಕಲ್ಲೆಸೆದಂತಾಗಿದೆ. ರಾಷ್ಟ್ರದ ಶಿಕ್ಷಣ ವ್ಯವಸ್ಥೆಯನ್ನು ನೋಡಿಕೊಳ್ಳಬೇಕಾದ ಸಚಿವರು ಇಂಥ ಅವೈಜ್ಞಾನಿಕ ಹೇಳಿಕೆಯನ್ನು ನೀಡಬಹುದೆ? ಅದನ್ನು ಖಂಡಿಸುವ, ಲೇವಡಿ ಮಾಡುವ ಟ್ವೀಟ್ ಗಳು ಹರಿದಾಡಿದವು. 'ಅಂತೂ ಬಿಜೆಪಿಯವರೂ ಕ್ರಿಶ್ಚಿಯನ್ ಮತ್ತು ಇಸ್ಲಾಮಿಕ್ ಮೂಲಭೂತವಾದಿಗಳ ಜೊತೆ ಕೈಜೋಡಿಸಿದರು' ಎಂದೊಬ್ಬರು ಜರಿದರು

'ಮಂಗನಿಂದ ಮಾನವರು ಸೃಷ್ಟಿಯಾದುದೇ ನಿಜವಾಗಿದ್ದರೆ ಈಗಿನ ಮಂಗಗಳೂ ಯಾಕೆ ಮಾನವರಾಗಿ ಬದಲಾಗುತ್ತಿಲ್ಲ?' ಎಂಬ ಪ್ರಶ್ನೆ ಹೈಸ್ಕೂಲ್ ಮಕ್ಕಳಿಗೂ ಬಂದೇ ಬರುತ್ತದೆ. ಈಗಲ್ಲ, ಶತಮಾನದ ಹಿಂದಿನಿಂದಲೂ ಈ ಪ್ರಶ್ನೆ ಚಾಲ್ತಿಯಲ್ಲಿದೆ. ಅದಕ್ಕೆ ಸರಳ ಹೋಲಿಕೆಯ ಉತ್ತರ ಹೀಗಿದೆ: ಒಂದು ಗಿಡ ಬೆಳೆದಂತೆಲ್ಲ ಹೊಸ ಹೊಸ ರೆಂಬೆಕೊಂಬೆ ಬರುತ್ತವಲ್ಲ; ಈ 'ವಿಕಾಸ ವೃಕ್ಷ'ವೂ ಹಾಗೆಯೇ. ಮೂಲದಲ್ಲಿ ಏಕಾಣುಜೀವಿ, ಪಾಚಿ, ಸಸ್ಯ, ಮೃದ್ವಂಗಿ, ಮೀನು, ಕೀಟ, ಹಾವು, ಕಪ್ಪೆ, ಪಕ್ಷಿ, ಮೊಸಳೆ ಹೀಗೆ ಶಾಖೆಗಳಾಗುತ್ತ ಸುಮಾರು ಹತ್ತು ಕೋಟಿ ವರ್ಷಗಳ ಹಿಂದೆ ಸ್ತನಿ ಎಂಬ ಹೊಸ ಶಾಖೆ ಚಿಗುರಿತು. ಅದರಿಂದ ದನ, ಬಾವಲಿ, ಕಾಡುಪಾಪ, ತಿಮಿಂಗಿಲ, ವಾನರ ಹೀಗೆ ಬೇರೆ ಬೇರೆ ಟಿಸಿಲು ಹೊಮ್ಮಿದವು. ಈ 'ವಾನರ' ಎಂಬ ಕೊಂಬೆಯಲ್ಲಿ ಮಂಗ, ಗೊರಿಲ್ಲ, ಚಿಂಪಾಂಜಿ, ಗಿಬ್ಬನ್, ಮನುಷ್ಯ ಹೀಗೆ ಬೇರೆ ಬೇರೆ ಶಾಖೆಯಾಗಿ ಬೆಳೆದಿವೆ. .. .. ..

ಚಾರ್ಲ್ಸ್ ಡಾರ್ವಿನ್ನನ ವಿಕಾಸ ಸಿದ್ಧಾಂತದ ವಿರುದ್ಧ ಕ್ರಿಶ್ಚಿಯನ್ ಮೂಲಭೂತವಾದಿಗಳು ಆರಂಭದಿಂದಲೂ ಆಕ್ಷೇಪಣೆ ಎತ್ತುತ್ತಲೇ ಬಂದಿದ್ದಾರೆ. ಭೂಮಿಯ ಮೇಲಿನ ಜೀವಿಗಳೆಲ್ಲ 'ಉದ್ದೇಶಪೂರ್ವಕ ದೈವೀಸೃಷ್ಟಿ' ಎಂದು ಅವರು ನಂಬುತ್ತಾರೆ. ಜೀವಿಗಳ ವಿಕಾಸಕ್ಕೆ ದೇವರ ಅಗತ್ಯವೇ ಇಲ್ಲ ಎಂಬ ಡಾರ್ವಿನ್ ಮಾತನ್ನು ನಂಬಿ ಜನರು ದೇವರನ್ನು ಕಡೆಗಣಿಸಿದರೆ ಚರ್ಚ್‌ನ ಪ್ರಾಮುಖ್ಯ ಕಡಿಮೆ ಆದೀತೆಂಬ ಭಯ ಅವರಿಗಿತ್ತು. ಆದರೆ ವಿಕಾಸ ಸಿದ್ಧಾಂತಕ್ಕೆ ಪುಷ್ಟಿ ಸಿಗುತ್ತ ಹೋದ ಹಾಗೆ ಧರ್ಮಭೀರುಗಳು ಸ್ವಲ್ಪ ಸ್ವಲ್ಪ ಬದಲಾಗುತ್ತ ಹೋದರು. ಅಂದರೆ, ಡಾರ್ವಿನ್ ಹೇಳಿದ್ದನ್ನು ತಮ್ಮ 'ಬುಕ್ ಆಫ್ ಜೆನೆಸಿಸ್'ನಲ್ಲಿ ಈ ಮೊದಲೇ ಹೇಳಲಾಗಿದೆ ಎನ್ನತೊಡಗಿದರು. 'ಆರು ದಿನಗಳಲ್ಲಿ ಜೀವಲೋಕ ಸೃಷ್ಟಿಯಾಯಿತು' ಎಂಬ ಮಾತಿಗೆ ಬೇರೆಯದೇ ಅರ್ಥ ಕೊಟ್ಟರು. ಧರ್ಮಗ್ರಂಥದ 'ಒಂದು ದಿನ ಎಂದರೆ ಕೋಟ್ಯಂತರ ವರ್ಷ' ಎಂದರು. ಶಿಲಾಪದರಗಳಲ್ಲಿ ಕಾಣಸಿಗುವ ಪಳೆಯುಳಿಕೆಗಳನ್ನು 'ದೇವರೇ ಸೃಷ್ಟಿಸಿ ಶಿಲೆಗಳಲ್ಲಿ ಅವಿತಿಟ್ಟಿದ್ದು' ಎನ್ನತೊಡಗಿದರು. .. .. ..

ಡಾರ್ವಿನ್ ಪರ ವಿಜ್ಞಾನಿಗಳು ಅದೆಷ್ಟೇ ಖಚಿತ ಸಾಕ್ಷ್ಯಗಳನ್ನು ಮುಂದಿಡಲಿ, ಅದಕ್ಕೆ ವಿರುದ್ಧವಾದ 'ದೈವೀಸೃಷ್ಟಿ ವಾದ' (ಕ್ರಿಯೇಶನಿಸಂ) ಸದಾ ಜೀವಂತ ಇರುವಂತೆ ಇತರ ಶಕ್ತಿಗಳು ಶ್ರಮಿಸುತ್ತಲೇ ಇವೆ. ಅಂಥವರ ಗುಂಪಿನಲ್ಲಿ ಅಸಲೀ ವಿಜ್ಞಾನಿಗಳೂ ಇದ್ದಾರೆ. ಸತ್ಯಪಾಲ್ ಸಿಂಗ್ ರಂಥ ಮಾಜಿ ವಿಜ್ಞಾನಿಗಳಿದ್ದಾರೆ. ಸಾವಿರಾರು ವೆಬ್ ಸೈಟುಗಳಿವೆ; ಲಕ್ಷಾಂತರ ಪುಸ್ತಕಗಳು ಪ್ರಕಟವಾಗಿವೆ. ಅಪ್ಪಟ ವೈಜ್ಞಾನಿಕ ಎಂದು ಎಲ್ಲರೂ ನಂಬುವಂತೆ ಯಾವುದೋ ಜೀವಕೋಶದ ಎಂಥದ್ದೋ ಒಳಪೊರೆಯನ್ನು ಬಿಚ್ಚಿಟ್ಟು, 'ಇದು ವಿಕಾಸವಾದಕ್ಕೆ ಪೂರಕವಾಗಿಲ್ಲ' ಎಂದು ಸೂಚಿಸುತ್ತಾರೆ. ಭಕ್ತರು ಅದನ್ನೇ ದೊಡ್ಡದಾಗಿ ಬಿಂಬಿಸುತ್ತಾರೆ. .. .. ..

'ಮಾನವ ಮಂಗನಾಗಿದ್ದಕ್ಕೆ ಸಾಕ್ಷ್ಯ ಎಲ್ಲಿದೆ?' ಎಂಬ ತುಂಟ ಹುಡುಗನ ಪ್ರಶ್ನೆಗೆ ಡಾ. ಶಿವರಾಮ ಕಾರಂತರು 'ನೀನೇ ಉಂಟಲ್ಲವೊ!?' ಎಂದು ಒಗ್ಗರಣೆಯಂತೆ ಉತ್ತರಿಸಿದ್ದುದು ನಮಗೆ ಮತ್ತೆ ನೆನಪಾಗಬೇಕು. ಪುರಾತನ ಹಿಂದೂ ಚಿಂತನೆಗಳನ್ನು ವಿರೂಪಗೊಳಿಸುತ್ತ, ಆಧುನಿಕ ವಿಜ್ಞಾನವನ್ನು ಹೀಗಳೆಯುತ್ತ, ಸಮಾಜವನ್ನು ಒಡೆಯುತ್ತ ಹೋಗುವವರಿಗೆ ಹಿಂಭಾಗದಲ್ಲಿ ಬಾಲವೇನಾದರೂ ಚಿಗುರುತ್ತಿದೆಯೆ?

(ಪ್ರಜಾವಾಣಿ ಜ. 25)

ನದಿ ಮಾಲಿನ್ಯದ ವಿರುದ್ಧ ಮಂಗಳೂರಿನಲ್ಲಿ ಡಿವೈಎಫ್ಐ ಜಾಥಾ, ಪ್ರತಿಭಟನೆ:



ವಾಸುದೇವ ಉಚ್ಚಿಲ

ಮಂಗಳೂರಿನಲ್ಲೇ ಕಡಲು ಸೇರುವ ದ.ಕ.ಜಿಲ್ಲೆಯ ಪ್ರಮುಖ ನದಿ ಫಲ್ಗುಣಿ. ಇದರ ಉತ್ತರ ಭಾಗದಲ್ಲಿಯೇ ನವಮಂಗಳೂರು ಬಂದರು, ಎಂಸಿಎಫ್ ಕಾರ್ಖಾನೆ, ಎಂಆರ್‌ಪಿಎಲ್, ಕೈಗಾರಿಕಾ ಎಸ್ಟೇಟು ಹಾಗೂ ಹಲವು ಉದ್ಯಮಗಳಿವೆ. ನದಿಯ ದಕ್ಷಿಣದಲ್ಲಿ ಉದ್ದಕ್ಕೂ ವಸತಿ ಪ್ರದೇಶ ಚಾಚಿವೆ. ಫಲ್ಗುಣಿ ನದಿಯು ಜಿಲ್ಲೆಯ ಹಲವು ಗ್ರಾಮಗಳಿಗೆ ಕುಡಿಯುವ ನೀರಿನ ಹಾಗೂ ಕೃಷಿ ನೀರಿನ ಮೂಲವಾಗಿದೆ. ಮಂಗಳೂರು ನಗರದ ದಕ್ಷಿಣದಲ್ಲಿರುವ ನೇತ್ರಾವತಿಯಂತೆ ಉತ್ತರದಲ್ಲಿರುವ ಫಲ್ಗುಣಿ ನದಿಯೂ ಜೀವಜಲವಾಗಿದೆ.

ಮಂಗಳೂರಿನ ಉತ್ತರ ಭಾಗದಲ್ಲಿ ಕೇಂದ್ರೀಕೃತವಾಗಿರುವ ಸಣ್ಣ ದೊಡ್ಡ ಕೈಗಾರಿಕೆಗಳು ತಮ್ಮ ಕಾರ್ಖಾನೆಗಳಲ್ಲಿ ಉತ್ಪನ್ನವಾಗುವ ಮಾಲಿನ್ಯಭರಿತ ತ್ಯಾಜ್ಯವನ್ನು ನೇರವಾಗಿ ಫಲ್ಗುಣಿ ನದಿಗೋ ಅಥವಾ ಅದಕ್ಕೆ ಉಪನದಿಯಾಗಿರುವ ತೋಕೂರು ಹಳ್ಳಕ್ಕೋ ಬಿಟ್ಟು ಬಿಡುತ್ತಿವೆ. ವಾಯು, ನೆಲ, ಜಲ ಮಾಲಿನ್ಯ ಮಾಡುತ್ತಿರುವ ಈ ಕೈಗಾರಿಕೆಗಳಿಗೆ ಯಾವುದೇ ಲಂಗು ಲಗಾಮು ಇಲ್ಲವಾಗಿದೆ. ಇದರಿಂದಾಗಿ ನದಿಯ ನೀರು ಕಲುಷಿತವಾಗಿದ್ದು, ಕೃಷಿ ಅಥವಾ ತರಕಾರಿ ಬೆಳೆಯಾಗಲೀ ಅಥವಾ ಮೀನುಗಳು ನಶಿಸುತ್ತಿರುವುದರಿಂದ ಮೀನುಗಾರಿಕಾ ವೃತ್ತಿ ಮಾಡಲಾಗಲೀ ಸಾಧ್ಯವಿಲ್ಲದ ಪರಿಸ್ಥಿತಿಯುಂಟಾಗಿದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಮಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದರೂ, ದೊಡ್ಡ ಕೈಗಾರಿಕೆಗಳು ಮಾಲಿನ್ಯ ನಿಯಂತ್ರಣಕ್ಕೆ ಕ್ರಮಕೈಗೊಳ್ಳುತ್ತಿವೆಯೆಂದು ಅವರು ಬರೆದುಕೊಟ್ಟ ಹೇಳಿಕೆಯನ್ನ ಜತನವಾಗಿಟ್ಟುಕೊಂಡು ಪರಿಶೀಲಿಸುವ ಗೋಜಿಗೇ ಹೋಗುತ್ತಿಲ್ಲ. ಮಂಡಲಿಯಾಗಲೀ ಜಿಲ್ಲಾಡಳಿತವಾಗಲೀ ಮಾಲಿನ್ಯದ ಬಗ್ಗೆ ಕುರುಡಾಗಿದೆ.

ಜಿಲ್ಲೆಯಲ್ಲಿ ಧರ್ಮದ ಅಮಲಿನಲ್ಲಿ ಹೋರಾಡುವ ಜನ, ಜನರ ಜೀವಕ್ಕೆ ಅಪಾಯಕಾರಿಯಾಗಿ ಬೃಹತ್ ಕೈಗಾರಿಕೆಗಳು ಹೊರಚೆಲ್ಲುವ ತ್ಯಾಜ್ಯದ ವಿರುದ್ಧ ಹೋರಾಡುತ್ತಿಲ್ಲ. ಮನುಷ್ಯ ಜೀವದ ರಕ್ಷಣೆಗಾಗಿ ಹೋರಾಡಬೇಕಾದುದು ನಿಜವಾದ ಧರ್ಮ ಎಂದು ತಿಳಿದಿಲ್ಲ. ಇನ್ನೊಂದೆಡೆ ಪರಮಶಿವಯ್ಯ ವರದಿಯಂತೆ ಮಳೆ ನೀರನ್ನು ಸಂಗ್ರಹಿಸಿ ಬಯಲು ಸೀಮೆಗೆ ರವಾನಿಸುವ ನೇತ್ರಾವತಿ ನದಿ ಯೋಜನೆಗಳನ್ನು ಪರಿಸರ ರಕ್ಷಣೆ ಹೆಸರಿನಲ್ಲಿ ಬಿಜೆಪಿ ನಾಯಕರು ವಿರೋಧಿಸುತ್ತಿದ್ದಾರೆ. ಆದರೆ ಅವರಿಗೆ ಫಲ್ಗುಣಿ ನದಿ ಪರಿಸರದ ಪ್ರಶ್ನೆಯಾಗಿ ಕಾಣುತ್ತಿಲ್ಲ. ಮಗದೊಂದೆಡೆ ಮರಳು ಮಾಫಿಯಾ ಖದೀಮರು ಫಲ್ಗುಣಿ ನದಿಯ ಉತ್ತಮ ಮರಳನ್ನು ಕದ್ದೊಯ್ಯು, ರಕ್ಷಣೆ ಮಾಡುವ ನದಿ ಮಧ್ಯದ ಕಾಂಡ್ಲಾ ವನಗಳನ್ನು ನಾಶ ಮಾಡುವುದನ್ನು ಬಿಜೆಪಿಗರು ವಿರೋಧಿಸುತ್ತಿಲ್ಲ. ಹಾಗಾಗಿ ಇದೀಗ ಫಲ್ಗುಣಿ ನದಿ ಮಾಲಿನ್ಯದಿಂದ ಸಂತ್ರಸ್ತ ನಾಗರಿಕರು ಡಿವೈಎಫ್‌ಐ ನೇತೃತ್ವದಲ್ಲಿ ಹೋರಾಟಕ್ಕೆ ಮುಂದಾಗಿದ್ದಾರೆ.

ಜನವರಿ 23 ರಂದು ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನ ಮಿನಿ ವಿಧಾನಸೌಧದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಜಾಥಾ ನಡೆಸಿ ಬಳಿಕ ಅಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು. ಜಲಮಾಲಿನ್ಯಕ್ಕೆ ಕಾರಣರಾದವರನ್ನು ಪತ್ತೆ ಹಚ್ಚಿ ಕ್ರಮಕೈಗೊಳ್ಳಲು ಆಗ್ರಹಿಸಲಾಯಿತು.

ಪ್ರತಿಭಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ದ.ಕ. ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮಂಗಳೂರು ಪಾಲಿಕೆ ಕಾರ್ಪೊರೇಟರ್ ಸಿಪಿಐ(ಎಂ)ನ ದಯಾನಂದ ಶೆಟ್ಟಿ ಮಾತನಾಡಿದರು. ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್ ಪ್ರಸ್ತಾವಿಸಿ ಸ್ವಾಗತಿಸಿದರು. ಡಿವೈಎಫ್‌ಐ ಮುಖಂಡರಾದ ಜೀವನ್‌ರಾಜ್ ಕುತ್ತಾರ್, ಆಶಾ ಬೋಳೂರು, ಸಾಧಿಕ್ ಕಣ್ಣೂರು, ನವೀನ್ ಕೊಂಚಾಡಿ, ನಿತಿನ್ ಕುತ್ತಾರ್, ಜೋಕಟ್ಟೆ ಗ್ರಾ.ಪಂ.ಸದಸ್ಯ ಅಬೂಬಾಕರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಾಸಿಕ ವೇತನ ಕೊಡಿ : ಅಂಗನವಾಡಿ ನೌಕರರ ಪ್ರತಿಭಟನೆ



ದಿನಾಂಕ 25–1–2018 ರಂದು ಸಿಐಟಿಯು ನೇತೃತ್ವದ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕಿಯರು ಜಿಲ್ಲಾ ಪಂಚಾಯತ್ ಮುಂದುಗಡೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ವೇತನ ನೀಡದೆ ದುಡಿಸುವುದು ಅಪರಾಧ. ಕಳೆದ ಅಕ್ಟೋಬರ್, ನವಂಬರ್, ಡಿಸೆಂಬರ್ ತಿಂಗಳ ವೇತನವನ್ನು ಬಂಟ್ವಾಳ ತಾಲೂಕಿನ ಅಂಗನವಾಡಿ ನೌಕರರಿಗೆ ನೀಡದಿರುವ ಅಧಿಕಾರಿಗಳ ಬೇಜವಾಬ್ದಾರಿತನ ಖಂಡನೀಯ. ಮಾಸಿಕ ವೇತನದಿಂದಲೇ ಕುಟುಂಬ ನಿರ್ವಹಣೆ ಮಾಡುತ್ತಿರುವ ಅಂಗನವಾಡಿ ನೌಕರರ ಪರಿಸ್ಥಿತಿ ಚಿಂತಾಜನಕವಾಗಿದೆ. ಕೇಂದ್ರ ಮತ್ತು ರಾಜ್ಯ ಸರಕಾರದ ವಿವಿಧ ಹೋರಾಟಗಳನ್ನು ಜಾರಿ ಮಾಡುವ ಈ ಮಹಿಳಾ ನೌಕರರನ್ನು ವೇತನ ನೀಡದೆ ಶೋಷಣೆ ಮಾಡುವುದು ಅಮಾನವೀಯ ಕೃತ್ಯ ಎಂದು ಹೇಳಿದರು. ಅವರು ಮುಂದುವರಿದು ಜನವರಿ 30ರೊಳಗಡೆ ವೇತನ ಪಾವತಿಸದಿದ್ದರೆ ಉಸ್ತುವಾರಿ ಸಚಿವರಾದ ಶ್ರೀ ಬಿ.ರಮಾನಾಥ ರೈಯವರ ಮನೆಯ ಮುಂದುಗಡೆ ಧರಣಿ ಸತ್ಯಾಗ್ರಹವನ್ನು ಕುಟುಂಬ ಸಮೇತರಾಗಿ ಮಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ಪ್ರತಿಭಟನಾ ಪ್ರದರ್ಶನವನ್ನುದ್ದೇಶಿಸಿ ಸಿಐಟಿಯು ಮುಂದಾಳುಗಳಾದ ವಸಂತ ಆಚಾರಿ, ರಾಮಣ್ಣ ವಿಟ್ಲ, ಅಶೋಕ ಶ್ರೀಯಾನ್‌ರವರುಗಳು ಭಾಷಣ ಮಾಡಿದರು. ನಂತರ ಅಂಗನವಾಡಿ ನೌಕರರ ಸಂಘದ ಮುಂದಾಳುಗಳು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಅಂಗನವಾಡಿ ಉಪ ನಿರ್ದೇಶಕರುಗಳಿಗೆ ಮನವಿ ನೀಡಿ ಕೂಡಲೇ ವೇತನ ಪಾವತಿ ಆಗದಿದ್ದರೆ ಪಲ್ಸ್ ಪೋಲಿಯೋ ಕೆಲಸವನ್ನು ಸ್ಥಗಿತಗೊಳಿಸುವುದು ಮಾತ್ರವಲ್ಲದೆ ಜನವರಿ 31ರಂದು ಉಸ್ತುವಾರಿ ಸಚಿವರ ಮನೆ ಮುಂದೆ ಧರಣಿ ಸತ್ಯಾಗ್ರಹ ನಡೆಸಲಾಗುವುದೆಂದು ತಿಳಿಸಿದರು. ಜನವರಿ 30ರೊಳಗಡೆ ವೇತನ ಪಾವತಿ ಮಾಡಲಾಗುವುದೆಂಬ ಭರವಸೆ ಮೇರೆಗೆ ಧರಣಿ ಸತ್ಯಾಗ್ರಹವನ್ನು ವಾಪಸ್ಸು ಪಡೆಯಲಾಯಿತು. ಜಿಲ್ಲಾ ಅಧ್ಯಕ್ಷರಾದ ರವಿಕಲಾರವರು ಪ್ರಾಸ್ತವಿಕ ಭಾಷಣ ಮಾಡಿದರು. ಹೋರಾಟದ ನೇತೃತ್ವವನ್ನು ರವಿಕಲ, ಲಕ್ಷ್ಮೀ ಭಟ್, ಸಾವಿತ್ರಿ, ಮೂಕಾಂಬಿಕ, ಲಿಡಿಯ, ವಸಂತಿ ವಿಟ್ಲ, ರೇವತಿ ಪೆರುವಾಯಿ, ಲಲಿತ ಮಾಣಿ, ಆಶಾ ಅಡಿಕೆಮಜಲು, ಭವಾನಿ ಇಡ್ಕಿಡು, ಶಕುಂತಳ ದೈವಸ್ಥಳ, ಸುಜಾತ ಗಾಡಿಪಲ್ಕೆ ಮುಂತಾದವರು ವಹಿಸಿದ್ದರು.

ಓಲಾ ಕ್ಯಾಬ್ ಚಾಲಕರಿಂದ ಮುತ್ತಿಗೆ, ಲೀಸ್ ಮೇಳ ಸ್ಥಗಿತ...

ಹಾಲಿ ಇರುವ ಅಪರೇಟರುಗಳಿಗೆ ಸರಿಯಾದ ಟ್ರಿಪ್ಪಿಲ್ಲದೆ ಬ್ಯಾಂಕ್ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡುವ ಹಾದಿಯಲ್ಲಿರುವಾಗ ನಿರುದ್ಯೋಗಿ ಯುವಕರಲ್ಲಿ ಸುಳ್ಳು ಭ್ರಮೆಗಳನ್ನು ಹುಟ್ಟಿಸಿ ಟಾಟಾ ಮತ್ತು ಹುಂಡೈ ಕಂಪೆನಿಗಳ ಕಾರು ಮಾರಾಟದ ತಂತ್ರಗಳಿಗೆ ಯುವಜನರನ್ನು ಆಮಿಷಗಳಿಗೆ ಬಲಿ ಮಾಡಿ ಸಾಲದ ಕೂಪಕ್ಕೆ ತಳ್ಳುವ ಓಲಾ ಕಂಪೆನಿಯ ವಿರುದ್ಧ ನಗರದ ಲಾಲ್ ಬಾಗ್ ಬಳಿ ಇರುವ ಓಲಾ ಕಂಪೆನಿಯವರು ಹಾಕಿದ್ದ ಓಲಾ ಲೀಸ್ ಮೇಳ ಕೇಂದ್ರದ ಎದುರು ದ.ಕ ಜಿಲ್ಲಾ ಆನ್ ಲೈನ್ ಟ್ಯಾಕ್ಸಿ ಚಾಲಕರ ಮತ್ತು ಮಾಲಕರ ಎಸೋಸಿಯೇಶನ್ ನೇತೃತ್ವದಲ್ಲಿ ಕಂಪೆನಿಯ ಪ್ರಚಾರದ ಬ್ಯಾನರ್ ಮತ್ತು ಕರಪತ್ರಗಳನ್ನು ಬೆಂಕಿಯಲ್ಲಿ ಸುಟ್ಟು ಪ್ರತಿಭಟನೆ ನಡೆಸಲಾಯಿತು.

ಲೀಸ್ ಮೇಳಕ್ಕೆ ಹಾಕಲಾಗಿದ್ದ ಟೆಂಟನ್ನು ತೆರವುಗೊಳಿಸಿದ ಚಾಲಕರು ನಂತರ ಓಲಾ ಕಚೇರಿಗೆ ಮುತ್ತಿಗೆ ಹಾಕಿದರು. ಬರ್ಕೆ ಪೋಲಿಸ್ ಠಾಣೆಯ ಇನೆಸ್ಪೆಕ್ಟರ್ ರಾಮಕೃಷ್ಣ ಮಧ್ಯಪ್ರವೇಶಿಸಿ ಕಂಪೆನಿ ಪ್ರತಿನಿಧಿಗಳ ಹಾಗೂ ಯೂನಿಯನ್ ಮುಖಂಡರ ಸಭೆ ನಡೆಸಿದರು. ಚಾಲಕರ ಒತ್ತಡಕ್ಕೆ ಮಣಿದು ಕಂಪೆನಿಯು ಲೀಸ್ ಮೇಳವನ್ನು ಸ್ಥಗಿತಗೊಳಿಸಿತು.

ಸಂಘದ ಗೌರವಾಧ್ಯಕ್ಷ ಮತ್ತು ಡಿವೈಎಫ್.ಐ. ಜಿಲ್ಲಾಧ್ಯಕ್ಷ ಬಿ.ಕೆ ಇಮ್ತಿಯಾಜ್, ಅಧ್ಯಕ್ಷ ಜಗರಾಜ ರೈ, ಸಾದಿಕ್ ಕಣ್ಣೂರು, ಮುನಾವರ್, ಕಮಲಾಕ್ಷ ಬಜಾಲ್, ಅಬೂಬಕ್ಕರ್, ಶಿವ, ನೌಷಾದ್, ಸುಬಾಷ್ ಜಪ್ಪು, ಅಲ್ತಾಫ್, ವಾಜಿದ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮಾನವ ಸರಪಳಿ ಯಶಸ್ವಿಗೊಳಿಸಲು ಮಂಗಳೂರಿನಲ್ಲಿ ಬುದ್ಧಿಜೀವಿಗಳ ಕರೆ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 30 ರಂದು ರಾಜ್ಯಾದ್ಯಂತ ನಡೆಯಲಿರುವ ಸೌಹಾರ್ದ ಮಾನವ ಸರಪಳಿಯನ್ನು ಯಶಸ್ವಿಗೊಳಿಸಲು ಜನವರಿ 20 ರಂದು ಮಂಗಳೂರಿನಲ್ಲಿ ಜಿಲ್ಲೆಯ ಗಣ್ಯರ ಸಭೆಯನ್ನು ಕರೆಯಲಾಗಿತ್ತು. :ಸೌಹಾರ್ದತೆಗಾಗಿ ಕರ್ನಾಟಕ" ದ.ಕ.ಜಿಲ್ಲಾ ಸಮಿತಿ ಸಂಚಾಲಕರಾದ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕಕ ವಿಲ್ಫೆಡ್ ಡಿ'ಸೋಜ ಮತ್ತು ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಸಭೆಯಲ್ಲಿ ಹಾಜರಿದ್ದು ಮಾಹಿತಿ ನೀಡಿದರು.

ಜನವರಿ 30 ಕೋಮುವಾದಿಯೊಬ್ಬನ ಗುಂಡಿಗೆ ಮಹಾತ್ಮಗಾಂಧಿ ಬಲಿಯಾದ ದಿನ. ಅಂದಿನಿಂದಲೂ ಇದ್ದ ಕೋಮುವಾದ ಇವತ್ತು ಅತ್ಯಂತ ರಾಕ್ಷಸೀ ರೂಪ ತಾಳಿದೆ. ದ.ಕ.ಜಿಲ್ಲೆಯಲ್ಲಿ ಸಾಮಾನ್ಯ ನಾಗರಿಕರು ನೆಮ್ಮದಿಯಿಂದ ವಾಸಿಸಲು ಸಾಧ್ಯವಾಗದ ವಾತಾವರಣವನ್ನು ಉಂಟು ಮಾಡಿದೆ. ಇದರ ವಿರುದ್ಧ ಜಿಲ್ಲೆಯ ಜನ ಬಲವಾಗಿ ದನಿ ಎತ್ತಬೇಕಾಗಿದೆ. 1990 ರಲ್ಲಿಯೇ ಮಂಗಳೂರಿನ ಜನ ಸೌಹಾರ್ದ ಮಾನವ ಸರಪಳಿಯನ್ನು ರಚಿಸಿದ್ದರು. ಇವತ್ತು ಇನ್ನಷ್ಟು ಸಂಖ್ಯೆಯಲ್ಲಿ ಸೇರಿ ಮಾನವ ಸರಪಳಿಯನ್ನು ಮಾನವ ಗೋಡೆಯಾಗಿ ಪರಿವರ್ತಿಸಬೇಕಿದೆ ಎಂಬುದಾಗಿ ಹೇಳಿ ಜಿಲ್ಲಾ ಸಂಚಾಲಕರಾದ ವಿಲ್ಫೆಡ್ ಡಿ'ಸೋಜ ಸ್ಫೂರ್ತಿಯನ್ನಿತ್ತರು.

ಕಾರ್ಯಕ್ರಮದಲ್ಲಿ ನಲವತ್ತು ಮಂದಿ ಗಣ್ಯರು ಭಾಗವಹಿಸಿದ್ದು, ಅವರಲ್ಲಿ ಖ್ಯಾತ ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ನ್ಯಾಯವಾದಿ ಯಶವಂತ ಮರೋಳಿ, ದಸಂಸ(ಪ್ರೊ.ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಘಟನಾ ಸಂಚಾಲಕ ಎಂ.ದೇವದಾಸ್, ಬ್ಯಾರಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಬಿ.ಎ.ಮಹಮ್ಮದ್ ಹನೀಫ್, ಮಂಗಳೂರು ಮಹಾನಗರ ಪಾಲಿಕೆ ಸದಸ್ಯ ಪುರುಷೋತ್ತಮ ಚಿತ್ರಾಪುರ, ಸಮುದಾಯದ ವಾಸುದೇವ ಉಚ್ಚಿಲ ಹಾಗೂ ಪ್ರಾಧ್ಯಾಪಕ ಡಾ.ಕೆ.ರಾಜೇಂದ್ರ ಉಡುಪ, ಮಾನವ ಬಂಧುತ್ವ ವೇದಿಕೆಯ ದ.ಕ.ಜಿಲ್ಲಾ ಸಂಚಾಲಕರಾದ ನಾರಾಯಣ ಕಿಲಂಗೋಡಿ, ಕಾರ್ಯಕರ್ತರಾದ ಬಿ.ಸುಧಾನಂದ, ಚೆನ್ನಕೇಶವ, ಹಿರಿಯ ಮಾನವ ಹಕ್ಕು ಹೋರಾಟಗಾರ ಪಿ.ಬಿ.ಡೇಸಾ, ಸಮಾಜ ಕಾರ್ಯಕರ್ತೆ ವಿದ್ಯಾ ದಿನಕರ ಮಾತನಾಡಿ, ಮಾನವ ಸರಪಳಿಯನ್ನು ಯಶಸ್ವಿಗೊಳಿಸುವ ಬಗ್ಗೆ ಸಲಹೆ ಸೂಚನೆ ನೀಡಿದರು.

ಜಿಲ್ಲಾ ಸಂಚಾಲಕರಾದ ಮುನೀರ್ ಕಾಟಿಪಳ್ಳ ಪ್ರಸ್ತಾವನೆಗೈದು ಸ್ವಾಗತಿಸಿದರು. ಸಾಹಿತಿ ಹಾಗೂ ಚಿಂತಕಿ ಚಂದ್ರಕಲಾ ನಂದಾವರ, ಖ್ಯಾತ ವೈದ್ಯ ಹಾಗೂ ಚಿಂತಕ ಡಾ.ಬಿ.ಶ್ರೀನಿವಾಸ ಕಕ್ಕಿಲ್ಲಾಯ ಮತ್ತು ಕೊಂಕಣಿ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಎರಿಕ್ ಒಜಾರಿಯೋ 'ಸೌಹಾರ್ದತೆಗಾಗಿ ಕರ್ನಾಟಕ' ದ.ಕ.ಜಿಲ್ಲಾ ಸಮಿತಿ ಇದರ ಸಂಚಾಲಕರಾಗಿದ್ದಾರೆ.

ಮಂಗಳೂರು ಮಾನವ ಸರಪಣಿಯ ಹಾದಿ, ಜತೆಗೆ ಇರುವ ಪೋಸ್ಟರ್ ನಲ್ಲಿ ಇದೆ.



ಚಿಂತಾಮಣಿ

ಜನವರಿ 30 ಮಾನವ ಸರಪಳಿಗೆ ವ್ಯಾಪಕ ಸಿದ್ಧತೆ

ಜನವರಿ 30ರ ಮಾನವ ಸರಪಳಿಗೆ ರಾಜ್ಯದಾದ್ಯಂತ ವ್ಯಾಪಕ ಸಿದ್ಧತೆಗಳು ನಡೆದಿವೆ. ಹೆಚ್ಚು ಕಡಿಮೆ ಜಿಲ್ಲೆಗಳ ಜಿಲ್ಲಾ ಮತ್ತು ತಾಲೂಕುಗಳಲ್ಲಿ ಮಾನವ ಸರಪಣಿ ನಡೆಯಲಿದೆ. ಈ ವಾರ ಹಲವು ಜಿಲ್ಲೆ ಮತ್ತು ತಾಲೂಕುಗಳಲ್ಲಿ ಸಮಾವೇಶಗಳು ಸಿದ್ಧತಾ ಸಭೆಗಳು, ಕಾರ್ಯಕರ್ತರ ಸಭೆಗಳು ನಡೆದು ಮಾನವ ಸರಪಣಿಯ ಮಾರ್ಗ ಸಿದ್ಧ ಪಡಿಸಲಾಗಿದೆ. ಹಲವು ಕಡೆ ಮಾರ್ಗಗಳನ್ನು ಘೋಷಿಸಲಾಗಿದೆ. ಈ ಸಂಚಿಕೆ ಪ್ರಿಂಟಿಗೆ ಹೋಗುವಾಗ ಮಂಗಳೂರು, ಕುಂದಾಪರ, ಉತ್ತರ ಕನ್ನಡದಲ್ಲಿ ಸರಪಣಿಯ ಮಾರ್ಗಗಳ ಬಗ್ಗೆ ಮಾಹಿತಿ ಲಭ್ಯವಿದ್ದು ಅದನ್ನು ಪುಟ 5 ರಲ್ಲಿ ಕೊಡಲಾಗಿದೆ. ಬಳ್ಳಾರಿ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು ಸೇರಿದಂತೆ ಒಟ್ಟು 38 ಕಿ.ಮಿ. ಉದ್ದ ಸರಪಳಿ ಯೋಜಿಸಲಾಗಿದೆ.

ಬೆಂಗಳೂರು ಉತ್ತರ ಜಿಲ್ಲಾ, ಬಳ್ಳಾರಿ, ಧಾರವಾಡಗಳಲ್ಲಿ ಜಿಲ್ಲಾ ಸಮಾವೇಶಗಳು ನಡೆದ ವರದಿಗಳು ಬಂದಿವೆ. ಬೆಂಗಳೂರು ಉತ್ತರದಲ್ಲಿ ಜನವರಿ 26ರಂದು ಬೈಕ್ ರ್‍ಯಾಲಿಯನ್ನೂ ನಡೆಸಲಾಯಿತು. ಕಾರವಾರ, ಆನೇಕಲ್, ಶಿರಸಿ, ಭಟ್ಕಳ, ಹೊಸಪೇಟೆ, ದಾವಣಗೆರೆ, ಹೂವಿನಹಡಗಲಿ, ಮದ್ದೂರು, ಸಂಡೂರು, ನೆಲಮಂಗಲ, ಶ್ರೀನಿವಾಸಪುರ, ಹರಪನಹಳ್ಳಿ, ಸಕಲೇಶಪುರ, ಚನ್ನರಾಯಪಟ್ಟಣ, ದೇವದುರ್ಗ, ಶಹಾಪುರ, ಸಿಂಧನೂರು, ಕುರಿಗೋಡು, ಚಾಮರಾಜನಗರ, ಬೆಂಗಳೂರಿನ ಜಯನಗರ, ಪೀಣ್ಯ, ಕೆಂಗೇರಿ, ಬಿಡದಿ ಗಳಲ್ಲಿ ಸಮಾವೇಶ ಅಥವಾ ಸಿದ್ಧತಾ ಸಮಿತಿ ಸಭೆಗಳು ನಡೆದ ವರದಿಗಳು ಬಂದಿವೆ.

ಕುಂದಾಪುರದಲ್ಲಿ ಮಾರ್ಗ

* ಕುಂದಾಪುರದಿಂದ ತೆಕ್ಕಟ್ಟೆವರೆಗೆ, ಶೀರೂರಿನಿಂದ ತಲ್ಲೂರುವರೆಗೆ ಪ್ರಮುಖ ಪೇಟೆಗಳಲ್ಲಿ
* ಕುಂದಾಪುರದ ಶಾಸ್ತ್ರಿ ವ್ರತ್ತದಿಂದ ಮೂರುಕೈ, ಹಂಗಳೂರು, ಕೋಟೇಶ್ವರ, ಕುಂಭಾಶಿ, ತೆಕ್ಕಟ್ಟೆ
* ತಲ್ಲೂರು, ಮುಳ್ಳಿಕಟ್ಟೆ, ಹೆಮ್ಮಾಡಿ, ತ್ರಾಸಿ, ಮರವಂತೆ, ನಾವುಂದ, ಬೈಂದೂರು, ಶಿರೂರು.

ಉತ್ತರ ಕನ್ನಡಲ್ಲಿ ಮಾನವ ಸರಪಣಿಯ ಮಾರ್ಗ

* ಕಾರವಾರ ತಾಲೂಕಿನಲ್ಲಿ 1) ಗೋವಾ ಗಡಿಯಲ್ಲಿ ಪ್ರಾರಂಭ ಮಾಜಾಳಿಯಲ್ಲಿ
2) ಸದಾಶಿವಗಡ ಕಾಳಿ ನದಿ ಸಮುದ್ರ ಸೇರುವಲ್ಲಿ ಕೋಡಿಬಾಗದ ವರೆಗೆ
3) ನಗರದಲ್ಲಿ ಸುಭಾಷ್ ವೃತ್ತದಿಂದ ಹೆದ್ದಾರಿ ಕಡೆಗೆ
4) ಅಮದಳ್ಳಿಯಿಂದ ಅಂಕೋಲಾ ಅಭಿಮುಖವಾಗಿ
* ಕುಮಟಾ ತಾಲೂಕಿನ ಗೋಕರ್ಣದ ರಥಬೀದಿಯಲ್ಲಿ ಮತ್ತು ಕುಮಟಾ ನಗರದ ಚೆನ್ನಮ್ಮ ಗಾರ್ಡನ್ ಸರ್ಕಲ್ ನಿಂದ ಹೆದ್ದಾರಿಗುಂಟ ಗಿಬ್ ಸರ್ಕಲ್ (ಐಜಿಪಿ ವಾಹನ ಸುಟ್ಟ ಜಾಗದಿಂದ ಚಂದಾವರದಲ್ಲಿ ಮೊದಲ ಕೋಮುದಾಳಿ ಪ್ರಾರಂಭಿಸಿದ ಆ ಸರ್ಕಲ್ ತನಕ)
* ಹೊನ್ನಾವರ ನಗರ ಮತ್ತು ಕೆಳಗಿನೂರು, ಕವಲಕ್ಕಿ
* ಭಟ್ಕಳ ತಾಲೂಕಿನ ಮುರುಡೇಶ್ವರ, ಶಿರಾಲಿ ಮತ್ತು ನಗರ
* ಶಿರಸಿಯಲ್ಲಿ ನಗರದ ಎಲ್ಲಾ ಐದು ಮುಖ್ಯ ರಸ್ತೆಗಳ ಗುಂಟ
* ಜೋಯಿಡಾ ಕೇಂದ್ರ ಮತ್ತು ಗೋವಾದ ಇನ್ನೊಂದು ಗಡಿ ರಾಮನಗರ ಲೊಂಡಾ ಭಾಗದಲಿ
* ಹಳಿಯಾಳ, ದಾಂಡೇಲಿ, ಸಿದ್ದಾಪುರ ಅಂಕೋಲಾ, ಮುಂಡಗೋಡ, ಯಲ್ಲಾಪುರ ಗಳಲ್ಲಿ



ಗದಗ



ಬೆಂಗಳೂರು ಯಾರಬ್ ನಗರ

ಹಾಸ್ಟೆಲ್ ನೌಕರರ ಅನಿರ್ದಿಷ್ಟ ಧರಣಿ ಮುಕ್ತಾಯ

ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲೆಗಳಲ್ಲಿ 'ಡಿ' ವರ್ಗದ ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಮುಖ್ಯ ಮಂತ್ರಿ ಹಸ್ತದಿಂದ ಜನವರಿ 22 ರಂದು ಆಯೋಜಿಸಲಾಗಿದ್ದ ನೇಮಕಾತಿ ಆದೇಶಗಳ ವಿತರಣಾ ಸಮಾರಂಭವನ್ನು ಅನಿರ್ದಿಷ್ಟವಾಗಿ ಮುಂದೂಡಲು ಸರ್ಕಾರ ನಿರ್ಧರಿಸಿದ ಹಿನ್ನೆಲೆಯಲ್ಲಿ ಹೊರಗುತ್ತಿಗೆ ನೌಕರರು ಜನವರಿ 18 ರಿಂದ ಸ್ವತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿದ್ದ ಧರಣಿ ಹಾಗೂ ಉಪವಾಸ ಸತ್ಯಾಗ್ರಹವನ್ನು 22 ರಂದು ಸಂಜೆ ತಾತ್ಕಾಲಿಕವಾಗಿ ಹಿಂಪಡೆದಿದ್ದಾರೆ. ಇದಕ್ಕೆ ಮೊದಲು ಧರಣಿ 4 ನೇ ದಿನಕ್ಕೆ ಕಾಲಿಟ್ಟರೂ ಸರ್ಕಾರದಿಂದ ಸಹಾನುಭೂತಿಪರ ಸ್ಪಂದನೆ ದೊರೆಯದಿರುವುದರಿಂದ ನೌಕರರು 21–01–2018 ಭಾನುವಾರದಿಂದ ಸರದಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಮೊದಲನೆಯ ದಿನ ನಾಯಕರಾದ ನಿತ್ಯಾನಂದ ಸ್ವಾಮಿ ಸೇರಿದಂತೆ 28 ಜನ, ಎರಡನೇ ದಿನ 18 ಜನ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ನೇರ ನೇಮಕಾತಿ ಮೂಲಕ 'ಡಿ' ವರ್ಗದ ಹುದ್ದೆಗಳನ್ನು ಭರ್ತಿ ಮಾಡಲು ಹಿಂದುಳಿದ ವರ್ಗಗಳ ಹಾಗೂ ಸಮಾಜ ಕಲ್ಯಾಣ ಇಲಾಖೆಗಳು ಕೈಗೊಂಡ ಪ್ರಕ್ರಿಯೆಯಿಂದಾಗಿ ಆ ಹುದ್ದೆಗಳಲ್ಲಿ ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಹೊರಗುತ್ತಿಗೆ ನೌಕರರು, ಬಹುತೇಕ ಮಹಿಳೆಯರು ಕೆಲಸ ಕಳೆದುಕೊಳ್ಳುವ ಅಪಾಯ ತಲೆದೋರಿದ ಹಿನ್ನೆಲೆಯಲ್ಲಿ ಅವರು ರಾಜಧಾನಿಯಲ್ಲಿ ಸಾಮೂಹಿಕ ಪ್ರತಿಭಟನೆ ನಡೆಸುತ್ತಿದ್ದರು. ಮುಖ್ಯ ಮಂತ್ರಿ ಸಿದ್ದರಾಮಯ್ಯನವರ ನಿರ್ದೇಶನದ ಮೇರೆಗೆ ನೇಮಕಾತಿ ಆದೇಶನೀಡುವ ಪ್ರಕ್ರಿಯೇ ಸ್ಥಗಿತಗೊಂಡಿರುವುದರಿಂದ ಹೊರಗುತ್ತಿಗೆ ನೌಕರರು ಸದ್ಯದಲ್ಲಿ ಕೆಲಸ ಕಳೆದುಕೊಳ್ಳುವ ಅಪಾಯ ತಪ್ಪಿದೆ. ಆದರೆ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸುವ ಕುರಿತು ನೌಕರರ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಿ ಹೊರಗುತ್ತಿಗೆ ನೌಕರರಿಗೆ ನ್ಯಾಯದೊರಕಿಸಬೇಕೆಂದು ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ ಒತ್ತಾಯಿಸಿದ್ದಾರೆ. ಸರ್ಕಾರ ಹಾಸ್ಟೆಲ್ ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಒದಗಿಸಲು ವಿಳಂಬ ಮಾಡಿದರೆ ನೌಕರರು ಮತ್ತೆ ಹೋರಾಟಕ್ಕೆ ಇಳಿಯುವರು ಎಂದು ಎಚ್ಚರಿಸಿದ್ದಾರೆ.





2 ಜಿ ತೀರ್ಪು ತಪ್ಪು ಯಾಕೆ?

ವಿಶೇಷ ಕೋರ್ಟಿನ ತೀರ್ಪಿನಲ್ಲಿ ಎರಡು ಪ್ರಮುಖ ಸಮಸ್ಯೆಗಳಿವೆ. ಒಂದು ಈ ಪ್ರಕರಣದ ಹಲವು ಅಂಶಗಳನ್ನು ಒಂದು ಪಿತೂರಿಯ ಪರಸ್ಪರ ನಿಕಟ ಸಂಬಂಧವಿದ್ದ ಹಲವು ಕೊಂಡಿಗಳಾಗಿ ವಿವರವಾಗಿ ಪರಿಶೀಲಿಸದೆ, ಅಂತಹ ಅಂಶಗಳನ್ನು ಬಿಡಿ ಬಿಡಿಯಾಗಿ ನೋಡಿದೆ. ಆ ಮೂಲಕ ಆ ಪ್ರತಿಯೊಂದು ಬಿಡಿ ಬಿಡಿ ಅಂಶಕ್ಕೆ ಪಿತೂರಿಯಲ್ಲದ ಬದಲಿ ಸಮಜಾಯಿಷಿಗಳಿವೆ. ಆದ್ದರಿಂದ ಪಿತೂರಿ ಇಲ್ಲ ಎಂಬ ವಿಚಿತ್ರ ತೀರ್ಮಾನಕ್ಕೆ ಬಂದಿದೆ. ಎರಡನೆಯದಾಗಿ ತರಂಗಾಂತರ–ಗುಚ್ಛದ ತಾಂತ್ರಿಕ ಮತ್ತು ವ್ಯಾಪಾರಿ ಅಂಶಗಳ ಬಗ್ಗೆ, ಅದರ ಲೈಸೆನ್ಸ್ ನೀತಿಯಲ್ಲಿ ಇರುವ ಸಂಕೀರ್ಣ ವಿಷಯಗಳ ಬಗ್ಗೆ ನ್ಯಾ. ಸೈನಿ ಗೆ ಯಾವುದೇ ಅರಿವು ಇದ್ದಂತೆ ಕಾಣುವುದಿಲ್ಲ. ಅದನ್ನೊಂದು ಸಾಮಾನ್ಯ ಪ್ರಕರಣವೆಂದು ಪರಿಗಣಿಸಿದ ಹಾಗಿದೆ.

ಎಂ.ಜಿ. ವೆಂಕಟೇಶ್


2 ಜಿ ತರಂಗಾಂತರ–ಗುಚ್ಛದ ಪ್ರಕರಣದಲ್ಲಿ ವಿಶೇಷ ನ್ಯಾಯಾಧೀಶ ಸೈನಿಯವರ ಸಾವಿರಾರು ಪುಟಗಳ ತೀರ್ಪಿನಲ್ಲಿ ಎ. ರಾಜಾ (ಯು.ಪಿ.ಎ. ಅವಧಿಯ ದೂರಸಂಪರ್ಕ ಸಚಿವರು) ಮತ್ತು ಅವರ ಮಿತ್ರರು ಯಾವ ಕ್ರಿಮಿನಲ್ ಅಪರಾಧವನ್ನು ಎಸಗಿಲ್ಲ ಮತ್ತು ಅವರು ಅನುಸರಿಸಿದ ಕ್ರಮದಲ್ಲಿ ಯಾವ ಅಕ್ರಮವಿಲ್ಲವೆಂದು ನಂಬಿದ್ದಾರೆಂದು ಎನಿಸುತ್ತದೆ. ಅವರ ಲೋಕದಲ್ಲಿ ತರಂಗ ಗುಚ್ಛ ವಿತರಣೆ, 2 ಜಿ ಲೈಸೆನ್ಸ್ ಪ್ರತ್ಯೇಕ ಲೋಕಕ್ಕೆ ಸೇರಿದ್ದು. ಸಿಎಜಿ, ಸುಪ್ರೀಂ ಕೋರ್ಟ್, ದೆಹಲಿ ಹೈಕೋರ್ಟ್ ಕಾರ್ಯನಿರ್ವಹಿಸಿದ ಆ ಲೋಕದಲ್ಲಿ, ರಾಜಾ ಮತ್ತು ಅವರ ಆಪ್ತಮಿತ್ರರು ನಿಯಮಗಳನ್ನು ಗಾಳಿಗೆ ತೂರಿ ಸ್ವೇಚ್ಛಾನುಸಾರವಾಗಿ ತಮಗೆ ಬೇಕಾದ ಅನುಕೂಲ ಪಡೆದುಕೊಂಡಿರುವುದನ್ನು ಗಮನಿಸಿರುತ್ತಾರೆ. ರಾಜಾರವರು ಕ್ರಿಮಿನಲ್ ಆರೋಪಗಳಿಂದ ಮುಕ್ತರಾದರೂ, ಈ ಮೂರು ಸಾಂವಿಧಾನಿಕ ಸಂಸ್ಥೆಗಳು ಅಂದಿನ ದೂರ ಸಂಪರ್ಕ ಸಚಿವರಾಗಿದ್ದ ರಾಜಾರವರನ್ನು – ತರಂಗ ಗುಚ್ಛದ ಬೆಲೆ ಕಡಿಮೆ ನಿಗದಿ ಪಡಿಸಿರುವ; "ಮೊದಲು ಬಂದವರಿಗೆ ಮೊದಲ ಆದ್ಯತೆ" ನಿಯಮಗಳನ್ನು ತಿರುಚಿರುವ; ಮತ್ತು ದೂರ ಸಂಪರ್ಕ ಇಲಾಖೆ ಪ್ರಕಾರ ಅರ್ಹತೆ ಇಲ್ಲದ ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿರುವ – ಗುರುತರ ತಪ್ಪುಗಳನ್ನು ಎಸಗಿರುವುದು ನಿರ್ವಿವಾದವೆಂದು ಭಾವಿಸಿವೆ.

ಸಿಎಜಿ, ಸುಪ್ರೀಂ ಕೋರ್ಟ್ ಮತ್ತು ದೆಹಲಿ ಹೈಕೋರ್ಟ್ 2 ಜಿ ಲೈಸೆನ್ಸ್ ಮತ್ತು ತರಂಗ ಗುಚ್ಛ ವಿತರಣೆಯ ವಿಷಯವನ್ನು ಬೇರೊಂದು ಆಯಾಮದಿಂದ ಪರೀಕ್ಷಿಸಿರುವುದು ನಿಜ. ಸಿಎಜಿಯವರು ಬೊಕ್ಕಸಕ್ಕೆ ನಷ್ಟವಾಗಿರುವ ಬಗ್ಗೆ ಪರಿಶೀಲನೆ ನಡೆಸಿದ್ದರು. ಸುಪ್ರೀಂ ಕೋರ್ಟ್ ಲೈಸೆನ್ಸ್ ವಿತರಣೆಯಲ್ಲಿ ಸಂವಿಧಾನಾತ್ಮಕವಾಗಿ ಕಾನೂನಿನ ಮುಂದೆ ಎಲ್ಲರೂ ಸಮವೆಂಬ ತತ್ವದ ಆಧಾರದಲಿತ್ತೇ ಎಂದು ಪರೀಕ್ಷಿಸಿತು. ದೂರ ಸಂಪರ್ಕ ಇಲಾಖೆ ನೀಡಿದ 122 ಲೈಸನ್ಸ್‌ಗಳ ಪೈಕಿ ಅರ್ಹತೆ ಇಲ್ಲದ 85 ಕಂಪನಿಗಳಿಗೆ ಹೇಗೆ ಲೈಸೆನ್ಸ್ ಕೊಡಲಾಯಿತು ಎಂಬುದನ್ನೂ ಸಿಎಜಿ ಮತ್ತು ಸುಪ್ರೀಂ ಕೋರ್ಟುಗಳೆರಡೂ ಪರೀಕ್ಷಿಸಿದ್ದವು. ರಾಜಾ ಮೊದಲು ಬಂದವರಿಗೆ ಮೊದಲ ಆದ್ಯತೆ ನಿಯಮವನ್ನು ಹೇಗೆ ಪಾಲಿಸಿದರು ಎಂಬುದನ್ನು ದೆಹಲಿ ಹೈಕೋರ್ಟ್ ಪರಿಶೀಲಿಸಿತು. ಸಿಎಜಿ ಮತ್ತು ಸುಪ್ರೀಂ ಕೋರ್ಟುಗಳೆರಡೂ ಸರಕಾರದ ಬೊಕ್ಕಸಕ್ಕೆ ಭಾರೀ ಹಾನಿಯಾಗಿದೆ ಎಂಬ ತೀರ್ಮಾನಕ್ಕೆ ಬಂದಿದ್ದವು. ಆದರೆ ಮೂರೂ ಸಂಸ್ಥೆಗಳೂ ರಾಜಾ ಮತ್ತು ಅವರ ಗುಂಪು ಅನುಸರಿಸಿದ ವಿಧಾನ ನಿಯಮಬಾಹಿರ, ಬೇಕಾಬಿಟ್ಟಿ ಮತ್ತು ಅಪ್ರಾಮಾಣಿಕವೆಂದು ಪರಿಗಣಿಸಿದ್ದವು.

ನ್ಯಾ. ಸೈನಿ ಅವರ 'ಇನ್ನೊಂದು ಲೋಕ'

ಸುಪ್ರೀಂ ಮತ್ತು ಹೈಕೋರ್ಟ್‌ಗಳಿಗೆ ಇದು ಸಿವಿಲ್ ವ್ಯಾಜ್ಯವಾದ ಪ್ರಕರಣವಾಗಿದ್ದರೆ, ವಿಶೇಷ ನ್ಯಾಯಾಲಯ ಈ ವಿಷಯವನ್ನು ಕ್ರಿಮಿನಲ್ ಉದ್ದೇಶದಿಂದ ಮತ್ತು ಕ್ರಿಮಿನಲ್ ಪಿತೂರಿ ದೃಷ್ಟಿಕೋನದಿಂದ ವಿಶ್ಲೇಷಿಸಿದೆ. ಕ್ರಿಮಿನಲ್ ಪ್ರಕರಣಗಳಲ್ಲಿ 'ಸಂದೇಹವಿಲ್ಲದಂತೆ ಸಾಬೀತು ಪಡಿಸುವುದು' ಅಗತ್ಯವಿರುತ್ತದೆಯಾದರೆ, ಸಿವಿಲ್ ಪ್ರಕರಣದಲ್ಲಿ "ನಡೆದಿರಬಹುದಾದ ಸಾಧ್ಯತೆ" ಮುಖ್ಯ ಅಂಶವಾಗಿರುತ್ತದೆ. ಬೊಕ್ಕಸಕ್ಕೆ ಉಂಟಾಗಿರುವ ನಷ್ಟ, ಅಪ್ರಾಮಾಣಿಕತೆ, ನ್ಯಾಯ ಸಮ್ಮತವಲ್ಲವೆಂದು ಸಾಕ್ಷಾಧಾರಗಳು ತೋರಿಸಿದರೂ, ಅವು ಕ್ರಿಮಿನಲ್ ಪ್ರಕರಣದಲ್ಲಿ ಸಾಕಾಗದೆ ಖುಲಾಸೆಯಾಗಬಹುದು. ರಾಜಾ ಅವರ (ಮತ್ತು ಇತರರ) ಅಪರಾಧ 'ಸಂದೇಹವಿಲ್ಲದಂತೆ ಸಾಬೀತು ಪಡಿಸುವುದು' ಸಾಧ್ಯವಾಗಿಲ್ಲವೆಂದು ವಾದಿಸಬಹುದು.

ವಿಶೇಷ ನ್ಯಾಯಾಲಯದ ತೀರ್ಪು ಖುಲಾಸೆ ಮಾಡುವುದಕ್ಕೆ ಸೀಮಿತಗೊಂಡಿದ್ದರೆ, ನಾವು ಒಪ್ಪದಿದ್ದರೂ ಅರ್ಥ ಮಾಡಿಕೊಳ್ಳ ಬಹುದಾಗಿತ್ತು. ಆದರೆ ಸೈನಿಯವರು ಬೊಕ್ಕಸಕ್ಕೆ ನಷ್ಟವಾಗಿರುವುದಕ್ಕೆ ಸಾಕ್ಷವಿಲ್ಲವೆಂದು ಮತ್ತು ಈ ಪ್ರಕರಣದಲ್ಲಿನ ಕೋಲಾಹಲ



ಮಾಧ್ಯಮ ಸೃಷ್ಟಿಯೆಂದು ತೀರ್ಪು ನೀಡಿರುತ್ತಾರೆ. ಇಲ್ಲೇ ನ್ಯಾ. ಸೈನಿ ಮತ್ತೊಂದು ಲೋಕದಲ್ಲಿರುವುದು. 2–ಜಿ ಬಗೆಗೆ ಪ್ರಕಟವಾದ ಹಿಂದಿನ ಹಲವು ಲೇಖನಗಳಲ್ಲಿ, ರಾಜಾ ತರಂಗ ಗುಚ್ಛದ ಬೆಲೆಯನ್ನು ಕಡಿಮೆ ದರದಲ್ಲಿ ನಿಗದಿಪಡಿಸಿರುವುದನ್ನೂ, ಮೊದಲು ಬಂದವರಿಗೆ ಮೊದಲ ಆದ್ಯತೆ ನೀತಿ ಬುಡಮೇಲು ಮಾಡಿ ತಮಗೆ ಬೇಕಾದ ಕಂಪನಿಗಳಿಗೆ ಅನುಕೂಲ ಕಲ್ಪಿಸಿದ್ದರಿಂದ ಆ ಕಂಪನಿಗಳು ಬಹುಮೌಲ್ಯವುಳ್ಳ ತರಂಗ ಗುಚ್ಛವನ್ನು ಕಡಿಮೆ ದರದಲ್ಲಿ ಪಡೆದು ಅದೇ ವಾಣಿಜ್ಯದ ಸರಕೆಂಬ ರೀತಿಯಲ್ಲಿ ಷೇರುಗಳನ್ನು ಹೆಚ್ಚಿನ ಬೆಲೆಗೆ ಮಾರಿರುವುದನ್ನೂ ವಿವರಿಸಲಾಗಿತ್ತು.

ತೀರ್ಪಿನ ಸಮಸ್ಯೆಗಳು

ಈ ಪ್ರಕರಣದಲ್ಲಿ ಸಿಬಿಐ ಸರಿಯಾದ ಪುರಾವೆಗಳನ್ನು ಒದಗಿಸಿಲ್ಲ ಎಂಬುದು ನಿಜವಲ್ಲ. ಸಿಬಿಐ ರಿಲಾಯನ್ಸ್ ನ ಬೇನಾಮಿ ಕಂಪನಿಯಾಗಿದ್ದ ಸ್ವಾನ್ ಟೆಲಿಕಾಂ ಗೆ ಲೈಸೆನ್ಸ್ ಸಿಕ್ಕಿದ ಪ್ರಕರಣವನ್ನು, ಅದರಲ್ಲಿನ ಹಲವು ಹುಳುಕುಗಳನ್ನು ಅದನ್ನು ಹಣ ಮಾಡಲು ಬಳಸಿದ ವಿಧಾನಗಳನ್ನೂ ಪ್ರಮುಖ ಪುರಾವೆಯಾಗಿ ಒದಗಿಸಿತ್ತು. ರಾಜಾ ಅವರ ಪಕ್ಷ ಡಿಎಂಕೆ ನಾಯಕತ್ವದ ಒಡೆತನಕ್ಕೆ ಸೇರಿದ ಕಲೈಂಗರ್ ಟಿವಿಗೆ 200 ಕೋಟಿ ರೂ.ಗಳನ್ನು ಕಾನೂನು ಬಾಹಿರವಾಗಿ ಈ ಹಗರಣದಿಂದ ಲಾಭ ಪಡೆದವರು ಕೊಟ್ಟಿದ್ದಾರೆ ಎಂಬ ಬಗ್ಗೆ ಪುರಾವೆಯನ್ನೂ ನ್ಯಾ. ಸೈನಿ ಪರಿಗಣಿಸಲಿಲ್ಲ.

ವಿಶೇಷ ಕೋರ್ಟಿನ ತೀರ್ಪಿನಲ್ಲಿ ಎರಡು ಪ್ರಮುಖ ಸಮಸ್ಯೆಗಳಿವೆ. ಒಂದು ಈ ಪ್ರಕರಣದ ಹಲವು ಅಂಶಗಳನ್ನು ಒಂದು ಪಿತೂರಿಯ ಪರಸ್ಪರ ನಿಕಟ ಸಂಬಂಧವಿದ್ದ ಹಲವು ಕೊಂಡಿಗಳಾಗಿ ವಿವರವಾಗಿ ಪರಿಶೀಲಿಸದೆ, ಅಂತಹ ಅಂಶಗಳನ್ನು ಬಿಡಿ ಬಿಡಿಯಾಗಿ ನೋಡಿದೆ. ಆ ಮೂಲಕ ಆ ಪ್ರತಿಯೊಂದು ಬಿಡಿ ಬಿಡಿ ಅಂಶಕ್ಕೆ ಪಿತೂರಿಯಲ್ಲದ ಬದಲಿ ಸಮಜಾಯಿಷಿಗಳಿವೆ. ಆದ್ದರಿಂದ ಪಿತೂರಿ ಇಲ್ಲ ಎಂಬ ವಿಚಿತ್ರ ತೀರ್ಮಾನಕ್ಕೆ ಬಂದಿದೆ. ಎರಡನೆಯದಾಗಿ ತರಂಗಾಂತರ–ಗುಚ್ಛದ ತಾಂತ್ರಿಕ ಮತ್ತು ವ್ಯಾಪಾರಿ ಅಂಶಗಳ ಬಗ್ಗೆ, ಅದರ ಲೈಸೆನ್ಸ್ ನೀತಿಯಲ್ಲಿ ಇರುವ ಸಂಕೀರ್ಣ ವಿಷಯಗಳ ಬಗ್ಗೆ ನ್ಯಾ. ಸೈನಿ ಗೆ ಯಾವುದೇ ಅರಿವು ಇದ್ದಂತೆ ಕಾಣುವುದಿಲ್ಲ. ಅದನ್ನೊಂದು ಸಾಮಾನ್ಯ ಪ್ರಕರಣವೆಂದು ಪರಿಗಣಿಸಿದ ಹಾಗಿದೆ.

ಟೆಲಿಕಾಂ ಹಗರಣಗಳ ಸರಣಿ – ದಿವ್ಯಮೌನ :

ಉದಾರೀಕರಣದ ಫಲಶೃತಿಯಾಗಿ ದೂರಸಂಪರ್ಕ ಕ್ಷೇತ್ರ 90 ರ ದಶಕದಿಂದ ವ್ಯಾಪಕವಾಗಿ ಬೆಳೆಯುತ್ತಿದೆ. 2003 ರಲ್ಲಿ ಇದ್ದ ದೂರವಾಣಿ ಸಂಖ್ಯೆ (ಸ್ಥಿರ ಮತ್ತು ಮೊಬೈಲ್) 6.47 ಕೋಟಿಯಾಗಿದ್ದರೆ 2010 ರ ವೇಳೆಗೆ 62 ಕೋಟಿ ದಾಟಿತ್ತು. ಸಹಜವಾಗಿ ಇದು ಅಂತರಾಷ್ಟ್ರೀಯ, ರಾಷ್ಟ್ರೀಯ ಬಂಡವಾಳ ಹೂಡಿಕೆದಾರರಿಗೆ ಹೆಚ್ಚು ಲಾಭಗಳಿಸಲು ಸಿದ್ಧ ಭೂಮಿಕೆಯನ್ನು ಒದಗಿಸಿದೆ. ಮೊದಲು ಸರ್ಕಾರಿ ಸ್ವಾಮ್ಯದಲ್ಲಿದ್ದ ಕ್ಷೇತ್ರ ಇತರ ಸ್ಪರ್ಧಿಗಳ ಪ್ರವೇಶದಿಂದ ಆ ಕಾರ್ಪೋರೇಟ್ ಹಿತಾಶಕ್ತಿಗಳಿಗೆ ಅನುಗುಣವಾದ ನೀತಿ ನಿಯಮಗಳನ್ನು ರೂಪಿಸುವುದು ನಡೆದಿದೆ. ಸಿಎಜಿ ವರದಿಯಲ್ಲಿನ "ಊಹಾತ್ಮಕ ನಷ್ಟದ ಬಗ್ಗೆ" ಸಾರಿ ಸಾರಿ ಹೇಳಿದ ಮಾಧ್ಯಮಗಳು ಹಿಂದೆ ನಡೆದಿರುವ ಅನೇಕ ಟೆಲಿಕಾಂ ಹಗರಣಗಳ ಬಗ್ಗೆ ಜಾಣಮೌನ ವಹಿಸಿವೆ.

2ಜಿ ಬರೆಗಿನ ಸಿಎಜಿ ವರದಿಯ ಏಣಿಯನ್ನೇರಿ ಅಧಿಕಾರಕ್ಕೆ ಬಂದ ಈಗಿನ ಸರ್ಕಾರಕ್ಕೆ ವರದಿ ಬಗ್ಗೆ ಅಸಡ್ಡೆ (ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಕರುಣಾನಿದಿ ಒಲ್ಮೆಕೆಯ ಉದ್ದೇಶ ಇರಬಹುದೇ?) ಕಂಡುಬರುತ್ತದೆ. ಈ ಜಾಣಮೌನದ ಪರದೆ ಸರಿಸಿದರೆ ನಮಗೆ ಕಾಣಸಿಗುವುದು ಹಗರಣಗಳ ಸರಮಾಲೆ. ದೂರ ಸಂಪರ್ಕ ಉಪಕರಣ ಖರೀದಿಯಲ್ಲಿ ಅವ್ಯವಹಾರಕ್ಕೆ ಅಂದಿನ ದೂರಸಂಪರ್ಕ ಸಚಿವ ಸುಖರಾಂ ಮತ್ತು ಅನೇಕ ಇಲಾಖಾ ಅಧಿಕಾರಿಗಳು ಜೈಲು ಶಿಕ್ಷೆ ಅನುಭವಿಸಿದ್ದರು. 1999 ರಲ್ಲಿ ಎನ್‌ಡಿಎ ಸರ್ಕಾರದ ದೂರ ಸಂಪರ್ಕ ಸಚಿವರಾಗಿದ್ದ ಜಗಮೋಹನ್‌ರವರ ರಾತ್ರೋರಾತ್ರಿ ಬದಲಾವಣೆ ಮತ್ತು ಅವರ ಜಾಗದಲ್ಲಿ ಬಂದ ಪ್ರಮೋದ ಮಹಾಜನ್ ಮತ್ತು ಅವರ ಅವಧಿಯಲ್ಲಿನ ಕ್ರಮಗಳು ಚರ್ಚೆಯಾಗುತ್ತಿಲ್ಲ. ಇವರ ಅವಧಿಯಲ್ಲಿ ಇಲಾಖೆ ರಿಲೆಯನ್ಸ್ ಕಂಪನಿಗೆ ಅನುಕೂಲವಾಗುವಂತೆ ಇಡೀ ನಿಯಮಗಳನ್ನು ಯಾವ ಭಯವೂ ಇಲ್ಲದೆ ರೂಪಿಸಿದ್ದು ಆ ಕಂಪನಿಯಿಂದ ಸರ್ಕಾರಕ್ಕೆ ಕಟ್ಟಬೇಕಿದ್ದ ಹಣ ಮಾತ್ರ ಯಾವುದೂ ಬಿಜೆಪಿಯವರಿಗಂತು ನೆನಪೇ ಇರಲಿಕ್ಕಿಲ್ಲ. ಯಾಕೆಂದರೆ ಅದು ಸ್ವಜಾತಿ ಸ್ವಚ್ಛ, ಯಾರೂ ಬೆರಳು ತೋರುವಂತಿಲ್ಲ. ಈ ವಿಷಯಗಳ ಬಗ್ಗೆಯೂ ಸಿಎಜಿ ವರದಿ ಮಾಡಿರುತ್ತಾರೆ.

ದೂರಸಂಪರ್ಕ ಕ್ಷೇತ್ರದಲ್ಲಿ ಆರೋಗ್ಯಕರ ಸ್ಪರ್ಧೆ ಸಮಾನ ಮಟ್ಟದ ಅವಕಾಶ ಯಾವುದೂ ಇರಲಿಲ್ಲ. 1999–2004 ರ ಅವಧಿಯಲ್ಲಿ ಸರ್ಕಾರ ಒದಗಿಸಿದ/ಸ್ಥಾಪಿಸಿದ ಮೂಲಭೂತ ಸೌಕರ್ಯಗಳನ್ನು ವ್ಯಾಪಕವಾಗಿ ಬಳಸಿಕೊಂಡು (ಆಪ್ಟಿಕಲ್ ಫೈಬರ್, ಟವರ್ಸ್) ಸರ್ಕಾರಿ ಸ್ವಾಮ್ಯ ಸಂಸ್ಥೆಗಳಾದ ಬಿಎಸ್‌ಎನ್‌ಎಲ್ ಮೊಬೈಲ್ ಕ್ಷೇತ್ರ ಪ್ರವೇಶಿಸಿಸದಂತೆ ತಡೆಹಿಡಿದದ್ದು, ಎನ್‌ಡಿಎ ಸರ್ಕಾರದ ಹೆಗ್ಗಳಿಕೆ. ನಂತರ ಆ ಸಂಸ್ಥೆ ಬೇಕಾಗಿರುವ ಉಪಕರಣ ಕೊಳ್ಳದಂತೆ ಮಾಡಿರುವುದು ಮತ್ತು ಈ ಸಂಸ್ಥೆ ಕ್ಷೇತ್ರಕ್ಕೆ ಕಾಲಿಡುವ ಇದ್ದ ಮೊದಲು ಒಳ ಬರುವ ಹೊರಹೋಗುವ ದರಗಳನ್ನು ಗಮನಿಸಿದರೆ ಕಾರ್ಪೋರೇಟ್ ಆಟ ಬಯಲಾಗುತ್ತದೆ. ಈಗ ಮೊಬೈಲ್ ಎಲ್ಲರಿಗೂ ಎಟುಕುವಂತಾಗಿರುವುದಕ್ಕೆ ಕಾರಣ ಬಿಎಸ್‌ಎನ್‌ಎಲ್ ಪ್ರವೇಶವೇ ಹೊರತು ಹಲವು ಖಾಸಗಿ ಕಂಪನಿಗಳ ಸ್ಪರ್ಧೆಯಲ್ಲ ಎಂದು ಎಲ್ಲರಿಗೂ ತಿಳಿದಿದೆ.

1.76 ಲಕ್ಷ ಕೋಟಿ ಹಗರಣವನ್ನು ಎಲ್ಲ ಹಗರಣಗಳ ಮಾತೃ ಹಗರಣವೆಂದು ಬೊಬ್ಬೆ ಹೊಡೆದಿದ್ದ ಶಕ್ತಿಗಳು ಈಗ ಲೆಕ್ಕಾಚಾರ ಅನುಮಾನಸ್ಪದ, ಉತ್ಪ್ರೇಕ್ಷಿತವೆನ್ನುವಂತೆ ನಡೆದುಕೊಳ್ಳುತ್ತಿದೆ. ಈ ಹಗರಣದಲ್ಲಿ ಲೈಸೆನ್ಸ್ ಮತ್ತು ಹಂಚಿಕೆಯಲ್ಲಿನ ಅಕ್ರಮ, ನಿಯಮಗಳ ತಿರುಚುವಿಕೆ ಅಪಾರದರ್ಶಕತೆ, ದೂರ ಸಂಪರ್ಕ ಪ್ರಾಧಿಕಾರದ ನಿಲುವು, ಅರ್ಹತೆಯಿಲ್ಲದ ಕಂಪನಿಗಳಿಗೆ ಲೈಸೆನ್ಸ್ ನೀಡಿಕೆ. ನೈಸರ್ಗಿಕ ಸಂಪನ್ಮೂಲಕ ಬಳಕೆಗೆ ರಾಷ್ಟ್ರೀಯ ನೀತಿ ಹತ್ತು ಹಲವಾರು ವಿಷಯಗಳಿದ್ದರೂ ಇದನ್ನು ಕೇವಲ ಸರ್ಕಾರಗಳ ಅಧಿಕಾರದ ದುರುಪಯೋಗವೆಂದು ಹೇಳಿದರೆ ಅಪೂರ್ಣವಾಗುತ್ತದೆ. ತಮ್ಮಗೆ ಬೇಕಾದಂತೆ ನಡೆದುಕೊಳ್ಳುವ ಸಚಿವರನ್ನೇ ನೇಮಿಸುವಂತೆ ಒತ್ತಡ ತರುವಷ್ಟು ಕಾರ್ಪೋರೇಟ್ ಕಂಪನಿಗಳು ಶಕ್ತವಾಗಿವೆ. ಅವುಗಳ ಅನಾರೋಗ್ಯಕರ ಪೈಪೋಟಿ, ಒಳಸುಳಿ ಈ ಪ್ರಕರಣವನ್ನು ಕೆದಕದಿರುವುದಕ್ಕೆ ಕಾರಣವಾಗಿವೆ. ಯುಪಿಎ ಅವಧಿಯಲ್ಲಿ ಟ್ರಾಯ್ ಅಧ್ಯಕ್ಷರಾಗಿದ್ದ ನೃಪೇನ್ ಮಿಶ್ರ ಈಗ ಪ್ರಧಾನ ಮಂತ್ರಿಯವರ ಸಚಿವಾಲಯದಲ್ಲಿರುವುದು ಈ ದಿವ್ಯಮೌನಕ್ಕೆ ಕಾರಣವಿರಬಹುದೇ? ಉತ್ತರ ಹುಡುಕಬೇಕಿದೆ.

ರಿಲಯನ್ಸ್ ಕಂಪನಿಯ ಅವ್ಯವಹಾರಗಳಂತೂ ಕಣ್ಣಿಗೆ ರಾಚುವಂತಿದ್ದು ಅದರಲ್ಲಿ 2007 ರಲ್ಲಿ ತರಂಗವನ್ನು 2001 ರ ದರದಲ್ಲಿ ಪಡೆದಿರುವುದು, ಬದಲಿ ತಂತ್ರಜ್ಞಾನ (ಸಿಡಿಎಂಎ) ಬಳಕೆಗೆ ದೂರ ಸಂಪರ್ಕ ಕಮಿಷನ್ ಪೂರ್ಣ ಪರವಾನಗಿ ಪಡೆಯದಿರುವುದು, ಈ ಬಗ್ಗೆ ರೂಪಿಸಿದ ನೀತಿಯನ್ನು 19–10–2007 ರಂದು ನೀಡಿದ್ದ ಪತ್ರಿಕಾ ಹೇಳಿಕೆ ರಿಲಯನ್ಸ್ ಸಂಸ್ಥೆಗೆ 18–10–2007 ರಂದೇ ತಲುಪಿರುತ್ತದೆ. ಯಾರು ಮತ್ತು ಯಾರಿಗಾಗಿ ಸರ್ಕಾರ ನಡೆಯುವುದು ಇದರಿಂದ ತಿಳಿಯಬಹುದು.

ಕಾಂಗ್ರೆಸ್ ಬಿಜೆಪಿ ಕೆಸರೆರಾಚಾಟದಲ್ಲಿ ಕಾರ್ಪೋರೇಟ್ ಮೋಸ ವಂಚನೆ ವ್ಯವಸ್ಥಿತವಾಗಿ ಮುಚ್ಚಿ ಹಾಕಲಾಗುತ್ತಿದೆ. ಸರ್ವವ್ಯಾಪಿಯಾದ ಮೊಬೈಲ್ ಕ್ಷೇತ್ರದಲ್ಲಿ ಕಾಡುತ್ತಿರುವ ತಾಂತ್ರಿಕ ದೋಷ ಅದರಲ್ಲೂ ಕರೆ ಕುಸಿತ (Call drop) ದಿಂದ ಗ್ರಾಹಕರು ನಿರಂತರ ವಂಚನೆಗೆ ಒಳಗಾಗುತ್ತಿದ್ದಾರೆ. ನೈಸರ್ಗಿಕ ಸಂಪನ್ಮೂಲ ಬಳಕೆ ಪಾರದರ್ಶಕವಾಗಿ ಜನಸ್ನೇಹಿಯಾಗಿರಬೇಕೆ ಹೊರತು ಕಾರ್ಪೋರೇಟ್ ತುಷ್ಟೀಕರಣಕ್ಕಾಗಿ ಅಲ್ಲವೆಂದು ಗಟ್ಟಿಯಾಗಿ ಸಾರುವ ಜನಪರ ದನಿ ಮೊಳಗಬೇಕಿದೆ.

ದೂರ ಸಂಪರ್ಕದಲ್ಲಿನ ಈ ರೀತಿಯ ಹಗರಣ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸುವ ಎಲ್ಲ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ. ತರಂಗ, ಅದಿರು, ಖನಿಜ, ನದೀನೀರು ಯಾವುದಾದರೂ ಕ್ಷೇತ್ರದಲ್ಲಿ ಬಳಕೆಯಾಗುವಂತಿದ್ದರೆ ಅದರ ವಿತರಣೆ ಬಗ್ಗೆ, ಸುಪ್ರೀಂ ಕೋರ್ಟು 2ಜಿ ತೀರ್ಪಿನಲ್ಲೆ ಹೇಳಿದಂತೆ ಸಾರ್ವಜನಿಕ ಹಿತಾಸಕ್ತಿಯನ್ನು ಎತ್ತಿ ಹಿಡಿಯುವ ರಾಷ್ಟ್ರೀಯ ನೀತಿಯಿರಬೇಕಾಗಿರುತ್ತದೆ. ಇಲ್ಲದಿದ್ದರೆ ಏನಾಗುತ್ತದೆ ಎಂಬುದಕ್ಕೆ, ಲೈಸೆನ್ಸ್/ಪರ್ಮಿಟ್ ಆಧಾರದಲ್ಲಿ ಸಾಗಿಸಿದ ಖನಿಜ ಸಂಪತ್ತು ಮತ್ತು ಅದರ ಸುತ್ತಲಿನ ಹಗರಣ ನಮ್ಮ ರಾಜ್ಯದಲ್ಲಿಯೇ ನಮ್ಮ ಕಣ್ಣ ಮುಂದಿದೆ. ●



ಗಣತಂತ್ರ ಸಂವಿಧಾನಕ್ಕೆ ಈಗ ಅತಿ ದೊಡ್ಡ ಬೆದರಿಕೆ

ಭಾರತವನ್ನು ಒಂದು ಗಣತಂತ್ರವಾಗಿ ಮಾಡಿದ್ದು ಸಂವಿಧಾನ. ಈ ಸಂವಿಧಾನ ಸದ್ಯಕ್ಕೆ ತನ್ನ ಚರಿತ್ರೆಯಲ್ಲೇ ಅತಿ ದೊಡ್ಡ ಬೆದರಿಕೆಯನ್ನು ಎದುರಿಸುತ್ತಿದೆ. ಆ ಬೆದರಿಕೆ ಬಂದಿರುವುದು ಅದನ್ನು ನಡೆಸಬೇಕಾದವರಿಂದಲೇ. ಈ ಪ್ರಹಾರವನ್ನು ಪ್ರತಿರೋಧಿಸಲೇ ಬೇಕು, ಅದನ್ನು ಹಿಮ್ಮೆಟ್ಟಿಸಲೇ ಬೇಕು. ಜನತೆ ಮಾತ್ರವೇ ಅದನ್ನು ಮಾಡಲು ಸಾಧ್ಯ, ಏಕೆಂದರೆ ಅಂತಿಮವಾಗಿ ಅವರೇ ಅದರ ರಕ್ಷಕರು.



ಪ್ರಕಾಶ ಕಾರಟ್

ದೇಶವು ಗಣತಂತ್ರದ 68ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ, ಭಾರತವನ್ನು ಒಂದು ಗಣತಂತ್ರವಾಗಿ ಮಾಡಿದ್ದು ಜನವರಿ 26, 1950ರಂದು ಜಾರಿಗೆ ಬಂದ ಸಂವಿಧಾನ ಎಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯ. ಇದೀಗ ತನ್ನ ಚರಿತ್ರೆಯಲ್ಲೇ ಅತಿ ದೊಡ್ಡದಾದ ಬೆದರಿಕೆ ಬಂದಿದೆ ಎಂಬುದು ಒಂದು ಕಳೆಗುಂದಿಸುವ ಸಂಗತಿ.

ಭಾರತ ಜಾತ್ಯತೀತತೆಯನ್ನು ಆಧರಿಸಿದ ಒಂದು ಸಂಸದೀಯ ಪ್ರಜಾಪ್ರಭುತ್ವವಾದದ್ದು ಈ ಸಂವಿಧಾನದಿಂದಾಗಿಯೇ. ಜನಾಂಗ, ಧರ್ಮ, ಪಂಥ ಅಥವ ಲಿಂಗದ ತಾರತಮ್ಯವಿಲ್ಲದೆ ಎಲ್ಲ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಕೊಡಮಾಡಿದ್ದು ಇದೇ ಸಂವಿಧಾನ. ಅದು ಅಲ್ಪಸಂಖ್ಯಾತರು ಮತ್ತು ದಲಿತರು, ಆದಿವಾಸಿಗಳು ಮುಂತಾದ ಸಾಮಾಜಿಕವಾಗಿ ದಮನಕ್ಕೊಳಗಾಗಿರುವ ಗುಂಪುಗಳ ಹಕ್ಕುಗಳನ್ನು ಗುರುತಿಸಿದೆ.

ಸಂವಿಧಾನದ ಮೂಲ ನಿಯಮಗಳಿಗೆ ಬೆದರಿಕೆ ಅದನ್ನು ಎತ್ತಿಹಿಡಿಯುವ ಮತ್ತು ಅದರ ಸಂಸ್ಥೆಗಳನ್ನು ಕ್ರಿಯೆಗಿಳಿಸುವ ಕರ್ತವ್ಯವನ್ನು ಯಾರಿಗೆ ವಹಿಸಿಕೊಡಲಾಗಿದೆಯೋ ಅವರಿಂದಲೇ ಹೊಮ್ಮಿದೆ. ಆಳುವ ಬಿಜೆಪಿ-ಆರೆಸ್ಸೆಸ್ ಕೂಟ ಹಿಂದುತ್ವದ ತತ್ವಕ್ಕೆ ಬದ್ಧವಾಗಿವೆ, ಇದು ಸಂವಿಧಾನದ ಮೂಲ ಮೌಲ್ಯಗಳಿಗೆ ಪ್ರತಿಕೂಲವಾಗಿರುವಂತದ್ದು.

ಆರೆಸ್ಸೆಸ್ ಮತ್ತು ಅದರ ಸಿದ್ಧಾಂತಿಗಳು ಎಂದೂ ಸಂವಿಧಾನವನ್ನು ಕುರಿತಂತೆ ತಮ್ಮ ತುಚ್ಛೀಕಾರವನ್ನು ಅಡಗಿಸಿಟ್ಟಿಲ್ಲ. ಆರೆಸ್ಸೆಸ್‌ನ ಎರಡನೇ ಸರಸಂಘಚಾಲಕ ಎಂಎಸ್ ಗೋಲ್ವಾಲ್ಕರ್ ಪ್ರಕಾರ, ಸಂವಿಧಾನ "ಪಾಶ್ಚಿಮಾತ್ಯ ದೇಶಗಳ ವಿವಿಧ ಸಂವಿಧಾನಗಳಿಂದ ವಿವಿಧ ವಿಧಿಗಳನ್ನು ಎತ್ತಿಕೊಂಡು ಸಾಂಗತ್ಯವಿಲ್ಲದೆ ಪೋಣಿಸಿದ" ದಸ್ತಾವೇಜು. ಇನ್ನೊಬ್ಬ ಆರೆಸ್ಸೆಸ್ ಮುಖಂಡರು ಮತ್ತು ಜನಸಂಘದ ಅಧ್ಯಕ್ಷರಾಗಿದ್ದ ದೀನ್ ದಯಾಳ್ ಉಪಾಧ್ಯಾಯರು ಇದೇ ವಿಚಾರವನ್ನು ಪ್ರತಿಧ್ವನಿಸುತ್ತ ಸಂವಿಧಾನ ನಕಲು ಮಾಡಿದಂತದ್ದು, ಭಾರತದ ಬದುಕು ಮತ್ತು ಆದರ್ಶಗಳಿಗೆ ಹೊರತಾದದ್ದು ಎಂದಿದ್ದರು. ಅವರಿಗೆಲ್ಲ ಬೇಕಾಗಿದ್ದದ್ದು ಭಾರತದ ಪ್ರಾಚೀನ ಸಂಸ್ಕೃತಿಗೆ ಮತ್ತು ಪ್ರಕೃತಿಗೆ ಸರಿ ಹೊಂದುವಂತಹ ಒಂದು ಸಂವಿಧಾನ, ಬಹುಶಃ "ಮೊದಲ ಕಾನೂನುಕಾರ"' ಮನು ವಿರಚಿತ ಮನುಸ್ಮೃತಿಯೂ ಇದರಲ್ಲಿ ಸೇರಿದೆ.

ಮೋದಿ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಮಂತ್ರಿಗಳು ಮತ್ತು ವಿವಿಧ ಪ್ರಭುತ್ವ ಸಂಸ್ಥೆಗಳಲ್ಲಿ ಪ್ರಮುಖ ಸ್ಥಾನಗಳಲ್ಲಿ ಇರುವವರು ಸಂವಿಧಾನವನ್ನು ಬದಲಿಸುವ ಬಗ್ಗೆ ಮಾತಾಡುತ್ತಲೇ ಇದ್ದಾರೆ. ಇಂತಹ ತೀರ ಇತ್ತೀಚಿನ ಅಭಿವ್ಯಕ್ತಿ ಎಂದರೆ ಒಬ್ಬ ಕೇಂದ್ರ ಮಂತ್ರಿಯಾದ ಅನಂತಕುಮಾರ ಹೆಗ್ಡೆಯದ್ದು. ಮುಂಬರುವ ದಿನಗಳಲ್ಲಿ ಸಂವಿಧಾನವನ್ನು ಬದಲಿಸಲಾಗುವುದು ಎಂದು ಅವರು ಸಾರಿದ್ದಾರೆ. ಉತ್ತರಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ 'ಜಾತ್ಯತೀತ' ಎಂಬ ಪದ ಸ್ವಾತಂತ್ರ್ಯದ ನಂತರ ಹೇಳಿರುವ ಅತಿ ದೊಡ್ಡ ಸುಳ್ಳು ಎಂದು ಸಾರಿದ್ದಾರೆ, ಆಮೂಲಕ ಸಂವಿಧಾನದ ಒಂದು ಮೂಲ ನಿಯಮದ ಮೇಲೆ ದಾಳಿ ಮಾಡಿದ್ದಾರೆ.

ಸಂವಿಧಾನದ ವಿಭಿನ್ನ ಆಯಾಮಗಳು ದಾಳಿಗೊಳಗಾಗಿವೆ. ಸಂವಿಧಾನ ಪ್ರತಿಪಾದಿಸುವ ವೈಜ್ಞಾನಿಕ ಮನೋಭಾವ ಹಿಂದುತ್ವದ ಭಕ್ತರುಗಳಿಗೆ ವರ್ಜ್ಯ. ಅವೈಜ್ಞಾನಿಕ ವಿಚಾರಗಳು ಮತ್ತು ವಿಚಾರಹೀನತೆಗೆ ಪ್ರೋತ್ಸಾಹ ಈ ಮಂದಿಯ ಮುಖ್ಯ ಲಕ್ಷಣ. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ರಾಜ್ಯಮಂತ್ರಿ ಸತ್ಯಪಾಲ್ ಸಿಂಗ್ ಡಾರ್ವಿನ್‌ರವರ ವಿಕಾಸವಾದದ ಸಿದ್ಧಾಂತ ವೈಜ್ಞಾನಿಕವಾಗಿ ತಪ್ಪು ಎಂದಿರುವುದು ಇದಕ್ಕೆ ತೀರಾ ಇತ್ತೀಚಿನ ಉದಾಹರಣೆ.

ಈ ಸಂದರ್ಭದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ನವಂಬರ್ 25, 1949ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಕೊನೆಯ ಭಾಷಣದಲ್ಲಿ ನೀಡಿದ ಎಚ್ಚರಿಕೆಯನ್ನು ನೆನಪಿಸಿಕೊಳ್ಳುವುದು ಸೂಕ್ತ : "ಒಂದು ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ಪ್ರಸ್ತುತ ದುಡಿಸಬೇಕಾದವರು ಒಂದು ಕೆಟ್ಟ ಗುಂಪಾದರೆ ಅದು ಕೆಟ್ಟದಾಗುವುದು ಖಂಡಿತ ಎಂದು ನನ್ನ ಭಾವನೆ". ಪ್ರಸ್ತುತ ಅದನ್ನು ನಡೆಸಬೇಕಾದವರು ನಿಜವಾಗಿಯೂ ಒಂದು ಕೆಟ್ಟ ಗುಂಪು. ಬಿಜೆಪಿ ಮತ್ತು ಆರೆಸ್ಸೆಸ್‌ನ ಅಂತಿಮ ಗುರಿ ಈ ಸಂವಿಧಾನವನ್ನೇ ಬದಲಿಸುವುದು ಎಂಬ ಆತಂಕ ಉಂಟಾಗಿರುವುದು ಸಹಜವೇ. ಈಗ ಆಗುತ್ತಿರುವುದು ಅದನ್ನು ನಡೆಸಬೇಕಾದವರೇ ಅದನ್ನು ಬುಡಮೇಲು ಮಾಡುತ್ತಿರುವ ಕೆಲಸ.

ಸಂವಿಧಾನದ ಅಡಿಯಲ್ಲಿರುವ ಪ್ರತಿಯೊಂದು ಸಂಸ್ಥೆಯೂ, ಅದು ನ್ಯಾಯಾಂಗವಿರಬಹುದು, ನಾಗರಿಕ ಸೇವಾ ವ್ಯವಸ್ಥೆಯಿರಬಹುದು, ಅಥವ ಸಶಸ್ತ್ರ ಪಡೆಗಳಿರಬಹುದು- ಎಲ್ಲವನ್ನೂ ಒಳಗಿನಿಂದಲೇ ಕೊರೆದು ಹಾಕಲಾಗುತ್ತಿದೆ, ಅವುಗಳ ಸಮಗ್ರತೆಗೆ ಧಕ್ಕೆ ತರಲಾಗುತ್ತಿದೆ. ಸಂವಿಧಾನಿಕ ಹುದ್ದೆಗಳನ್ನು ಹೊಂದಿರುವವರು, ರಾಜ್ಯಪಾಲರುಗಳು ಮುಂತಾದವರು ಸಂವಿಧಾನ-ವಿರೋಧಿ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದಾರೆ.

ಸಂವಿಧಾನವನ್ನು ದುರ್ಬಲಗೊಳಿಸುತ್ತಿರುವುದು, ಅದನ್ನು ಕೊರೆದು ಹಾಕುತ್ತಿರುವುದು ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಒಂದು ಹಲ್ಲೆ. ಅದು ಜಾತ್ಯತೀತ-ಪ್ರಜಾಸತ್ತಾತ್ಮಕ ಗಣತಂತ್ರಕ್ಕೇ ಒಂದು ದೊಡ್ಡ ಬೆದರಿಕೆ. ಈ ಪ್ರಹಾರವನ್ನು ಪ್ರತಿರೋಧಿಸಲೇ ಬೇಕು, ಅದನ್ನು ಹಿಮ್ಮೆಟ್ಟಿಸಲೇ ಬೇಕು. ಜನತೆ ಮಾತ್ರವೇ ಅದನ್ನು ಮಾಡಲು ಸಾಧ್ಯ, ಏಕೆಂದರೆ ಅಂತಿಮವಾಗಿ ಅವರೇ ಅದರ ರಕ್ಷಕರು. ○

ಗಣತಂತ್ರ ದಿನ-2018

ವ್ಯಂಗ್ಯಚಿತ್ರಕಾರರು ಕಂಡಂತೆ

ಕರ್ಣಿ ಸೇನಾ ಹಿಂಸಾಚಾರ



ಗಣತಂತ್ರದಿನದ ಪರೇಡಿನಲ್ಲಾದರೂ ಪ್ರಭುತ್ವದ ಶಕ್ತಿಯನ್ನು ನಾವು ನೋಡಬಹುದಲ್ಲ!

ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್ ಪೋಸ್ಟ್

ಗಣತಂತ್ರ ದಿನದ ಪರೇಡಿನಲ್ಲಿ ಬಸ್ ಸುಡುವ ಕರ್ಣಿಸೇನಾ ಸ್ತಬ್ಧ ಚಿತ್ರ ಪ್ರದರ್ಶನಕ್ಕೆ ಜೈ!



ವ್ಯಂಗ್ಯಚಿತ್ರ: ಸುಭಾನಿ, ಡೆಕ್ಕನ್ ಕ್ರಾನಿಕಲ್

ನೈತಿಕ ಪೋಲಿಸ್‌ಗಿರಿಯ ಹೊಸ ತುಕಡಿ

ಆಧಾರಹೀನ ಊಹಾಪೋಹಗಳು

ಪುಟ 2 ರಿಂದ

ಅಥವ ಒಳಗುಂಪುಗಳಿಗೆ ಅನುಮತಿ ಇಲ್ಲ. ಪಕ್ಷದ ಸಾಮೂಹಿಕ ನಿರ್ಧಾರಗಳನ್ನು ಉಲ್ಲಂಘಿಸುವವರು ಮತ್ತು ಅಪ್ರಸ್ತುತ ಕಾರಣಗಳಿಗಾಗಿ ಗುಂಪಾಗುವುದನ್ನು ಮಾತ್ರ ಗುಂಪುಗಾರಿಕೆ ಎಂದು ಪರಿಗಣಿಸಲಾಗುತ್ತದೆ.

ಈ ನಿರ್ದಿಷ್ಟ ಸಂದರ್ಭದಲ್ಲಿ, ಕೇಂದ್ರ ಸಮಿತಿ ಪಕ್ಷದ ಮಹಾಧಿವೇಶನದಲ್ಲಿ ಮಂಡಿಸಬೇಕಾದ ಕರಡು ರಾಜಕೀಯ ಠರಾವನ್ನು ಚರ್ಚಿಸಿ ಅಂತಿಮಗೊಳಿಸುತ್ತಿತ್ತು. ಇದು ಪಕ್ಷದ ಸಂವಿಧಾನದ ಅಡಿಯಲ್ಲಿ ಕೇಂದ್ರ ಸಮಿತಿಗೆ ವಹಿಸಿರುವ ಜವಾಬ್ದಾರಿ. ಇದನ್ನು ಕೇಂದ್ರ ಸಮಿತಿ ಎರಡು ತಿಂಗಳ ಮೊದಲು ಬಿಡುಗಡೆ ಮಾಡಿ, ಆಮೂಲಕ ಎಲ್ಲ ಪಕ್ಷದ ಘಟಕಗಳು ಮತ್ತು ಸದಸ್ಯರಿಗೆ ಇದನ್ನು ಚರ್ಚಿಸಲು ಸಮಯ ಸಿಗುವಂತೆ ಮಾಡಬೇಕೆಂದು ಪಕ್ಷದ ಸಂವಿಧಾನ ವಿಧಿಸಿದೆ. ಅಲ್ಲದೆ ಸಂವಿಧಾನ ಯಾವುದೇ ಪಕ್ಷದ ಘಟಕ ಅಥವ ಸದಸ್ಯರು ನೇರವಾಗಿ ಕೇಂದ್ರಸಮಿತಿಗೆ ತಿದ್ದುಪಡಿಗಳನ್ನು ಕಳಿಸಲು ಅವಕಾಶ ಒದಗಿಸುತ್ತದೆ. ಈ ತಿದ್ದುಪಡಿಗಳ ಒಂದು ವರದಿಯನ್ನು ಪಕ್ಷದ ಮಹಾಧಿವೇಶನದ ಮುಂದೆ ಇಡಬೇಕಾಗುತ್ತದೆ.

ಕಳೆದ ನಾಲ್ಕು ತಿಂಗಳಿಂದ ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ಕರಡು ರಾಜಕೀಯ ಠರಾವನ್ನು ಸಿದ್ಧಪಡಿಸುವಲ್ಲಿ ತೊಡಗಿದ್ದವು. ಇದು ಕರಡನ್ನು ಸಿದ್ಧಪಡಿಸಲು ಮತ್ತು ಅದನ್ನು ಮಹಾಧಿವೇಶನದ ಎರಡು ತಿಂಗಳು ಮೊದಲು ಬಿಡುಗಡೆ ಮಾಡಲು ತಗಲುವ ಸಾಮಾನ್ಯ ಅವಧಿ. ಕರಡು ರಾಜಕೀಯ ಠರಾವು ಪಕ್ಷದ ಮಹಾಧಿವೇಶನ ಅದನ್ನು ಅಂಗೀಕರಿಸಿದ ಮೇಲೆ ಮುಂದಿನ ಮೂರು ವರ್ಷ ಅನುಸರಿಸಬೇಕಾದ ರಾಜಕೀಯ-ಕಾರ್ಯತಂತ್ರಾತ್ಮಕ ಮಾರ್ಗವನ್ನು ಪ್ರಸ್ತಾವಿಸುತ್ತದೆ.

ಪಕ್ಷದ ಮಹಾಧಿವೇಶನ ನಡೆಯುವ ವೇಳೆಗೆ ಮೋದಿ ಸರಕಾರ ಅಧಿಕಾರಕ್ಕೆ ಬಂದು ಸುಮಾರು ನಾಲ್ಕು ವರ್ಷಗಳಾಗುತ್ತವೆ. ದೇಶ ಬಿಜೆಪಿ-ಆರೆಸ್ಸೆಸ್ ಪ್ರಭುತ್ವ ಅಧಿಕಾರದ ಚುಕ್ಕಾಣಿ ಹಿಡಿದುದರ ಗಂಭೀರ ಪರಿಣಾಮಗಳನ್ನು ಎದುರಿಸುತ್ತಿದೆ. ಆದ್ದರಿಂದ ಈ ಬೆದರಿಕೆಯನ್ನು ಎದುರಿಸಬಲ್ಲ ಒಂದು ಪರಿಣಾಮಕಾರಿ ರಾಜಕೀಯ-ಕಾರ್ಯತಂತ್ರಾತ್ಮಕ ಮಾರ್ಗವನ್ನು-ಬಿಜೆಪಿಯನ್ನು ರಾಜಕೀಯವಾಗಿ, ಸೈದ್ಧಾಂತಿಕವಾಗಿ ಎದುರಿಸಿ ಹೋರಾಡಬಲ್ಲ ಮತ್ತು ಮೋದಿ ಸರಕಾರವನ್ನು ಸೋಲಿಸಲು ಜನಗಳನ್ನು ಅಣಿನೆರೆಸಬಲ್ಲ ಒಂದು ಕಾರ್ಯತಂತ್ರದ ನಿಲುವನ್ನು ರೂಪಿಸಲು ಪೊಲಿಟ್‌ಬ್ಯುರೊ ಮತ್ತು ಕೇಂದ್ರ ಸಮಿತಿ ತೀವ್ರ ಚರ್ಚೆಗಳನ್ನು ನಡೆಸುವುದು ಸಹಜವೇ ಆಗಿತ್ತು.

ಸಿಪಿಐ(ಎಂ) ಅಂಗೀಕರಿಸುವ ರಾಜಕೀಯ ನಿಲುವಿನ ಬಗ್ಗೆ ಆಸಕ್ತಿ ಮತ್ತು ಕಾಳಜಿ ಬಿಜೆಪಿಯನ್ನು ಎದುರಿಸಲು ಒಂದು ಪರಿಣಾಮಕಾರಿ ಐಕ್ಯತೆಯನ್ನು ಬೆಸೆಯಬೇಕೆಂಬ ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಮನೋಭಾವದ ಜನಗಳಲ್ಲಿ ವ್ಯಾಪಿಸಿರುವ ಆಶಯದಿಂದ ಮೂಡಿಬಂದಿರುವಂತದ್ದು. ಪಕ್ಷದ ಮಹಾಧಿವೇಶನ ಅಂಗೀಕರಿಸುವ ರಾಜಕೀಯ-ಕಾರ್ಯತಂತ್ರಾತ್ಮಕ ನಿಲುವು ಈ ಆಶಯವನ್ನು ಈಡೇರಿಸುತ್ತದೆ. ಪಕ್ಷವು ಮುಂಬರುವ ವಿಧಾನಸಭಾ ಮತ್ತು ಲೋಕಸಭಾ ಚುನಾವಣೆಗಳಿಗೆ ಮೂರ್ತ ಕಾರ್ಯತಂತ್ರಗಳನ್ನು ಅಂಗೀಕರಿಸುತ್ತದೆ.

ಕರಡು ರಾಜಕೀಯ ಠರಾವಿನ ಮೇಲೆ ಪಕ್ಷದಲ್ಲಿನ ಆಂತರಿಕ ಚರ್ಚೆಗಳ ಪ್ರಕ್ರಿಯೆ ಜನವರಿ 18 ರಿಂದ 22 ರ ವರೆಗೆ ಹೈದರಾಬಾದಿನಲ್ಲಿ ನಡೆಯಲಿರುವ ಪಕ್ಷದ ಮಹಾಧಿವೇಶನದಲ್ಲಿ ಸಮಾರೋಪಗೊಳ್ಳುತ್ತದೆ ಮತ್ತು ನಿರ್ಧಾರಗೊಳ್ಳುತ್ತದೆ. ಈ ಮಹಾಧಿವೇಶನದಲ್ಲಿ ಎಲ್ಲ ರಾಜ್ಯಗಳಿಂದ ಮತ್ತು ವಿವಿಧ ಸಾಮೂಹಿಕ ರಂಗಗಳಲ್ಲಿ ದುಡಿಯುತ್ತಿರುವ ಚುನಾಯಿತ ಪ್ರತಿನಿಧಿಗಳು ಪಾಲ್ಗೊಳ್ಳುತ್ತಾರೆ. ಇಲ್ಲಿಯೂ, ಮಹಾಧಿವೇಶನ ಪಕ್ಷದ ಅತ್ಯುನ್ನತ ಸಂಸ್ಥೆಯಾದ್ದರಿಂದ ಪ್ರತಿನಿಧಿಗಳಿಗೆ ಕರಡು ರಾಜಕೀಯ ಠರಾವಿನ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮತ್ತು ಯಾವುದೇ ಬದಲಾವಣೆಗಳನ್ನು ಸೂಚಿಸುವ, ತಿದ್ದುಪಡಿಗಳನ್ನು ಮಂಡಿಸುವ ಹಕ್ಕು ಮತ್ತು ಸ್ವಾತಂತ್ರ್ಯ ಇರುತ್ತದೆ.

ಪಕ್ಷದ ಮಹಾಧಿವೇಶನ ರಾಜಕೀಯ ಠರಾವನ್ನು ಚರ್ಚಿಸಿ ಅಂಗೀಕರಿಸಿದ ಮೇಲೆ, ಅದು ಪಕ್ಷದ ಪ್ರಸಕ್ತ ರಾಜಕೀಯ- ಕಾರ್ಯತಂತ್ರಾತ್ಮಕ ನಿಲುವು ಆಗಿ ಬಿಡುತ್ತದೆ. ಪ್ರತಿಯೊಬ್ಬ ಪಕ್ಷದ ಸದಸ್ಯ ಈ ಮೊದಲು ಯಾವುದೇ ಅಭಿಪ್ರಾಯ ಹೊಂದಿರಲಿ, ಪ್ರಜಾಸತ್ತಾತ್ಮಕ ಕೇಂದ್ರವಾದದ ನೀತಿಗಳಿಗೆ ಅನುಗುಣವಾಗಿ ಪಕ್ಷದ ಅಂಗೀಕೃತ ರಜಕೀಯ ನಿಲುವನ್ನು ಜಾರಿಗೆ ತರಲು ಒಂದಾಗಬೇಕು.

ಹೀಗೆ ಪಕ್ಷದೊಳಗೆ 'ಬಿಕ್ಕಟ್ಟು' ಮತ್ತು ಗುಂಪುಗಾರಿಕೆಯ ವಿವಾದಗಳನ್ನು ಕುರಿತಾದ ಲಂಗುಲಗಾಮಿಲ್ಲದ, ಆಧಾರಹೀನ ಊಹಾಪೋಹಗಳು ನಿಂತು ಹೋಗುತ್ತವೆ.

ಸಿಪಿಐ(ಎಂ) ಚೈತನ್ಯಪೂರ್ಣ ಆಂತರಿಕ ಪ್ರಜಾಪ್ರಭುತ್ವ ಮತ್ತು ಅದರ ಜೊತೆಗೆ ಕೇಂದ್ರೀಕೃತ ಶಿಸ್ತಿನ ಹೆಮ್ಮೆಯ ಪರಂಪರೆಯನ್ನು ಹೊಂದಿದೆ. 22ನೇ ಮಹಾಧಿವೇಶನ ಇದನ್ನು ಸಾಕಾರಗೊಳಿಸುತ್ತದೆ ಮತ್ತು ಈ ಪರಂಪರೆಯನ್ನು ಮುಂದುವರೆಸುತ್ತದೆ.

ನೂತನ ಪಿಂಚಣಿ ಯೋಜನೆಯನ್ನು ವಿರೋಧಿಸಿ ರಾಜ್ಯ ಸರ್ಕಾರಿ ನೌಕರರ ಯಶಸ್ವಿ “ಫ್ರೀಡಂ ಪಾರ್ಕ್ ಚಲೋ”

ಎಸ್.ಎಸ್.ಹದ್ಲಿ / ಸುಲೋಚನಾ



ರಾಜ್ಯದ ನಾನಾ ಭಾಗಗಳಿಂದ ಸುಮಾರು 35 ಸಾವಿರಕ್ಕೂ ಹೆಚ್ಚು ರಾಜ್ಯ ಸರ್ಕಾರಿ ನೌಕರರು ಜನವರಿ 20ರಂದು ಬೆಂಗಳೂರಿನ ಹೃದಯ ಭಾಗವಾದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಕಿಕ್ಕಿರಿದು ನೆರೆದಿದ್ದರು. ನಗರದ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಿ, ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ನಡೆಸಿ ಆಕ್ರೋಶ ವ್ಯಕ್ತಪಡಿಸಿದ ಸಂದರ್ಭವದು. ಅಲ್ಲಿ ನೆರೆದಿದ್ದ ಎಲ್ಲ ನೌಕರರು ಒಂದು ದಿನದ ಉಪವಾಸ ಧರಣಿ ನಡೆಸಿದರು. ಎಲ್ಲರ ಧ್ವನಿಯೂ ಒಂದೇ ಆಗಿತ್ತು: “ನೂತನ ಪಿಂಚಣಿ ಯೋಜನೆ ರದ್ದುಗೊಳಿಸಿ, ನಿಶ್ಚಿತ ಪಿಂಚಣಿ ಜಾರಿಗೆ ತನ್ನಿ”.

ರಾಜ್ಯದಲ್ಲಿ ಸುಮಾರು ಒಟ್ಟು 3 ಲಕ್ಷ 50 ಸಾವಿರ ಎನ್.ಪಿ.ಎಸ್ (ನೇಶನಲ್ ಪೆನ್ಷನ್ ಸ್ಕೀಂ– ಹೊಸ ಪಿಂಚಣಿ ಪದ್ಧತಿ – NPS) ನೌಕರರಿದ್ದು, ಈ ಪೈಕಿ 2.0 ಲಕ್ಷ ರಾಜ್ಯ ಸರ್ಕಾರಿ ನೌಕರರಿದ್ದರೆ, ಸರ್ಕಾರಿ ಅನುದಾನಿತ ನಿಗಮ ಮತ್ತು ಮಂಡಳಿ ಸಂಸ್ಥೆಗಳಲ್ಲಿ 1.50 ಲಕ್ಷ ನೌಕರರಿದ್ದಾರೆ. ಇವರನ್ನು ಸಂಘಟಿಸಿ **“ಅವೈಜ್ಞಾನಿಕವಾದ ಹೊಸ ಪಿಂಚಣಿ ಪದ್ಧತಿ ಎನ್.ಪಿ.ಎಸ್.ನ್ನು ರದ್ದುಗೊಳಿಸಿ ನಿಶ್ಚಿತ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವಂತೆ”** ಒತ್ತಾಯಿಸಲು ಕರ್ನಾಟಕ ರಾಜ್ಯ ಸರ್ಕಾರಿ ಎನ್.ಪಿ.ಎಸ್ ನೌಕರರ ಸಂಘವು ಈ ಬೃಹತ್ ಹೋರಾಟ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕೇಂದ್ರ ಸರಕಾರ 01.01.2004ರ ನಂತರ ನೇಮಕವಾಗುವ ಸರಕಾರಿ ನೌಕರರಿಗೆ ಹಾಗೂ ಕರ್ನಾಟಕ ರಾಜ್ಯದಲ್ಲಿ 01.04.2006ರ ನಂತರ ರಾಜ್ಯ ಸರಕಾರಿ ಸೇವೆಗೆ ಸೇರಿರುವ ನೌಕರರಿಗೆ New Pension Scheme -NPS ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಎನ್.ಪಿ.ಎಸ್. ನೌಕರರು ನಿವೃತ್ತಿಯ ನಂತರ ಪೆನಷನ್ ಪಡೆಯಲು ತಾವೇ ತಮ್ಮ ಸಂಬಳದಿಂದ ಶೇ.10 ರಷ್ಟು ಉಳಿತಾಯ ಮಾಡುವುದು ಕಡ್ಡಾಯವಾಗಿದೆ. ಆದರೆ ಉಳಿತಾಯ ಮಾಡಿದ ಹಣಕ್ಕೆ ಖಾಸಗಿ ಷೇರು ಪೇಟೆಯ ಕಂಪನಿಗಳು ಆಯಾ ಕಾಲಕ್ಕೆ ಅದರ ಲಾಭ–ನಷ್ಟಗಳ ಆಧಾರದಲ್ಲಿ ಪಿಂಚಣಿಯ ಮೊತ್ತವನ್ನು ನಿಗದಿಪಡಿಸುತ್ತವೆ. ಆ ಮೊತ್ತ ಹೆಚ್ಚಿರಬಹುದು ಕಡಿಮೆ ಇರಬಹುದು ಅಥವಾ ಏನೂ ಇಲ್ಲದೇ ಇರಬಹುದು. ಇದನ್ನೆ **2003ರಲ್ಲಿ ಪೆನ್ಷನ್ ಫಂಡ್ ರೆಗ್ಯುಲೇಟರಿ ಆ್ಯಂಡ್ ಡೆವಲೆಪ್‌ಮೆಂಟ್ ಅಥಾರಿಟಿ (PFRDA) ಕಾಯ್ದೆಯ ಸೆಕ್ಷನ್ 20 (ಎಫ್) ರಲ್ಲಿ ಪಿಂಚಣಿ ಮೊತ್ತಕ್ಕೆ ಯಾವುದೇ ಗ್ಯಾರಂಟಿ ನೀಡಲಾಗುವುದಿಲ್ಲ ಎಂದು ಉಲ್ಲೇಖಿಸಿರುವುದು ನೌಕರ ವಿರೋಧಿ ನೀತಿ ಅಷ್ಟೇ ಅಲ್ಲ, ಅವರನ್ನು ಆರ್ಥಿಕವಾಗಿ ವಂಚಿಸುವ ಹುನ್ನಾರವೂ ಆಗಿದೆ. ಹಾಗಾಗಿ ‘ನೌಕರರಿಗೆ ನಿವೃತ್ತಿ ನಿಶ್ಚಿತ, ಆದರೆ ನಿವೃತ್ತಿ ವೇತನ ಅನಿಶ್ಚಿತ’** ಎನ್ನುವಂತಾಗಿದೆ.

ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (IMF) ಹಾಗೂ ವಿಶ್ವ ಬ್ಯಾಂಕು (WB) ಮುಂತಾದ ಸಾಮ್ರಾಜ್ಯಶಾಹಿ ಸಂಸ್ಥೆಗಳ ನಿರ್ದೇಶಿತ ನೀತಿಗಳನ್ನು ಭಾರತದಲ್ಲಿ ಅನುಷ್ಠಾನಗೊಳಿಸುವುದರ ಭಾಗವಾಗಿ ಹಳೆ ಪಿಂಚಣಿ ಪದ್ಧತಿಯನ್ನು ರದ್ದುಪಡಿಸಲಾಗಿದೆ. ಈ ಹೊಸ ಪಿಂಚಣಿ ಪದ್ಧತಿಯಿಂದಾಗಿ ಸೇವಾ ನಿವೃತ್ತಿ ಹೊಂದಿದ ನೌಕರರು ಬೀದಿ ಪಾಲಾಗುತ್ತಾರೆ. ಅವರು ಆರ್ಥಿಕ ಅಭದ್ರತೆಯಲ್ಲಿ ನರಳುವಂತಾಗುತ್ತದೆ. ಇಂತಹ ಅಪಾಯಕಾರಿ ಪಿಂಚಣಿ ಖಾಸಗೀಕರಣ ನೀತಿಯ ಪರಿಣಾಮವಾಗಿ ನೌಕರರಲ್ಲಿ ಸಮಾಜೋ–ಆರ್ಥಿಕ ಅಭದ್ರತೆ ಉಂಟಾಗುತ್ತಿದೆಯಲ್ಲದೇ ನಿವೃತ್ತಿಯ ನಂತರದ ಜೀವನದಲ್ಲಿ ನೆಮ್ಮದಿಯ ಬದುಕು ಕಾಣದಂತಾಗುತ್ತದೆ. ಹೊಸ ಪಿಂಚಣಿ ಪದ್ಧತಿಯಲ್ಲಿ ನೌಕರರ ಹಣ ನೌಕರರ ಹಕ್ಕು ಎನ್ನುವುದರ ಬದಲಾಗಿ ನೌಕರರ ಹಣ ಖಾಸಗಿ ಕಂಪನಿಗಳ ಹಕ್ಕು ಎನ್ನುವಂತಾಗಿದೆ. ನೌಕರರು ತಾವು ಉಳಿತಾಯ ಮಾಡಿದ ಹಣ ಪಡೆಯಲು ಪರದಾಡುವಂತಹ ಪರಿಸ್ಥಿತಿ ಸರಕಾರ ನಿರ್ಮಾಣ ಮಾಡಿದ್ದು ದುರದೃಷ್ಟಕರ ಅಷ್ಟೇ ಅಲ್ಲ ದುರಂತವೂ ಆಗಿದೆ. ಆದ್ದರಿಂದ ನೌಕರರ ವಿರೋಧಿಯಾದ ಹಾಗೂ ಆರ್ಥಿಕವಾಗಿ ಸುಲಿಗೆ ಮತ್ತು ಶೋಷಣೆ ಮಾಡುವ ಈ ಹೊಸ ಪಿಂಚಣಿ ಯೋಜನೆಯನ್ನು ಕೈಬಿಡಬೇಕೆಂದು ಅನೇಕ ನೌಕರಪರ ಸಂಘಟನೆಗಳು ದಶಕಕ್ಕೂ ಹೆಚ್ಚು ಕಾಲ ಹೋರಾಟಗಳನ್ನು ನಡೆಸುತ್ತಲೇ ಬಂದಿವೆ.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಬೆಂಬಲ

ಈ ಒಂದು ದಿನದ ಉಪವಾಸ ಧರಣಿ ಕಾರ್ಯಕ್ರಮಕ್ಕೆ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಎಲ್ಲ ರೀತಿಯ ಬೆಂಬಲ ಮತ್ತು ಸಹಕಾರ ನೀಡಿತ್ತು.

2003ರಲ್ಲಿ ಕೇಂದ್ರ ಸರ್ಕಾರವು ಪಿ.ಎಫ್.ಆರ್.ಡಿ.ಎ ಮಸೂದೆಯನ್ನು ಜಾರಿಗೆ ತರಲು ಕಾರ್ಯೋನ್ಮುಖವಾದ ದಿನದಿಂದಲೇ ಅಖಿಲ ಕರ್ನಾಟಕ ರಾಜ್ಯ ಸಕಾರಿ ನೌಕರರ ಒಕ್ಕೂಟವು, ದೇಶದ 80 ಲಕ್ಷ ನೌಕರರ ಸದಸ್ಯತ್ವ ಹೊಂದಿರುವ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಜೊತೆಗೂಡಿ ನೌಕರರಲ್ಲಿ ಈ ಮಸೂದೆಯ ನೌಕರ–ವಿರೋಧಿ ಅಂಶಗಳ ಕುರಿತು ಜಾಗೃತಿ ಮೂಡಿಸುತ್ತಾ ಬಂದಿದೆ. ಈ ನಿಟ್ಟಿನಲ್ಲಿ, ಎನ್.ಪಿ.ಎಸ್.ನ್ನು ರದ್ದುಪಡಿಸಿ, ನಿಶ್ಚಿತ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸುವಂತೆ ಒತ್ತಾಯಿಸಿ 2010, 2013 ಮತ್ತು 2017ರಲ್ಲಿ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಮುಂದಾಳತ್ವದಲ್ಲಿ 3 ಸಲ ನಡೆದ ‘ಪಾರ್ಲಿಮೆಂಟ್ ಚಲೋ’ ಕಾರ್ಯಕ್ರಮದಲ್ಲಿ ರಾಜ್ಯ ಒಕ್ಕೂಟವು ರಾಜ್ಯದ ನೂರಾರು ನೌಕರರು ಭಾಗವಹಿಸುವಂತೆ ಮಾಡಿ ನೌಕರರನ್ನು ಹುರಿದುಂಬಿಸಿದೆ. 2005ರಿಂದ ಇಲ್ಲಿಯವರೆಗೂ ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಹಲವಾರು ಹೋರಾಟಗಳು/ವಿಚಾರ ಸಂಕಿರಣಗಳು ಹಾಗೂ ಚಿಂತನಾ ಸಭೆಗಳನ್ನು ನಡೆಸಿ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ನೌಕರರಲ್ಲಿ ಜಾಗೃತಿ ಮೂಡಿಸುತ್ತಾ ಬಂದಿದೆ.

ಕಾಮ್ರೇಡ್ ಪ್ರಸನ್ನ: ಎನ್.ಪಿ.ಎಸ್ ಹೋರಾಟಕ್ಕೆ ಪ್ರೇರಕ ಶಕ್ತಿ

ಕಾಮ್ರೇಡ್ ಪ್ರಸನ್ನ ರವರು ನೂತನ ಪಿಂಚಣಿ ವ್ಯವಸ್ಥೆಯ ಹುನ್ನಾರಗಳ ಕುರಿತು 2010ರಲ್ಲಿ ಬರೆದ **“ಸರ್ಕಾರಿ ನೌಕರರಿಗೆ ನಿವೃತ್ತಿ ಖಚಿತ ಆದರೆ ನಿವೃತ್ತಿ ವೇತನ?”** ಎಂಬ ಕಿರುಹೊತ್ತಿಗೆಯನ್ನು ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಪ್ರಕಟಿಸಿ ರಾಜ್ಯ ನೌಕರರಲ್ಲಿ ಜಾಗೃತಿಯನ್ನು ಮೂಡಿಸಿದೆ. ಅಲ್ಲದೇ, ಎನ್.ಪಿ.ಎಸ್ ನೌಕರ ಸಂಘದ ಸ್ಥಾಪನೆಗಾಗಿ ಕಾಮ್ರೇಡ್ ಪ್ರಸನ್ನಕುಮಾರ್ ರವರು ಒಂದು ಪ್ರೇರಕ ಶಕ್ತಿಯಾಗಿದ್ದರು. ಹೀಗಾಗಿಯೇ, ಎನ್.ಪಿ.ಎಸ್ ಯೋಜನೆಯ ವಿರುದ್ಧ ಒಕ್ಕೂಟ ನಡೆಸಿದ ಹೋರಾಟದ ಪ್ರಭಾವ ಮತ್ತು ಕಾಮ್ರೇಡ್ ಪ್ರಸನ್ನಕುಮಾರ್‌ರವರ ಪ್ರೇರೇಪಣೆ ಮತ್ತು ಮಾರ್ಗದರ್ಶನದ ಫಲವಾಗಿ ಕರ್ನಾಟಕ ರಾಜ್ಯ ಸರ್ಕಾರಿ ಎನ್.ಪಿ.ಎಸ್ ನೌಕರರ ಸಂಘವು ಅಸ್ತಿತ್ವಕ್ಕೆ ಬಂದಿತು ಮತ್ತು ಒಕ್ಕೂಟ ಆರಂಭಿಸಿದ ಆ ಹೋರಾಟವನ್ನು ಮತ್ತಷ್ಟು ವಿಸ್ತರಿಸಿ ಮುಂದುವರೆಸುತ್ತಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ನೌಕರ–ವಿರೋಧಿ ಧೋರಣೆ

ಆದರೆ, ಇವೆಲ್ಲ ಬೆಳವಣಿಗೆಗಳಿಗೆ ತದ್ವಿರುದ್ದವಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು ಆಳುವ ಸರ್ಕಾರಗಳ ಬಾಲಂಗೋಚಿಯಾಗಿ ಪಿ.ಎಫ್.ಆರ್.ಡಿ.ಎ ಮಸೂದೆ ಪರವಾದ ನಿಲುವನ್ನು ತಳೆದಿದೆ. ಎನ್.ಪಿ.ಎಸ್ ಯೋಜನೆಯನ್ನು, ರಾಜ್ಯ ಸರ್ಕಾರವು ಜಾರಿಗೊಳಿಸುವ ಸಂದರ್ಭದಲ್ಲಿ ಸಂಘದ ನಾಯಕರು ಈ ಯೋಜನೆಯಿಂದ ರಾಜ್ಯ ಸರ್ಕಾರಿ ನೌಕರರು ಕೋಟ್ಯಾಧಿಪತಿಗಳಾಗುತ್ತಾರೆ ಎಂಬ ಹಸಿ ಸುಳ್ಳುಗಳನ್ನು ಹರಡುತ್ತಾ ಎನ್.ಪಿ.ಎಸ್ ಯೋಜನೆಯ ಪರವಾಗಿ ನಿಂತಿರುತ್ತಾರೆ. ಎನ್.ಪಿ.ಎಸ್ ಯೋಜನೆಯ ಆರಂಭದಿಂದಲೂ ಅಂತಹ ನೌಕರ–ವಿರೋಧಿ ಧೋರಣೆ ತಳೆಯುತ್ತಾ ಬಂದಿರುವ ಸಂಘವು ದಿನಾಂಕ: 20.01.2018ರಂದು ಎನ್.ಪಿ.ಎಸ್ ನೌಕರ ಸಂಘವು ಆಯೋಜಿಸಿದ್ದ ‘ಫ್ರೀಡಂ ಪಾರ್ಕ್ ಚಲೋ’ ಕಾರ್ಯಕ್ರಮದ ಕುರಿತು ಎನ್.ಪಿ.ಎಸ್ ನೌಕರರನ್ನು ದಿಕ್ಕುತಪ್ಪಿಸಲು ಪರ್ಯಾಯವಾಗಿ ತಾನೇ ದಿನಾಂಕ: 18.01.2018ರಂದು ಮತ್ತೊಂದು ಕಾರ್ಯಕ್ರಮ ಹಮ್ಮಿಕೊಂಡು ಕರ್ನಾಟಕ ರಾಜ್ಯ ಸರ್ಕಾರಿ ಎನ್.ಪಿ.ಎಸ್ ನೌಕರರನ್ನು ಒಡೆಯಲು ಹವಣಿಸಿತ್ತು.

ಆದರೆ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಈ ಸಮಾವೇಶಕ್ಕೆ ಎಲ್ಲ ರೀತಿಯ ಬೆಂಬಲ ನೀಡುವುದರ ಜೊತೆಗೆ ರೂ. 50,000/– ಹೋರಾಟದ ನಿಧಿಯನ್ನು ಸಹ ನೀಡಿ ಸಹಕಾರ ನೀಡಿತು.

ಎನ್.ಪಿ.ಎಸ್ ನೌಕರರ ಹೋರಾಟಕ್ಕೆ ಬೆಂಬಲ

ಮಾಜಿ ಪ್ರಧಾನಿ ಶ್ರೀ ದೇವೇಗೌಡ, ವಿಧಾನ ಪರಿಷತ್ ಉಪ ಸಭಾಪತಿ ಮರಿತಿಬ್ಬೇಗೌಡ, ವಿಧಾನ ಪರಿಷತ್ ಸದಸ್ಯರಾದ ಅರುಣ್ ಶಹಪೂರ, ರಮೇಶ್ ಬಾಬು, ಶಾಸಕರಾದ ಪುಟ್ಟಣ್ಣಯ್ಯ, ಮಾಜಿ ಶಾಸಕ ಡಾ. ಅಶ್ವತ್ಥನಾರಾಯಣ, ಮಾಜಿ ಶಾಸಕ ಎಂ.ಪಿ.ನಾಡಗೌಡ ಇವರುಗಳು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಬೆಂಬಲ ಸೂಚಿಸಿದರು.

ನಿವೃತ್ತ ನ್ಯಾಯಮೂರ್ತಿ ಶ್ರೀ ಗೋಪಾಲಗೌಡರವರು ಮಾತನಾಡಿ **“ಪಿಂಚಣಿ ಪಡೆಯುವುದು ಸರ್ಕಾರಿ ನೌಕರರ ಹಕ್ಕು, ಸರ್ಕಾರದ ಸಾಮಾಜಿಕ ಜವಾಬ್ದಾರಿ, ಅದನ್ನು ಸುಪ್ರೀಂಕೋರ್ಟ್ ಈಗಾಗಲೇ ಸ್ಪಷ್ಟಪಡಿಸಿದ್ದರಿಂದ ನ್ಯಾಯಾಲಯದಿಂದ ನಿಮಗೆ ನ್ಯಾಯ ದೊರಕುತ್ತದೆ. ಉಚಿತವಾಗಿ ಕಾನೂನು ನೆರವನ್ನು ಬೇಕಾದರೂ ನೀಡುತ್ತೇನೆ, ಹೋರಾಟವನ್ನು ಮುಂದುವರೆಸಿ”** ಎಂದು ನೌಕರರನ್ನು ಹುರಿದುಂಬಿಸಿದರು.

ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷರಾದ ಕಾ: ಮಹದೇವಯ್ಯ ಮಠಪತಿ, ರಾಜ್ಯ ಸಿ.ಐ.ಟಿ.ಯುನ ಕಾ: ಉಮೇಶ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ನ ಉಪಾಧ್ಯಕ್ಷರಾದ ಕಾ: ಪ್ರಕಾಶ್, ಕಾ: ಮಹಾಂತೇಶ್ ಮತ್ತು ಇತರರು ಮಾತನಾಡಿ ಹೋರಾಟಕ್ಕೆ ಬೆಂಬಲವನ್ನು ಸೂಚಿಸಿದರು.

ಎನ್.ಪಿ.ಎಸ್ ಯೋಜನೆಯ ವಿರುದ್ಧ ಹೋರಾಡಲು ರಾಷ್ಟ್ರಮಟ್ಟದಲ್ಲಿ National Movement for Old Pension Scheme(NMOPS) ಅಸ್ತಿತ್ವಕ್ಕೆ ಬಂದಿದ್ದು, ಅದರ ರಾಷ್ಟ್ರೀಯ ಅಧ್ಯಕ್ಷರಾದ ಕಾಂ. ವಿಜಯ್ ಕುಮಾರ್ ಬಂಧು, ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಸ್ಥಿತಪ್ರಜ್ಞಾ ಇವರುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅಖಿಲ ಕನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ ನೌಕರರ ಸಂಘ, ವಿಧಾನ ಸಭೆ ಸಚಿವಾಲಯ ನೌಕರರ ಸಂಘ, ಕೆ.ಇ.ಬಿ ಇಂಜಿನಿಯರ್ಸ್ ಅಸೋಸಿಯೇಷನ್, ಕೆ.ಪಿ.ಡಿ.ಸಿ.ಎಲ್ ಎಂಪ್ಲಾಯಿಸ್ ಯೂನಿಯನ್, ಕೆ.ಜಿ.ಐ.ಡಿ ಎಂಪ್ಲಾಯಿಸ್ ಯೂನಿಯನ್ ಮುಂತಾದ 146 ಸಂಘಟನೆಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದವು.

ಇಷ್ಟೆಲ್ಲದರ ನಡುವೆ, ಮನವಿಯನ್ನು ಸ್ವೀಕರಿಸಲು ರಾಜ್ಯ ಸರ್ಕಾರದ

ಪುಟ 11 ಕ್ಕೆ







ವಿದ್ಯುತ್ ಗುತ್ತಿಗೆ ಕಾರ್ಮಿಕರ ಸಮಾವೇಶ

ಬೆಳಕನ್ನು ಕೊಡುವ ಕಾರ್ಮಿಕರ ಬದುಕಿನಲ್ಲಿ ಬೆಳಕನ್ನು ತರಬೇಕಾಗಿದೆ

ಎಸ್. ವರಲಕ್ಷ್ಮಿ

ಇದ್ದಕ್ಕಿದ್ದಂತೆ ಒಂದು ದಿನ ಬೆಳಗ್ಗೆ ಕನಕಪುರದಿಂದ ಒಂದು ಪೋನ್ ಬಂದಿತ್ತು. ಬಹಳ ಗಾಬರಿಯಾಗಿ "ಮೇಡಂ, ಕಗಲಳ್ಳಿ ಸ್ಟೇಷನ್ ಆಪರೇಟರ್ ಟ್ರಾನ್ಸ್ ಫಾರ್ಮರ್ 66/11ಕೆವಿ ಏರ್ ಜಾಟ್ ಮಾಡುವಾಗ ಕರೆಂಟ್ ಹೊಡೆದು ಒಬ್ಬರು ಅಲ್ಲಿಯೇ ತೀರಿಹೋಗಿದ್ದಾರೆ. ಏನು ಮಾಡಬೇಕು." ನಾನು ಹೇಳಿದೆ "ಕೂಡಲೇ ಪೋಲೀಸ್ ಕಂಪ್ಲೇಂಟ್ ಕೊಡಿ" ಎಂದು. ಮತ್ತೆ ರಾತ್ರಿ, ಬೆಳ್ಳಿಗ್ಗೆ ಹೀಗೆ 5–6 ಬಾರಿ ಫೋನ್. "ಅವರು ಸತ್ತು ಒಂದು ಹಗಲು–ರಾತ್ರಿಯಾಯ್ತು. ಹೆಣ ಎತ್ತಿಲ್ಲ, ಪೋಲಿಸ್ ನವರು ಕೇಸು ದಾಖಲಿಸಿ ಕೊಂಡಿಲ್ಲ" ಎಂದು. ನಾನು ಕೂಡಲೇ ಸಂಬಂಧಿಸಿದ ಪೋಲೀಸ್ ಠಾಣೆಗೆ ಫೋನ್ ಮಾಡಿ 'ಕೇಸು ದಾಖಲಿಸಬೇಕು' ಎಂದು ಒತ್ತಡ ಹಾಕಿದೆ. ಕೂಡಲೇ ಕೇಸು ದಾಖಾಲಾಯಿತು. ನಂತರ ಗುತ್ತಿಗೆದಾರರು ಮತ್ತು ಇಂಧನ ಇಲಾಖೆಯವರು, ಒಂದು ನ್ಯಾಯ ಪಂಚಾಯ್ತಿ ನಡೆಸಿ ಸ್ವಲ್ಪ ಹಣವನ್ನು ಕರೆಂಟ್ ಅಪಘಾತದಲ್ಲಿ ಸತ್ತವರ ಕುಟುಂಬಕ್ಕೆ ಸಹಾಯ ಮಾಡಿ ಕೈ ತೊಳೆದುಕೊಂಡರು.

ಹಾಸನದಲ್ಲಿ ಆರ್ಥಿಕ ತಲ್ಲಣಗಳ ಬಗೆಗಿನ ವಿಚಾರಸಂಕಿರಣದಲ್ಲಿದ್ದಾಗ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಿಂದ ಫೋನ್.ಈಸೂರು ಸಬ್–ಸ್ಟೇಷನ್ ನಲ್ಲಿ Outgoing Gear operating Switch Jump ಕಟ್ ಆಗಿತ್ತು. ಸ್ಟೇಷನ್ ಸಹಾಯಕ ಚನ್ನಬಸಯ್ಯ ಅದನ್ನು ಸರಿಮಾಡಲು ಕಂಬ ಹತ್ತಿದ್ದರಿಂದ 11 ಕೆವಿ ಲೈನ್ ಕೈಗಳು ಮತ್ತು ತೊಡೆ ಸೀಳಿಕೊಂಡು ಕರೆಂಟ್ ಹರಿದಿತ್ತು. ದೇಹದ ಭಾಗಗಳು ಸೀಳಿದರೆ ದೇಹ ಸುಡಲ್ಲ, ಸೀಳದಿದ್ದರೆ ಅಲ್ಲೆ ದೇಹ ಸುಟ್ಟು ಹೋಗುತ್ತದೆ. ಕೂಡಲೇ ಚನ್ನಬಸಯ್ಯ ಕಂಬದಲ್ಲೆ ನಿತ್ರಾಣನಾಗಿದ್ದ. ಕೂಡಲೇ ಆ ಸ್ಟೇಷನ್ ಆಪರೇಟರ್ಸ್ ಮತ್ತಿತರರು ಧಾವಿಸಿ ಅವರನ್ನು ಇಳಿಸಿದ್ದರು. ಈ ಸಬ್ ಸ್ಟೇಷನ್‌ಗಳು ಸಾಧಾರಣವಾಗಿ ಊರು, ನಗರದ ಹೊರಗಡೆಯಿರುವುದರಿಂದ ಅಲ್ಲಿಂದ ಯಾವುದೇ ವಾಹನಗಳ ಸೌಲಭ್ಯ ವಿರುವುದಿಲ್ಲ. ಆದ್ದರಿಂದ ಸ್ಕೂಟರ್ ನಲ್ಲಿಯೇ ಅವರನ್ನು ಸಾಗಿಸಿಕೊಂಡು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಬಂದರೆ ಅಲ್ಲಿ ಯಾವುದೇ ಚಿಕಿತ್ಸೆ ದೊರೆಯಲಿಲ್ಲವಾದ್ದರಿಂದ ಅಸುನೀಗಿದ್ದರು. ನಾನು ಶಿಕಾರಿಪುರ ಮುಟ್ಟುವಾಗ ರಾತ್ರಿ 9 ಗಂಟೆಯಾಗಿತ್ತು. ನಂತರ ದೂರು ಕೊಟ್ಟು ಎಫ್.ಐ.ಆರ್ ಹಾಕಿಸಿ, ದೇಹವನ್ನು ಪೋಸ್ಟ್ ಮಾರ್ಟಂ ಮಾಡಬೇಕೆಂದೂ. ಶಿಕಾರಿಪುರ ತಾಲ್ಲೂಕು ಆಸ್ಪತ್ರೆಯಲ್ಲಿ ಇಡಲಾಗಿತ್ತು ಮಾಜಿ ಮುಖ್ಯಮಂತ್ರಿಗಳಿರುವ ತಾಲ್ಲೂಕಿನಲ್ಲಿ ಸತ್ತ ದೇಹವನ್ನಿಡಲು ಐಸ್ ಬಾಕ್ಸ್ ಕೂಡಾ ಇಡೀ ತಾಲ್ಲೂಕಿನಲ್ಲಿಯೇ ಲಭ್ಯವಿಲ್ಲ ನಂತರ ಸಾಗರದಿಂದ ಅದನ್ನು ತಂದು ನಮ್ಮ ಚನ್ನಬಸಯ್ಯನ ದೇಹವನ್ನು ಮಣ್ಣು ಮಾಡುವ ತನಕ ಕಾಪಾಡಿಕೊಂಡೆವು. ಮಾರನೇ ದಿನ ಇಂಧನ ಇಲಾಖೆಯ ಅಧಿಕಾರಿಗಳಿರುವ ಕಛೇರಿಯ ಮುಂದೆ ಇಲಾಖೆಯ ಗುತ್ತಿಗೆ ಕಾರ್ಮಿಕರು, ಹಳ್ಳಿಯ ಜನ ಸುಮಾರು 200 ಜನರು ಸೇರಿದ್ದೆವು. ಅಧಿಕಾರಿಗಳು ಬರದೇ ಇದ್ದದ್ದನ್ನು ವಿರೋಧಿಸಿ ಶಿಕಾರಿಪುರ ರಸ್ತೆ–ತಡೆ ನಡೆಸಿದೆವು. ನಂತರ ಪೋಲೀಸರ ಮಧ್ಯ ಪ್ರವೇಶ ಮತ್ತು ಅವರ ರಕ್ಷಣೆಯಲ್ಲಿ ಅಧಿಕಾರಿಗಳು ಬಂದರು. ಮಾತುಕತೆಯಲ್ಲಿ ಕೇಸು ವಾಪಸ್ಸು ತೆಗೆಯಬೇಕೆಂಬ ಬೇಡಿಕೆ. ನಾವು ಒಪ್ಪಲಿಲ್ಲ. ಆ ಗುತ್ತಿಗೆದಾರರ ಪರವಾಗಿ ಕೆಲವರು, ಕೇಸು ಬೇಡ ಮಾತುಕತೆಯಲ್ಲಿ ಬಗೆಹರಿಸಿ ಕೊಳ್ಳಬೇಕೆಂಬ ಖಾಜಿ ನ್ಯಾಯ. ಇದರ ವಿರುದ್ಧ ಕುಟುಂಬದವರು ಸಂಘದವರು ಗಟ್ಟಿಯಾಗಿ ನಿಂತ ಮೇಲೆ ಗುತ್ತಿಗೆ ದಾರರು 2 ಲಕ್ಷರೂ. ಮತ್ತು ಪಿ.ಎಫ್– ಇ.ಎಸ್.ಐ ನ್ನು ಕೊಡಲು ಒಪ್ಪಿದರು. ಕೇಸು ದಾಖಲಾಗಿದೆ.



ನಾನು ಸಿಐಟಿಯುವಿನ ದೆಹಲಿ ಸಭೆಗೆ ಹೋಗಿದ್ದಾಗ ಆನೇಕಲ್‌ನ ಚಂದಾಪುರದಲ್ಲಿ 52 ವರ್ಷದ ರಾಮಾಂಜಿ ಎಂಬುವವರು ಕರೆಂಟ್ ಕಂಬದಲ್ಲಿ ಎಚ್.ಟಿ ಸ್ಕೆಡ್ ಬಸ್ಸಿಂಗ್ ಲೂಸ್ ಕನೆಕ್ಷನ್ ಆಗಿತ್ತು. ಆದ್ದರಿಂದ ಮೋಟಾರ್ ಗಳಿಗೆ ಕರೆಂಟ್ ಪಾಸಾಗಲ್ಲ ಮತ್ತು ಸ್ಪಾರ್ಕ್ ಬರುತ್ತಿರುತ್ತದೆ. ಆದ್ದರಿಂದ ಅದನ್ನು ಟೈಟ್ ಮಾಡಲು ಮೇಸ್ತ್ರಿಗಳು ಈ ಗುತ್ತಿಗೆ ಕಾರ್ಮಿಕರನ್ನು ಬಳಸುತ್ತಾರೆ. ಆರೀತಿ ರಾಮಾಂಜನಪ್ಪ ಕರೆಂಟ್ ಕಂಬ ಹತ್ತಿ ಬುಸ್ ಟೈಟ್ ಮಡುವಾಗ ಶಾಕ್ ಒಡೆದು ಶವವಾಗಿ ಕಂಬದಲ್ಲಿಯೇ ನೇತಾಡುತ್ತಿದ್ದರು. ವಿಷಯ ತಿಳಿದು ಪೋಲೀಸ್ ಠಾಣೆಗೆ ಕೇಸ್ ಬುಕ್ ಮಾಡಲು ಹೇಳಿದರೆ ಸ್ಥಳೀಯ ರಾಜಕಾರಣಿಗಳೇ ಗುತ್ತಿಗೆದಾರರು ಆಗಿರುವುದರಿಂದ ಮತ್ತು ರಾಮಾಂಜನೇಯಪ್ಪನ ಅಳಿಯ ಖಾಯಂ ಲೈನ್ ಮೆನ್ ಆಗಿರುವುದರಿಂದ ಅವರ ಕೆಲಸಕ್ಕೆ ಅಪಾಯ ಬರುತ್ತದೆ ಎಂದು ಕೇಸ್ ಬುಕ್ ಮಾಡದೇ 4 ಲಕ್ಷದ ಪರಿಹಾರಕ್ಕೆ ಒಪ್ಪಿ ಕೇಸು ಮುಚ್ಚಿ ಹಾಕಿದ್ದಾರೆ.

ಹೀಗೆ ನಮ್ಮ ಸಂಘಟನೆ ಪ್ರರಂಭವಾದ ಮೇಲೆ ಆಗಿರುವ ಘಟನೆಗಳು ಅಂದರೆ 6 ತಿಂಗಳಲ್ಲಿ 3 ಹೆಣಗಳು. 2015 –16 ರ ಇಂಧನ ಇಲಾಖಾ ವರದಿಯ ಪ್ರಕಾರ ಒಂದು ವರ್ಷದಲ್ಲಿ 1561 ಘಟನೆಗಳು ನಡೆದಿವೆ. ಇವು ಪ್ರಾಣಿ ಮತ್ತಿತರ ಎಲ್ಲಾವನ್ನೂ ಒಳಗೊಂಡ ಘಟನೆಗಳು.ಇವುಗಳಲ್ಲಿಸುಮಾರು ಒಂದು ನೂರಾದರೂ ಕಾರ್ಮಿಕರು ಸತ್ತ ಪ್ರಕರಣಗಳು ಇರಬಹುದು.



ವರ್ಕ್ಸ್ ಮೆನ್ಸ್ ಕಾಂಪೆನ್ಸೇಶನ್ ಆಕ್ಟ್‌ನ ಪ್ರಕಾರ ಯಾವುದೇ ಸಂಸ್ಥೆಯಲ್ಲಿ ಕಾರ್ಮಿಕರನ್ನು ಯಾರು ನಿಯೋಜನೆ ಮಾಡುತ್ತಾರೋ, ಅವರೇ ಪರಿಹಾರ ಕೊಡಬೇಕೆಂಬ ಕಾನೂನು ಇದ್ದರೂ ಕೂಡಾ, ಇಂಧನ ಇಲಾಖೆ ಈ ಕಾನೂನನ್ನು ಗುತ್ತಿಗೆದಾರರ ಹೆಗಲಿಗೆ ಹೊರೆಸಿ ನಾವು ಜವಾಬ್ದಾರರು ಅಲ್ಲ ಎಂದು ಹೇಳುತ್ತಲೇ ಬಂದಿದೆ. ಆಶ್ಚರ್ಯದ ಸಂಗತಿ ಏನೆಂದರೆ ವಿದ್ಯುತ್ ಅವಘಡಗಳಲ್ಲಿ ಹಸು, ಎಮ್ಮೆ, ಕುರಿ, ಮೇಕೆ, ಸಾರ್ವಜನಿಕರು ಮೃತಪಟ್ಟರೆ 5 ಲಕ್ಷ ಪರಿಹಾರ ಆದರೆ ಸರ್ಕಾರಕ್ಕಾಗಿ, ಸಾರ್ವಜನಿಕ ವ್ಯವಸ್ಥೆಗಾಗಿ ದುಡಿಯುವ ಕಾರ್ಮಿಕರು ಸತ್ತರೆ ಇವರು ಹೊರಗುತ್ತಿಗೆಯವರು ಎಂದು ಕೈ ತೊಳೆದು ಕೊಳ್ಳುತ್ತಿದ್ದಾರೆ.

ವಿದ್ಯುತ್‌ಚ್ಛಕ್ತಿ ಇಲ್ಲದ ಸಾಮಾಜಿಕ ವ್ಯವಸ್ಥೆಯನ್ನು ಕಲ್ಪಿಸಿ ಕೊಳ್ಳಲು ಸಾಧ್ಯವೇ? ಖಂಡಿತವಾಗಲೂ ಸಾಧ್ಯವಿಲ್ಲ. ವ್ಯವಸ್ಥೆಗೆ ಬೆಳಕನ್ನು ಕೊಡಲು ತಮ್ಮ ಜೀವಗಳನ್ನೇ ಪಣವಾಗಿಟ್ಟು ದುಡಿಯುತ್ತಿರುವವರು ಬದುಕು ಯಾವುದೇ ತಾರತಮ್ಯ ಮಾಡದಿರುವ ಕರೆಂಟ್‌ಗೆ ಆಹುತಿಯಾಗುತ್ತದೆ. ಇವರ ಬದುಕು ಕೂಡಾ ಸವೆಯುತ್ತಿದೆ. ಇವರ ಬದುಕಿನಲ್ಲಿ ಬೆಳಕನ್ನು ತರಬೇಕಾಗಿದೆ.

ವಿದ್ಯುತ್‌ಚ್ಛಕ್ತಿ ಇಲ್ಲದ ಸಾಮಾಜಿಕ ವ್ಯವಸ್ಥೆಯನ್ನು ಕಲ್ಪಿಸಿ ಕೊಳ್ಳಲು ಸಾಧ್ಯವೇ? ಖಂಡಿತವಾಗಲೂ ಸಾಧ್ಯವಿಲ್ಲ. ವ್ಯವಸ್ಥೆಗೆ ಬೆಳಕನ್ನು ಕೊಡಲು ತಮ್ಮ ಜೀವಗಳನ್ನೇ ಪಣವಾಗಿಟ್ಟು ದುಡಿಯುತ್ತಿರುವವರು ಬದುಕು ಯಾವುದೇ ತಾರತಮ್ಯ ಮಾಡದಿರುವ ಕರೆಂಟ್‌ಗೆ ಆಹುತಿಯಾಗುತ್ತದೆ. ಇವರ ಬದುಕು ಕೂಡಾ ಸವೆಯುತ್ತಿದೆ. ಇವರ ಬದುಕಿನಲ್ಲಿ ಬೆಳಕನ್ನು ತರಬೇಕಾಗಿದೆ.**ಈ ಕಾರ್ಮಿಕರು ರಾಜ್ಯದಲ್ಲಿ ಬೇರೆ ಬೇರೆ ಸಂಘಟನೆಗಳಲ್ಲಿ ಸಂಘಟಿತರಾಗಿ ಕೆಲವಾರು ಹೋರಾಟಗಳನ್ನು ಮಾಡಿ ಯಶಸ್ಸು ಕಾಣದೆ ಇಂದು ಸಿಐಟಿಯುವಿನ ತೆಕ್ಕೆಗೆ ಬಂದಿದ್ದಾರೆ.**

ಜೂನ್ 2017 ರಲ್ಲಿ 2 ನೇ ರಾಜ್ಯ ಸಮ್ಮೇಳನ ನಡೆಸಿ ಸ್ಥಳೀಯ ಶಾಸಕರಿಗೆ ಮನವಿ ಪತ್ರ, ಸಹಿ ಸಂಗ್ರಹ ಚಳುವಳಿ, 24 ಘಂಟೆಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಲಾಗಿದೆ. ಇದರ ಭಾಗವಾಗಿ ಇಲಾಖೆಯಲ್ಲಿ ಜಂಟಿ ಸಭೆ ನಡೆದಿದೆ. ಅಧಿಕೃತವಾಗಿ ಇಲಾಖಾ ಸಚಿವರಿಗೆ ಸಾಮೂಹಿಕ ಮನವಿ ಪತ್ರ ಕೊಡುವ ಹಕ್ಕೊತ್ತಾಯ ಸಮಾವೇಶವನ್ನು ಬೆಂಗಳೂರಿನಲ್ಲಿ ಜನವರಿ 17ರಂದು ಸಂಘಟಿಸಲಾಯಿತು. ಈ ಸಮಾವೇಶದಲ್ಲಿ 4 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು.

ಈ ಗುತ್ತಿಗೆ ಕಾರ್ಮಿಕರು ಯಾರು?

ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ 1999 ರಡಿಯಲ್ಲಿ ಈ ಹಿಂದಿನ ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಯನ್ನು ನಿಗಮಗಳನ್ನಾಗಿಸಿತು. ಪ್ರತ್ಯೇಕವಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ ಎಂಬ ಎರಡು ಹೊಸ ನಿಗಮಗಳನ್ನು ರಚಿಸಲಾಯಿತು. ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತವುಕರ್ನಾಟಕ ವಿದ್ಯುತ್ ನಿಗಮ ನಿಯಮಿತದೊಂದಿಗೆ ವಿಲೀನಗೊಂಡಿದ್ದು ಇದು ಈ ಹಿಂದೆ ಕರ್ನಾಟಕ ವಿದ್ಯುತ್ ಮಂಡಳಿಯ ಸ್ವಾಮ್ಯದಲ್ಲಿದ್ದು ವಿದ್ಯುತ್ ಉತ್ಪಾದನಾ ಕೇಂದ್ರಗಳ ವಿದ್ಯುತ್ ಉತ್ಪಾದನಾ ಕಾರ್ಯ ಚಟುವಟಿಕೆಗಳನ್ನು ನಿರ್ವಹಿಸುವ ಜವಬ್ದಾರಿಯನ್ನು ಹೊಂದಿತ್ತು.

ನಂತರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಪ್ರತ್ಯೇಕಗೊಳಿಸಿ ರಾಜ್ಯದಲ್ಲಿ 4 ಸ್ವತಂತ್ರ ವಿದ್ಯುತ್ ವಿತರಣಾ ಚಟುವಟಿಕೆಗಳನ್ನು ಪ್ರತ್ಯೇಕಗೊಳಿಸಿ, ರಾಜ್ಯದಲ್ಲಿ 4 ಸ್ವತಂತ್ರ ವಿದ್ಯುತ್ ಸರಬರಾಜು

ಪುಟ 10 ಕ್ಕೆ

ಅಫಘಾತದಲ್ಲಿ ಅಂಗವಿಕಲರಾದವರು

ವಿದ್ಯುತ್ ಕಾರ್ಮಿಕರಾಗಿ ಕೆಲಸ ಮಾಡುವಾಗ ಸಂಭವಿಸಿದ ಅವಘಡದಲ್ಲಿ ಅಂಗವೈಕಲ್ಯಕೊಳ್ಳಗಾದ ನಿಂಗಪ್ಪ ಬಾರಕೇರ್, ಹೊಸಕೋಟೆಯ ನಾಗರಾಜ್ ರವರು ಹಾಗೂ ಅವಘಡದಲ್ಲಿ ಸಾವನ್ನಪ್ಪಿದ ಚನ್ನಬಸಯ್ಯ ಎಂ.ಡಿರವರ ಕುಟುಂಬ ಕಷ್ಟದ ಬದುಕು ಸಾಗಿಸುತ್ತಿದೆ. ಅವರು ಸಮಾವೇಶದಲ್ಲಿ ಭಾಗವಹಿಸಿದ್ದು, ಇವರಿಗೆ ಪರಿಹಾರ ಹಾಗೂ ಕುಟುಂಬಕ್ಕೆ ಖಾಯಂ ಉದ್ಯೋಗ ನೀಡಲು ಸಮಾವೇಶ ಒತ್ತಾಯಿಸಿತು.

ಬೆಳಕನ್ನು ಕೊಡುವ ಕಾರ್ಮಿಕರ ಬದುಕಿನಲ್ಲಿ ಬೆಳಕನ್ನು ತರಬೇಕಾಗಿದೆ........ ಪುಟ 9 ರಿಂದ

ಕಂಪನಿಗಳು 2002 ರಿಂದ, ಚಾಮುಂಡೇಶ್ವರೀ ವಿದ್ಯುತ್ ಸರಬರಾಜು ನಿಗಮ 2005 ರಿಂದ ಅಸ್ತಿತ್ವಕ್ಕೆ ಬಂದಿದೆ. ಕೆಪಿಟಿಸಿಎಲ್ ಪ್ರಮುಖ ವಾಗಿ ವಿದ್ಯುತ್ ಪ್ರಸರಣ ಚಟುವಟಿಕೆಯನ್ನು ನಿರ್ವಹಿಸುತ್ತಿದೆ. ಇಂದು ಒಟ್ಟು ವಿದ್ಯುತ್ ಉತ್ಪಾದನೆ ಪ್ರಸರಣ ಮತ್ತು ವಿತರಣಾ ಚಟುವಟಿಕೆಗಳನ್ನು KPCL, PCKL (Power Company of Karnataka limited), ಬೆಸ್ಕಾಂ, ಹೆಸ್ಕಾಂ, ಗೆಸ್ಕಾಂ, ಚಾಮುಂಡೇಶ್ವರಿ ಮತ್ತು ಮೆಸ್ಕಾಂಗಳನ್ನಾಗಿ ಪರಿವರ್ತಿಸಲಾದ KPTCL ಗಳು ನಿರ್ವಹಿಸುತ್ತಿವೆ. ಈ ಕಂಪನಿಗಳಲ್ಲಿ ಪವರ್ ಟೆಕ್ನಿಷಿಯನ್, ಎಲೆಕ್ಟ್ರಿಷಿಯನ್, ಭದ್ರತಾ ಸಿಬ್ಬಂಧಿ, ಸ್ಟೇಷನ್ ಆಪರೇಟರ್ಸ್, ಸ್ಟೇಷನ್ ಸಹಾಯಕರು, ಗ್ಯಾಂಗ್ ಮೆನ್‌ಗಳು, ಜೆ.ಇ., ಮೀಟರ್ ರೀಡರ್ಸ್, ಸ್ವಚ್ಛತಾ ಗಾರರು, ಗ್ರಾಮ ವಿದ್ಯುತ್ ಪ್ರತಿನಿಧಿಗಳು, ATM-PTM ಗಳಲ್ಲಿ ಕೆಲಸ ಮಾಡುವವರು, ಡಾಟಾ ಆಪರೇಟರ್ಸ್ ಮುಂತಾದ 18 ಹುದ್ದೆಗಳಲ್ಲಿ ಸುಮಾರು 30 ಸಾವಿರ ಕಾರ್ಮಿಕರು ಗುತ್ತಿಗೆಯಲ್ಲಿ ದುಡಿಯುತ್ತಿದ್ದಾರೆ. ಇವರಲ್ಲಿ ಬಹುತೇಕ ಕಾರ್ಮಿಕರು 20 ವರ್ಷಗಳಿಂದಲೂ ದುಡಿಯುತ್ತಿದ್ದಾರೆ.

ಗುತ್ತಿಗೆ ಪದ್ಧತಿ ಏಕೆ?

ಉದಾರೀಕರಣ ನಂತರದ ಸಂದರ್ಭದಲ್ಲಿ ಹೊರಹೊಮ್ಮಿದ ಧೃಢವಲ್ಲದ ಉದ್ಯೋಗ ವಿನ್ಯಾಸದ ಬೇರುಗಳು ನವ-ಉದಾರೀಕರಣ, ನೀತಿಗಳನ್ನು ನಿಯಂತ್ರಿಸುವ ಮತ್ತು ಪ್ರಭಾವಿಸುವ ಹಣಕಾಸು ಬಂಡವಾಳದ ಲಕ್ಷಣ. ಇದಕ್ಕಾಗಿ ಸ್ಥಿರವಲ್ಲದ ಉದ್ಯೋಗದ ಸಂಬಂಧಗಳ ಅಗತ್ಯವಿದೆ.

ಇದರ ಭಾಗವಾಗಿ ಮತ್ತು ಕರ್ನಾಟಕದಲ್ಲಿಯೂ ಖಾಸಗಿ ಕ್ಷೇತ್ರಗಳ ಜತೆಗೆ, ಸರ್ಕಾರದಡಿಯಲ್ಲಿರುವ ಮಂಡಳಿಗಳಲ್ಲಿ ಮತ್ತು ಇಲಾಖೆಗಳಲ್ಲಿ ವ್ಯಾಪಕವಾಗಿ ಗುತ್ತಿಗೆ ಪದ್ಧತಿ ಜಾರಿಯಾಗಿದೆ. 1970 ಗುತ್ತಿಗೆ ಕಾರ್ಮಿಕ (ನಿಯಂತ್ರಣ ರದ್ಧತಿ) ಕಾಯ್ದೆ ಕಾಲಂ 10 ರ ಪ್ರಕಾರ ಖಾಯಂ ಸ್ವರೂಪ ಕೆಲಸಗಳಿಗೆ ಗುತ್ತಿಗೆ ಕಾರ್ಮಿಕರನ್ನು ತೆಗೆದುಕೊಳ್ಳಬಾರದು ಹಾಗೂ 2003 ಎಲೆಕ್ಟ್ರಿಸಿಟಿ ಆಕ್ಟ್ ನ ಪ್ರಕಾರ ಇಂಧನ ಇಲಾಖೆಯ ಹುದ್ದೆಗಳು ಅಪಾಯಕಾರಿ ಹುದ್ದೆಗಳಾಗಿರುವುದರಿಂದ ಖಾಯಂ ನೌಕರರನ್ನು ತೆಗೆದು ಕೊಳ್ಳಬೇಕೆಂಬ ನಿರ್ದೇಶನವಿದೆ. ಕಾರ್ಮಿಕ ಇಲಾಖೆಯಿಂದ ಕಾಂ. ವಿಜೆಕೆ ನಾಯರ್ ರವರ ಅಧ್ಯಕ್ಷತೆಯಲ್ಲಿ ಗುತ್ತಿಗೆ ಕಾರ್ಮಿಕ ಸಲಹಾ ಮಂಡಲಿ ಈ ಇಲಾಖೆಯಲ್ಲಿ ಗುತ್ತಿಗೆ ಪದ್ಧತಿ ನಿಷೇದ ಮಾಡಬೇಕೆಂಬ ಶಿಫಾರಸ್ಸುಗಳಿದ್ದರೂ ಇಂಧನ ಇಲಾಖೆ ಕಾರ್ಯಮಾಡಿಲ್ಲ. ಮಾತ್ರವಲ್ಲ ಇಡೀ ದೇಶದಲ್ಲಿ ವಿದ್ಯುತ್ ಪ್ರಸರಣದಲ್ಲಿ ಅಂದರೆ 110 ಕೆವಿಯ 1100 ಸಬ್ ಸ್ಟೇಷನ್ ಗಳಲ್ಲಿ 800 ಸಬ್ ಸ್ಟೇಷನ್ ಮತ್ತು ಕಂಪನಿಗಳಡಿಯಲ್ಲಿ ಬರುವ 33/ಕೆವಿ ಸಬ್ ಸ್ಟೇಷನ್ ಗಳಲ್ಲಿ ಗುತ್ತಿಗೆ ಕಾರ್ಮಿಕರಿದ್ದಾರೆ.

ಪಕ್ಕದ ಆಂಧ್ರ, ತಮಿಳುನಾಡು, ತೆಲಂಗಾಣ, ಕೇರಳ, ಹಾಗೂ ಪಂಜಾಬ್, ಹರಿಯಾಣ ಮುಂತಾದ ರಾಜ್ಯಗಳಲ್ಲಿ ಸುಮಾರು 75 ಸಾವಿರ ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡಲಾಗಿದೆ. ಕರ್ನಾಟಕದಲ್ಲಿಯೂ 2006 ರಲ್ಲಿ 6000 ಗ್ಯಾಂಗ್ ಮೆನ್ ಗಳನ್ನು ಖಾಯಂ ಮಾಡಲಾಗಿದೆ. ಆದರೆ ಹಿಂದೆ ಇದ್ದ ಮತ್ತು ಈಗಿರುವ ಸರ್ಕಾರ ಈ ಕಾರ್ಮಿಕರನ್ನು ಒಂದು ಬಾರಿ ಸೇವೆಯ ಆಧಾರದಲ್ಲಿ ಖಾಯಂ ಮಾಡಬೇಕೆಂಬ ಕೂಗು ಎದ್ದೇಳುತ್ತಿದೆ.

ಅತೀವ ಶೋಷಣೆ :

2–3 ಸಬ್ ಸ್ಟೇಷನ್ ಗಳಿಗೆ ಒಬ್ಬ ಗುತ್ತಿಗೆದಾರ, ಒಂದೊಂದು ಡಿವಿಷನ್‌ಗೆ ಒಬ್ಬ ಗುತ್ತಿಗೆದಾರರು (ಬೆಸ್ಕಾಂ) ಇರಬೇಕೆಂಬ ಇಲಾಖೆಯ ನಿಯಮಗಳಿದ್ದರೂ ಹಲವಾರು ಸ್ಟೇಷನ್ ಗಳಿಗೆ ಒಬ್ಬರೇ ಗುತ್ತಿಗೆದಾರರು ಬೇರೆ ಬೇರೆಯವರ ಹೆಸರಿನಲ್ಲಿ ಮತ್ತು ಸಬ್ ಕಂಟ್ರಾಕ್ಟ್ ಗಳಲ್ಲಿ ದುಡಿಸುತ್ತಾರೆ. ಸರ್ಕಾರದಿಂದ ಬರುವ ಸವಲತ್ತುಗಳು ಗುತ್ತಿಗೆ ಕಾರ್ಮಿಕರಿಗೆ ಸಿಗುತ್ತಿಲ್ಲ ಮತ್ತು ವಿವಿಧ ಸ್ವರೂಪದ ಶೋಷಣೆ ನಡೆಯುತ್ತಿರುತ್ತದೆ.

ಉದಾಹರಣೆಗೆ,

* ರಾಜ್ಯದಲ್ಲಿ ಒಂದೇ ನಿಯಮಗಳಡಿ ಕೆಲಸ ಮಾಡುವ ಕಾರ್ಮಿಕರಿಗೆ ಅಸಮಾನ ವೇತನವಿದೆ. KPTCL ನಲ್ಲಿಯೇ ಕೆಲವೆಡೆ 5000 ದಿಂದ 12000 ಕನಿಷ್ಠ ವೇತನವಿದೆ. ಬೆಸ್ಕಾಂನಲ್ಲಿರುವ ಗ್ಯಾಂಗ್‌ಮೆನ್ ಗಳಿಗೆ ಕೇವಲ 5800 ರೂ. ಇದೆ. KPCLನಲ್ಲಿ 7500 ದಿಂದ 8000 ಮಾತ್ರ ಇದೆ.
* ಗೆಸ್ಕಾಂ ಅಡಿಯಲ್ಲಿ 6 ಜಿಲ್ಲೆಗಳಲ್ಲಿ 33 ಕೆವಿ ಸಬ್‌ಸ್ಟೇಷನ್‌ಗಳಲ್ಲಿ 2013 ರಿಂದಲೂ ಟೆಂಡರ್ ಆಗದಿರುವುದರಿಂದ ವೇತನ ಹೆಚ್ಚಳವಾಗದೆ ಕೇವಲ 4 ಸಾವಿರಕ್ಕೆ ದುಡಿತ.
* ಟೆಂಡರ್‌ನ ಅವಾರ್ಡ್‌ನಲ್ಲಿ ವೇತನ ಒಂದಿದ್ದರೆ ಪಾವತಿಯಲ್ಲಿ ಕಡಿಮೆಯಾಗಿರುತ್ತದೆ.
* ಇನ್ನೂ ಕೆಲವೆಡೆ PF & ESI ಹಣ ಕಡಿತವೆಂದೂ ತೋರಿಸಿ, ಹಲವಾರು ಕಡೆಗಳಲ್ಲಿ PF ನಂಬರ್ ಕೊಟ್ಟಿಲ್ಲ ಮತ್ತು ESI ಕಾರ್ಡ್ ಕೊಟ್ಟಿಲ್ಲ.
* ಹಾವೇರಿಯಲ್ಲಿ ರಾಘವೇಂದ್ರ, ಶೇಖಪ್ಪ ಖಾಯಿಲೆಯಿಂದ ನಿಧನರಾಗಿದ್ದಾರೆ. ರೋಣದಲ್ಲಿ ನಾಗರಾಜು ಎಂಬುವವರು ಪಾರ್ಶ್ವವಾಯುದಿಂದ ಬಳಲುತ್ತಿದ್ದಾರೆ. ಆದರೆ ಅವರಿಗೆ ESI ಸವಲತ್ತು ಸಿಕ್ಕಿಲ್ಲ.
* ಗುತ್ತಿಗೆದಾರರು ಬದಲಾದ ಹಾಗೇ ಪ್ರತಿ ಬಾರಿ ಟೆಂಡರ್ ಕರೆದಾಗ PF ನ ಎಲ್ಲಾ ಸವಲತ್ತುಗಳು ಸಿಗುವುದಿಲ್ಲ.
* ಗುತ್ತಿಗೆದಾರರು ಸರಿಯಾಗಿ ವೇತನ PF & ESI ಕೊಟ್ಟಿದ್ದೇವೆಂದೂ ಖಾಲಿ ಪತ್ರಕ್ಕೆ ಸಹಿ ಹಾಕಬೇಕೆಂಬ ಒತ್ತಡ; ಸಹಿ ಹಾಕದಿದ್ದರೆ ಕೆಲಸದಿಂದ ತೆಗೆಯುತ್ತಾರೆ.
* ಕೊಪ್ಪಳ ಮತ್ತು ಬಳ್ಳಾರಿ 3–4 ತಿಂಗಳಿಗೊಮ್ಮೆ ವೇತನ ಪಾವತಿ ಮಾಡುತ್ತಾರೆ. ಬೆಸ್ಕಾಂನಲ್ಲಿಯೂ ಕೂಡಾ 3–4 ತಿಂಗಳಿನಿಂದ Payment ಇಲ್ಲ.
* ಟೆಂಡರ್ ಬದಲಾದಾಗ ಅನುಭವಿ ಕಾರ್ಮಿಕರನ್ನು ಕೆಲಸದಿಂದ ತೆಗೆದು ಕಾರ್ಮಿಕರನ್ನು ಬದಲು ಮಾಡುತ್ತಿದ್ದಾರೆ ಮತ್ತು ನೇರ ನೇಮಕಾತಿ ಜಾರಿ ಮಾಡುತ್ತಿದ್ದು ಸಾವಿರಾರು ಗ್ಯಾಂಗ್‌ಮೆನ್‌ಗಳು ಕೆಲಸ ಕಳೆದುಕೊಂಡಿದ್ದಾರೆ.
* ಕೆಲಸಕ್ಕೆ ಮೊದಲು ತೆಗೆದುಕೊಂಡಾಗ ಎಲೆಕ್ಟ್ರಿಕಲ್ ಕಮ್ಯುನಿಕೇಶನ್ (E&C) ಪದವೀಧರರನ್ನು ತೆಗೆದುಕೊಂಡಿದ್ದರು ಆದರೆ ಈಗ ಹೊಸ ಟೆಂಡರ್‌ನ ನಿಯಮಗಳಲ್ಲಿ E & E ಅಂತ ಮಾಡಿರುವುದರಿಂದ ನೂರಾರು ಕಾರ್ಮಿಕರು ಕೆಲಸ ಕಳೆದು ಕೊಳ್ಳುವ ಭೀತಿಯಲ್ಲಿದ್ದಾರೆ. ಆದ್ದರಿಂದ ಈಗಾಗಲೇ E&C ಇರುವ ಕಾರ್ಮಿಕ ರನ್ನು ಮುಂದುವರಿಸಬೇಕೆಂದೂ ಆದೇಶಿಸಬೇಕಾಗಿದೆ. ಉದಾ : ಹಾಸನ, ತುಮಕೂರು ಹಾವೇರಿ ಜಿಲ್ಲೆಯ ರಾಘವೇಂದ್ರ, ಶೇಖಪ್ಪ ಇತ್ಯಾದಿ.
* ಸಬ್ ಸ್ಟೇಷನ್ ಗಳಲ್ಲಿ ಸಹಾಯಕರ ಹುದ್ದೆಗೆ ಮುಂಬಡ್ತಿಯಾಗಿ ಬಂದಾಗ ಪ್ರಸ್ತುತ ಸಹಾಯಕರಾಗಿ ಕೆಲಸ ಮಾಡುತ್ತಿರುವವರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಹೊಸದಾಗಿ ಪ್ರಾರಂಭವಾಗುವ ಸ್ಟೇಷನ್‌ಗಳಿಗೆ ಮಾತ್ರ ಮುಂಬಡ್ತಿ ನೀಡಬೇಕು. ಬಳ್ಳಾರಿ ಮತ್ತು ಹಾವೇರಿಯಲ್ಲಿ 28 ಜನರನ್ನು ತೆಗೆದಿದ್ದಾರೆ.
* ಇಲಾಖೆಯಲ್ಲಿ ವರ್ಷಕ್ಕೊಮ್ಮೆ ಎಲ್ಲರಿಗೂ ಬೋನಸ್ ಕೊಡುವ ಹಾಗೆ ಈ ಕಾರ್ಮಿಕರಿಗೂ ಬೋನಸ್, ಸಮವಸ್ತ್ರ, ಷೂಗಳು ಮತ್ತು ಹೆಲ್ಮೆಟ್, ಗ್ಲೌಸ್ ಗಳನ್ನು ಹಾಗೂ ತರಬೇತಿಗಳನ್ನು ನೀಡಬೇಕು. ರಾಜ್ಯದ ಎಲ್ಲಾ ವಿಬಾಗದ ಸಬ್ ಸ್ಟೇಷನ್ ಗಳಲ್ಲಿ ಮೂಲಭೂತ ಸೌಲಭ್ಯಗಳಾದ ಸ್ವಚ್ಛ ಕುಡಿಯುವ ನೀರು, ಶೌಚಾಲಯ, ವ್ಯವಸ್ಥೆ ಮುಂತಾದ ಮೂಲಭೂತ ಸೌಲಭ್ಯಗಳು ಒದಗಿಸುತ್ತಿಲ್ಲ.

ಸಂಘಟನೆ ಮತ್ತು ಸಮಾವೇಶ

ಈ ಕಾರ್ಮಿಕರು ರಾಜ್ಯದಲ್ಲಿ ಬೇರೆ ಬೇರೆ ಸಂಘಟನೆಗಳಲ್ಲಿ ಸಂಘಟಿತರಾಗಿ ಕೆಲವಾರು ಹೋರಾಟಗಳನ್ನು ಮಾಡಿ ಯಶಸ್ಸು ಕಾಣದೆ ಇಂದು ಸಿಐಟಿಯುವಿನ ತೆಕ್ಕೆಗೆ ಬಂದಿದ್ದಾರೆ. ಕಾಂ. ಪ್ರಸನ್ನ ಕುಮಾರ್ ರವರು ಮೊದಲಿಗೆ ಸಣ್ಣ ಪ್ರಮಾಣದಲ್ಲಿ ಸಂಘ ಪ್ರಾರಂಭ ಮಾಡಿದ್ದರು. ಬಳ್ಳಾರಿ DTPS ಮತ್ತು ಬೆಳ್ತಂಗಡಿಯ ವಿದ್ಯುತ್ ಕಾರ್ಮಿಕರು ಸಂಪರ್ಕಕ್ಕೆ ಬಂದಿದ್ರು. ನಂತರ ಹಾವೇರಿ ಮತ್ತು ರಾಯಚೂರುಗಳಲ್ಲಿ ಕೆಲವು ಕಾರ್ಮಿಕರು ಸಂಪರ್ಕಕ್ಕೆ ಬಂದರು. 2017 ಮಾರ್ಚ್ ನಲ್ಲಿ ನಡೆದ ಅಂಗನವಾಡಿ ಹೋರಾಟದ ಭಾಗವಾಗಿ ಸ್ಪೂರ್ತಿ ಪಡೆದು ಇಂದು KPTCL ಕಾರ್ಮಿಕರು ನಂತರ ಗ್ಯಾಂಗ್ ಮೆನ್ ಗಳು ಮತ್ತು ವಿದ್ಯುತ್ ಉತ್ಪಾದನಾ ಘಟಕಗಳಲ್ಲಿರುವ ಕಾರ್ಮಿಕರೂ, ಡಾಟಾ ಆಪರೇಟರ್ ಗಳು ಸಿಐಟಿಯು ಸಂಘದೊಂದಿಗೆ ಗುರ್ತಿಸಿಕೊಂಡಿದ್ದಾರೆ.

ಈಗಾಗಲೇ ಕಾರ್ಮಿಕ ಇಲಾಖೆಯಲ್ಲಿ ವಿವಾದ ಹೂಡಲಾಗಿದೆ. ವಿಭಾಗವಾರು ವಿವಾದಗಳನ್ನು ಎತ್ತುವಾಗಲೇ ಹೋರಾಟವನ್ನು ಪ್ರಾರಂಭಿಸಲಾಗಿದೆ. ಜೂನ್ 2017 ರಲ್ಲಿ 2 ನೇ ರಾಜ್ಯ ಸಮ್ಮೇಳನ ನಡೆಸಿ ಸ್ಥಳೀಯ ಶಾಸಕರಿಗೆ ಮನವಿ ಪತ್ರ, ಸಹಿ ಸಂಗ್ರಹ ಚಳುವಳಿ, 24 ಘಂಟೆಗಳ ಕಾಲ ಉಪವಾಸ ಸತ್ಯಾಗ್ರಹ ನಡೆಸಲಾಗಿದೆ. ಇದರ ಭಾಗವಾಗಿ ಇಲಾಖೆಯಲ್ಲಿ ಜಂಟಿ ಸಭೆ ನಡೆದಿದೆ.

ಅಧಿಕೃತವಾಗಿ ಇಲಾಖಾ ಸಚಿವರಿಗೆ ಸಾಮೂಹಿಕ ಮನವಿ ಪತ್ರ ಕೊಡುವ ಹಕ್ಕೊತ್ತಾಯ ಸಮಾವೇಶವನ್ನು ಬೆಂಗಳೂರಿನಲ್ಲಿ ಜನವರಿ 18ರಂದು ಮಾಡಲಾಯಿತು. ಈ ಸಮಾವೇಶದಲ್ಲಿ 4 ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಈ ಸಮಾವೇಶಕ್ಕೆ ಇಲಾಖಾ ಸಚಿವರಾದ ಮಾನ್ಯ ಡಿ.ಕೆ.ಶಿವಕುಮಾರ್ ರವರು ಮತ್ತು ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳಾದ ಮಾನ್ಯ ಎಲ್. ಕೆ. ಅತಿಕ್ ರವರು ಬಂದು ಬೇಡಿಕೆಗಳನ್ನು ಪರಿಶೀಲಿಸುವುದಾಗಿ ತಿಳಿಸಿದ್ದಾರೆ.

ವಿದ್ಯೂತ್ ಕಾರ್ಮಿಕರಾಗಿ ಕೆಲಸ ಮಾಡುವಾಗ ಸಂಭವಿಸಿದ ಅವಘಡದಲ್ಲಿ ಅಂಗವೈಕಲ್ಯಕೊಳ್ಳಗಾದ ನಿಂಗಪ್ಪ ಬಾರಕೇರ್, ಹೊಸಕೋಟೆಯ ನಾಗರಾಜ್ ರವರು ಹಾಗೂ ಅವಘಡದಲ್ಲಿ ಸಾವನ್ನಪ್ಪಿದ ಚನ್ನಬಸಯ್ಯ ಎಂ.ಡಿರವರ ಕುಟುಂಬ ಕಷ್ಟದ ಬದುಕು ಸಾಗಿಸುತ್ತಿದೆ. ಇವರಿಗೆ ಪರಿಹಾರ ಹಾಗೂ ಕುಟುಂಬಕ್ಕೆ ಖಾಯಂ ಉದ್ಯೋಗ ನೀಡಲು CITU ಒತ್ತಾಯಿಸುತ್ತದೆ. ●

ಸಂತೆಯಿಂದ ಮಾಲ್ ನೆಡೆಗೆ ಧಾರವಾಡದ ಸಾಹಿತ್ಯ ಸಂಭ್ರಮ

2013 ರಲ್ಲಿ ವಿಜಯ ಕರ್ನಾಟಕದಲ್ಲಿ *ಸುಗತ ಶ್ರೀನಿವಾಸರಾಜು* ಅವರು ಸಂಪಾದಕರಾಗಿದ್ದಾಗ *ಎಂ.ಡಿ.ವಕ್ಕುಂದ* ಅವರು *'ಸಾಹಿತ್ಯ ಸಂಭ್ರಮದ'* ನಡೆಯ ಬಗ್ಗೆ ವಿಮರ್ಶಾತ್ಮಕವಾಗಿ ಬರೆದಿದ್ದರು. ಆಗ ನಾನು ಪ್ರತಿಕ್ರಿಯಿಸಿದ್ದೆ. ಆ ಬರಹ *ವಿಕೆ*ಯಲ್ಲಿ ಪ್ರಕಟವಾಗಿತ್ತು.

ಇದೀಗ ಮತ್ತೊಂದು ಸಾಹಿತ್ಯ ಸಂಭ್ರಮ ಮುಗಿದಿದೆ.. ಈಗಲೂ 2013 ರಲ್ಲಿ ಬರೆದ ಬರಹದ ನನ್ನ ನಿಲುವಿಗೆ ಬದ್ಧನಾಗಿದ್ದೇನೆ..

ಈಚಿನ ಸಂಭ್ರಮಗಳಲ್ಲಿ ನಡೆಯುವ ಚರ್ಚೆಗಳು (ಆಯೋಜಕರು ಬರುವ ಟೀಕೆಗೆ ಉತ್ತರಿಸಲು ನಾವು ಹಾಗಲ್ಲ ಎಂದು ಉದ್ದೇಶಿತವಾಗಿ ಸೇರ್ಪಡೆಗೊಳಿಸಿದ ಅಪವಾದಗಳನ್ನು ಹೊರತು ಪಡಿಸಿ) ನನ್ನ ಈ ನಿಲುವಿಗೆ ಸಾಕ್ಷಿಯಂತೆಯೂ ಇವೆ..
**

ನಮ್ಮ ನಗರಗಳನ್ನು ಆವರಿಸಿದ ಮಾಲ್ ಗಳಲ್ಲಿರುವ ತರಕಾರಿಯಾಗಲಿ, ಬೇಳೆಕಾಳುಗಳಾಗಲಿ ಆಕಾಶದಿಂದ ಉದುರಿದವುಗಳಲ್ಲ. ಅವು ಕೂಡ ಭೂಮಿಯಲ್ಲಿಯೇ ಬೆಳೆದವುಗಳು. ಆದರೆ ಇಲ್ಲಿ ಅವುಗಳನ್ನು ನೀಟಾಗಿಸಿ, ಫ್ರೆಶ್ಶಾಗಿಸಿ, ತಾಜಾ ಕಾಣಿಸುವಂತೆ ಸುಂದರವಾಗಿ ಪ್ಯಾಕ್ ಮಾಡಿ, ಅದಕ್ಕೆ ಬಾರ್‌ಕೋಡ್ ಇರುವ ರೇಟಿನ ಬಿಲ್ಲೆ ಅಂಟಿಸಿ ಆಕರ್ಶಕಗೊಳಿಸಲಾಗಿರುತ್ತೆ. ಆಗ ಅದು ಸಂತೆಯ ತರಕಾರಿಯಂತೆ ಒರಟೊರಟಾಗಿರುವುದಿಲ್ಲ, ನೂರಾರು ಜನ ಮುಟ್ಟಿ ಕಲುಶಿತಗೊಂಡಿರುವುದೂ ಇಲ್ಲ. ಉದಾ: ಸಂತೆಯ ಈರುಳ್ಳಿ ಗುಂಪಿನಲ್ಲಿ ದೊಡ್ಡದೂ, ಸಣ್ಣದೂ, ಕೆಟ್ಟದ್ದೂ, ಒಳ್ಳೆಯದೂ, ರವದಿಯೂ ಕಸವೂ ಜತೆಗೆ ಕಲೆತಿರುತ್ತದೆ. ಅದೇ ಈರುಳ್ಳಿ ಮಾಲ್ ನಲ್ಲಿ ಸೂಟುಬೂಟಿಗೆ ಫರ್ಫ್ಯೂಮ್ ಸಿಂಪಡಿಸಿಕೊಂಡು ಘಮಘಮಿಸುವಂತೆ ಕಾಣುತ್ತದೆ. ಸಂತೆಯಲ್ಲಿ ಕೆಲವೊಮ್ಮೆ ರೈತನೇ ತನ್ನ ಬೆಳೆಯನ್ನು ನೇರವಾಗಿ ಮಾರಬಹುದು. ಆದರೆ ಮಾಲ್ ನಲ್ಲಿ ಅದು ಸಾದ್ಯವಿಲ್ಲ. ಈ ಇಡೀ ಚಿತ್ರವನ್ನು ಸಾಹಿತ್ಯ ಕ್ಷೇತ್ರಕ್ಕೆ ನೇರವಾಗಿ ಅನ್ವಯಿಸಿ ನೋಡಿದರೆ ಅದು ಹೇಗೆ ಒಂದು ಆಕಾರವನ್ನು ಪಡೆಯಬಹುದೋ ಅದರ ಸ್ಪಷ್ಟ ರೂಪ 'ಧಾರವಾಡದ ಸಾಹಿತ್ಯ ಸಂಭ್ರಮ'.

ಜೈಪುರದ ಸಾಹಿತ್ಯ ಸಮ್ಮೇಳನವನ್ನು ನೋಡಿ ಬಂದ ಧಾ.ಸಾ.ಸಂ ಆಯೋಜಕರಿಗೆ, ಕರ್ನಾಟಕದ ಸಾಹಿತ್ಯ ಚಟುವಟಿಕೆಗಳು ಥೇಟ್ ನಮ್ಮ ಹಳ್ಳಿಗಳ ಸಂತೆಯಂತೆಯೇ ಕಂಡು ಮುಜುಗರವಾದಂತಿದೆ. ಛೇ ಸಾಹಿತ್ಯ ಚಟುವಟಿಕೆಗಳಲ್ಲಿ ಹೀಗೆ ಯಾರು ಬೇಕಾದರೂ ಪಾಲ್ಗೊಳ್ಳುವಂತಿದ್ದರೆ ಹೇಗೆ? ಅದು ಸಾಹಿತ್ಯಾಸಕ್ತರು ಪುಕ್ಕಟೆ ಬಂದು ಸಾಹಿತ್ಯದ ಭಾಷಣ ಕಾವ್ಯಗಳನ್ನು ಕೇಳಿದರೆ ಹೇಗೆ? ಸಾಹಿತಿಗಳಿಗೆ, ಸಾಹಿತ್ಯಕ್ಕೇನು ಬೆಲೆ ಇಲ್ಲವೆ? ನೋಡಿ ಜೈಪುರದ ಸಾಹಿತ್ಯದ ಸಂಭ್ರಮದಲ್ಲಿ ಸಾಹಿತ್ಯಕ್ಕೆ ಎಂಥ ಬೆಲೆ ಇದೆ. ಕೋಟ್ಯಾಂತರ ರೂಪಾಯಿ ವ್ಯವಹಾರ ಎಂದು ಇವರನ್ನು ಕಂಗೆಡಿಸಿರಬಹುದು. ಹಾಗಾಗಿಯೇ ನಮ್ಮೂರ ಮುಕ್ತ ಸಂತೆಯಂತಿದ್ದ ಸಾಹಿತ್ಯ ಚಟುವಟಿಕೆಗಳನ್ನ ಮಾಲ್ ನ ಪ್ಯಾಕೇಟ್ ನಲ್ಲಿ ಸಾಹಿತ್ಯದ ಪ್ಯಾಕೇಜ್ ತುಂಬಿ ಅದಕ್ಕೊಂಡು ಬಾರ್ ಕೋಡಿನ ರೇಟಿನ ಬಿಲ್ಲೆ ಅಂಟಿಸಿ ಕೊಡುವ ಯೋಚನೆ ಮಾಡಿದ್ದಾರೆ. ಹಾಗಾಗಿ ಧಾ.ಸಾ.ಸಂವನ್ನು 'ಸಂತೆಯಿಂದ ಮಾಲ್ ನೆಡೆಗೆ' ಎನ್ನಲಡ್ಡಿಯಿಲ್ಲ.

ಧಾ.ಸಾ.ಸಂ ದ ಬಗೆಗಿನ ತಾತ್ವಿಕ ವಿರೋಧ ಕೂಡ ಸಂತೆಯನ್ನು ಮಾಲ್ ನಲ್ಲಿಟ್ಟು ಸಂಭ್ರಮಿಸುವುದನ್ನು ವಿರೋಧಿಸುವುದೇ ಆಗಿದೆ. ಮಾಲ್ ನಲ್ಲಿಯೂ ಕೂಡ ಸಂತೆಯಲ್ಲಿ ಇರಬಹುದಾದ ವಸ್ತುಗಳೇ ಇರುತ್ತವೆ, ಸಂತೆಗೆ ಬರುವ ಕೆಲ ಜನರೇ ಮಾಲ್ ಗೂ ಬರುತ್ತಾರೆ. ಮಾಲ್ ನಲ್ಲಿ ಭೂಮಿಯಲ್ಲಿ ಬೆಳೆದ ಬೆಳೆಗಳೂ ಇರುತ್ತವೆ. ಹಾಗೆಂದಾಕ್ಷಣ ಮಾಲ್ ನ್ನು ಹೇಗೆ ಸಂತೆ ಎಂದು ಹೇಳಲಿಕ್ಕಾಗುವುದಿಲ್ಲವೋ, ಸಾಮಾನ್ಯ ಜನರು ದಂಡಾಗಿ ಮಾಲ್ ಗೆ ನುಗ್ಗಿ ಅಲ್ಲಿನ ಹೈ ರೇಟಿನ ವಸ್ತುಗಳನ್ನು ಕೊಳ್ಳಲಾಗುವುದಿಲ್ಲವೋ, ಹಾಗೆಯೇ ಧಾ.ಸಾ.ಸಂ ವನ್ನು ಪ್ರಗತಿಪರ ಜನಪರ ಎಂದು ಹೇಳಲಿಕ್ಕಾಗದು.

ಬಹುಶಃ ಇದನ್ನು ಸಾಹಿತ್ಯದ ನೆಲೆಯಲ್ಲಿ ತಾತ್ವಿಕವಾಗಿ ಅರ್ಥ ಮಾಡಿಕೊಳ್ಳಲು ಸದ್ಯಕ್ಕೆ ನನಗೆ ಹೊಳೆಯುತ್ತಿರುವ ಶಕ್ತ ರೂಪಕ ಎಂದು ಭಾವಿಸುವೆ. ರೈತರು, ಸಣ್ಣಪುಟ್ಟ ವ್ಯಾಪಾರಿಗಳು, ಜನಸಾಮಾನ್ಯರು ಹೇಗೆ ತಮ್ಮ ನಗರಕ್ಕೆ ಕಾಲಿರಿಸಲಿರುವ ಮಾಲ್ ವೊಂದನ್ನು ವಿರೋಧಿಸುವುದು, ಅದು ಬರದಂತೆ ತಡೆಯುವುದು ನ್ಯಾಯವೋ, ಹಾಗೆಯೇ ಸಾಮಾನ್ಯ ಓದುಗರು, ಸಾಹಿತಿಗಳು, ಸಾಹಿತ್ಯಾಭಿಮಾನಿಗಳು ಧಾ.ಸಾ.ಸಂ ವನ್ನು ವಿರೋಧಿಸುವುದು, ಅದು ಭದ್ರವಾಗಿ ನೆಲೆಗೊಳ್ಳದಂತೆ ತಡೆಯುವುದು ಕೂಡ ನ್ಯಾಯವೆ. ಧಾ.ಸಾ.ಸಂ ದಲ್ಲಿ ಭಾಗವಹಿಸುವುದೆಂದರೆ, ಸಂತೆಯ ತರಕಾರಿ ಪ್ಯಾಕ್ ನಲ್ಲಿ ಕೂತು ರೇಟಿನ ಬಿಲ್ಲೆಯ ಅಂಟಿಸಿಕೊಂಡು ಮಾಲ್ ನಲ್ಲಿ ಕುಳಿತಂತೆ. ಬೆಂಬಲಿಸುವುದೆಂದರೆ ನಗರಕ್ಕೆ ಬರಲಿರುವ ಮಾಲ್ ವೊಂದಕ್ಕೆ ಜೈಕಾರ ಹಾಕಿದಂತೆ. ಇದಿಷ್ಟು ಹೊಸ ತಲೆಮಾರಿನ ಬರಹಗಾರನಾಗಿ ನನಗೆ ಹೊಳೆಯುತ್ತಿರುವ ಖಚಿತ ನಿಲುವು.

– ಅರುಣ್ ಜೋಳದ ಕೂಡ್ಲಿಗಿ

ನೂರುನ್ನೀಸ್ಸಾ



ನೂರುನ್ನೀಸ್ಸಾ ಹಸನ್ಮುಖಿ, ತಿಳುವಳಿಕೆಯುಳ್ಳ ಮಹಿಳೆ. ಆರೋಗ್ಯದ ಬಗ್ಗೆ ಮಾಹಿತಿ ಇಲ್ಲದಿದ್ದರೂ, ಯಾವುದೇ ಚರ್ಚೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾಳೆ. ಗಂಡ ಇಬ್ರಾಹಿಂ ಕೂಡ ಜವಾಬ್ದಾರಿಯುತ ವ್ಯಕ್ತಿ, ಆದರೆ ತಾನಾಯಿತು ತನ್ನ ಕೆಲಸವಾಯಿತು ಎನ್ನುವ ಮನೋಭಾವನೆಯುಳ್ಳವನು. ನನ್ನಲ್ಲಿಗೆ ಸುಮಾರು ಒಂದು ದಶಕದಿಂದ ಚಿಕಿತ್ಸೆಗೆ ಬರುತ್ತಿದ್ದು, ಆರೋಗ್ಯ ಪಾಲನೆ ಬಗ್ಗೆ ಸಾಕಷ್ಟು ಆಸಕ್ತಿ ವಹಿಸಿದ್ದರು. ಅಂದು ಸಂಜೆ 7 ಗಂಟೆಗೆ, ಇಬ್ರಾಹಿಂ ತನ್ನ ಪತ್ನಿ ನೂರುನ್ನೀಸ್ಸಾಳನ್ನು ನನ್ನ ಕ್ಲಿನಿಕ್ಕಿಗೆ ಕರೆದುಕೊಂಡು ಬಂದಿದ್ದನ್ನು ನೋಡಿದಾಗ ನನಗೆ ಆಶ್ಚರ್ಯವಲ್ಲದೇ ಗಾಬರಿಯಾಯಿತು. ಅವಳು ನನ್ನಲ್ಲಿಗೆ ಒಂದು ವರ್ಷದ ಹಿಂದೇ ಬಂದಿದ್ದರು, ಹಾಗೂ ಆಗ ಸಾಮಾನ್ಯ ಸಮಸ್ಯೆಗೆ ಚಿಕಿತ್ಸೆ ನೀಡಿ ಕಳುಹಿಸಿದ್ದೆ. ಇಂದು ಅವಳನ್ನು ಇಬ್ಬರು ಎತ್ತಿ ಕರೆದುಕೊಂಡು ಬಂದಿದ್ದರು. ಅಂದಿಗೆ ಹೋಲಿಸಿದರೆ ಇಂದು ಅವಳು ಕೇವಲ ಕಾಲುಭಾಗದಷ್ಟು ಎನರ್ಜಿ ಉಳ್ಳವರಾಗಿದ್ದರೆಂದೆನಿಸಿತು.

ಈ ದಿನ ನೂರುನ್ನೀಸ್ಸಾಗೆ ಏನಾಗಿದೆ ಎಂಬ ವಿಷಯ ನನ್ನ ಆತಂಕಕ್ಕೆ ಕಾರಣವಾಯಿತು. ಅದನ್ನು ಅವರಿಗೆ ಕೇಳಿದಾಗ ಇಬ್ರಾಹಿಂನಿಂದ ಬಂದ ಉತ್ತರ "ಎರಡು ದಿನದ ಹಿಂದೆ ತಲೆ ಸುತ್ತಿ ಬಂದು ಬಿದ್ದುಬಿಟ್ಟಳು. ಸುಮಾರು ಸಂಜೆ 6 ಗಂಟೆಯ ಸಮಯ. ನಮ್ಮ ವಠಾರದಲ್ಲಿ ಎಲ್ಲರೂ ಇದ್ದರು. ಎಲ್ಲರಿಗೂ ಗಾಭರಿಯಾಯಿತು. ಅಲ್ಲಿದ್ದವರೆಲ್ಲರೂ ಕೂಡಲೇ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗು" ಎಂದು ಸಲಹೆ ಕೊಟ್ಟರು. ಆಗ ನನಗೆ ಏನೂ ತೋಚಲಿಲ್ಲ. ಅವರು ಹೇಳಿದಂತೆ ನರ್ಸಿಂಗ್ ಹೋಂಗೆ ಹೊರಟೆವು. ಅಲ್ಲಿಗೆ ಹೋದಾಗಲೂ ತುಂಬಾ ಸುಸ್ತಾಗಿದ್ದಳು, ಎದ್ದು ನಿಲ್ಲಲು ಆಗುತ್ತಿರಲಿಲ್ಲ. ಕೂಡಲೇ ಬೆಡ್ ಮೇಲೆ ಮಲಗಿಸಿ ಗ್ಲೂಕೋಸ್ ಕೊಡಲು ಪ್ರಾರಂಭಿಸಿದರು. ಯಾಕ್ರೀ ಇಷ್ಟು ತಡ ಮಾಡಿದ್ದೀರಿ ಎಂದು ಕೇಳಿದರು. (ಇದು ಸಾಮಾನ್ಯ ಡಯಲಾಗು, ಎಲ್ಲ ನರ್ಸಿಂಗ್‌ಹೋಂ ನವರು ಹಾಕುವ ಪೀಠಿಕೆ) ಅದಕ್ಕೆ "ಇಲ್ಲ ಡಾಕ್ಟ್ರೆ, ಅರ್ಧಗಂಟೆ ಹಿಂದೆಯೇ ತಲೆಸುತ್ತಿ ಬಿದ್ದಳು. ಕೂಡಲೆ ಕರೆದುಕೊಂಡು ಬಂದಿದ್ದೇವ"ಯೆಂದು ಇಬ್ರಾಹಿಂ ಹೇಳಿದರಂತೆ. ನೂರುನ್ನೀಸ್ಸಾಳನ್ನು ಅರ್ಧಗಂಟೆ ಪರೀಕ್ಷೆ ಮಾಡಿದರಂತೆ, ಹೃದಯದ ಸಮಸ್ಯೆ ಇರಬಹುದೆಂದು ಹೇಳಿದರಂತೆ. ಅಷ್ಟೊತ್ತಿಗೆ ಎಲ್ಲ ರಕ್ತಪರೀಕ್ಷೆ ಅಲ್ಟ್ರಾಸೌಂಡ್, ಎಕ್ಸರೇ ಪರೀಕ್ಷೆಗಳಾಗಿತ್ತು. ರಾತ್ರಿ ಹತ್ತು ಗಂಟೆಗೆ ಡಾಕ್ಟ್ರು ಬಂದು "ಹೃದಯದ ಸಮಸ್ಯೆ ಇರಬಹುದು, ಇನ್ನೊಂದು ದೊಡ್ಡ(ಹೆಸರನ್ನು ನೀಡಿಲ್ಲ) ಆಸ್ಪತ್ರೆಗೆ ತಮ್ಮ ಆಂಬ್ಯುಲೆನ್ಸ್‌ನಲ್ಲಿ ಕಳುಹಿಸಿದರು. ಅಲ್ಲಿ ಎರಡು ದಿನವಿದ್ದು, ಪುನಃ ಎಲ್ಲ ಪರೀಕ್ಷೆಗಳನ್ನು ಮಾಡಿ, ಹತ್ತುಸಾವಿರ ರೂಪಾಯಿ ಪಡೆದು ಡಿಸ್ಚಾರ್ಜ್ ಮಾಡಿದರು. ರೋಗವೇನೆಂದು ಹೇಳಲಿಲ್ಲ ಹಾಗೂ ಹೃದಯರೋಗ ಇದೆಯೋ ಇಲ್ಲವೋ ಎಂದು ಹೇಳಲಿಲ್ಲ ಎಂದು ಇಬ್ರಾಹಿಂ ಹೇಳಿದರು. ಇದೇ ವಿಪರ್ಯಾಸದ ಸಂಗತಿ!

ಅನೇಕ ಬಾರಿ ಈ ದೊಡ್ಡ ಆಸ್ಪತ್ರೆಗಳು ದೊಡ್ಡ ದೊಡ್ಡ ಸಮಸ್ಯೆಗಳನ್ನು ಉದಾ ಕ್ಯಾನ್ಸರ್, ಹೃದಯ ರೋಗ ಇತ್ಯಾದಿಗಳನ್ನು ಗುರುತಿಸಿ ದುಬಾರಿ ಚಿಕಿತ್ಸೆ ನೀಡುತ್ತವೆ. ಆದರೆ ಎರಡು ವಿಷಯವನ್ನು ಇಲ್ಲಿ ಗಮನಿಸಬೇಕು, 1) ಚಿಕಿತ್ಸೆ ದುಬಾರಿಯಾಗಿರುತ್ತದೆ, 2) ಚಿಕಿತ್ಸೆ ಬಗ್ಗೆ ಮಾಹಿತಿ ನೀಡವುದೇ ಇಲ್ಲ. ಇದು ಒಂದು ಪ್ರಮುಖ ಸಮಸ್ಯೆ ಆದರೆ ದೊಡ್ಡ ಆಸ್ಪತ್ರೆಗಳು ಹಾಗೂ ವೈದ್ಯರು ಇದನ್ನು ನಿರಾಕರಿಸುತ್ತಾರೆ! ಅವರು ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ. ಸಣ್ಣ ಸಣ್ಣ ಸಮಸ್ಯೆಗಳಿಗೆ ಜನರು ದೊಡ್ಡ ಆಸ್ಪತ್ರೆಗೆ ಹೋದಾಗಲೂ ಇದೇ ಸಮಸ್ಯೆ. ಅನೇಕ ಬಾರಿ ಮುಂದೇನು ಮಾಡಬೇಕೆಂಬುದು ಜನರಿಗೆ ಸಮಸ್ಯೆ. ಇದೇ ಸ್ಥಿತಿಯಲ್ಲಿ ನೂರುನ್ನಿಸ್ಸಾ ಅವರು ನನ್ನಲ್ಲಿಗೆ ಬಂದಿದ್ದರು. ಅವರ ಸಮಸ್ಯೆ ಏನೆಂದು ಸ್ಪಷ್ಟವಾಗಿರಲಿಲ್ಲ, ಆದರೆ ಹೃದಯ ರೋಗವಿರಬಹುದೆಂದು ನರ್ಸಿಂಗ್ ಹೋಂನವರು ಹೇಳಿದ್ದರು. ಆದರೆ ದೊಡ್ಡ ಆಸ್ಪತ್ರೆಯವರು ಏನನ್ನೂ ಹೇಳಿರಲಿಲ್ಲ. ಈ ರೀತಿ ತೀರ್ಮಾನಿಸಲಾಗದ ಸ್ಥಿತಿಯಲ್ಲಿ ನಿರ್ಣಾಯಕ ತೀರ್ಮಾನ ನೀಡುವ, ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ನೀಡುವ, ಹೃದಯ ರೋಗದ ಆಸ್ಪತ್ರೆಯೆಂದರೆ ಬೆಂಗಳೂರಿನ ಜಯದೇವ ಆಸ್ಪತ್ರೆ. ಅದ್ದರಿಂದ ಅಲ್ಲಿಗೆ ಹೋಗಲು ತಯಾರಿದ್ದೀರೇನೆಂದು ನೂರುನ್ನೀಸ್ಸಾ ಹಾಗೂ ಅವರ ಯಜಮಾನರನ್ನು ಕೇಳಿದಾಗ ಅವರು ಒಪ್ಪಿಕೊಂಡರು. ಅವರನ್ನು ಅಲ್ಲಿಗೆ ಕಳಿಸಲು ತಯಾರಾದೆ.

ಖಾಸಗೀ ನರ್ಸಿಂಗ್ ಹೋಂ ನೂರುನ್ನೀಸ್ಸಾಳ ಕಾಯಿಲೆ ಬಗ್ಗೆ ಕೊಟ್ಟ ತೀರ್ಮಾನದ ಬಗ್ಗೆ ನನಗೆ ಅನುಮಾನವಿತ್ತು. ಹೃದಯರೋಗದ ತೊಂದರೆಗಳು, ಪರೀಕ್ಷೆ ವರದಿಯಲ್ಲಿ ಯಾವ ಸೂಚನೆಯೂ ಇರಲಿಲ್ಲದಿದ್ದುದರಿಂದ ಕೂಡಲೇ ಇಬ್ರಾಹಿಂನಿಂದ ರೋಗದ ಬಗ್ಗೆ ಇನ್ನು ವಿವರ ಪಡೆಯಲು ಮುಂದಾದೆ. ಅವರಿಗೆ ಹಿಂದೆಂದೂ ಹೃದಯ ರೋಗದ ಸಮಸ್ಯೆಗಳು ಇರಲಿಲ್ಲ. ಉದಾ: ಎದೇನೋವು, ಉಬ್ಬಸ, ಕಾಲು ಊತ ಬರುವುದು, ರಕ್ತದ ಏರೊತ್ತಡ, ಹಾಸಿಗೆ ಹಿಡಿದದ್ದು. ಹಿಂದೆಂದೂ ಈ ಸಮಸ್ಯೆಗಳಿಂದ ಆಸ್ಪತ್ರೆಯಲ್ಲಿ ದಾಖಲಾದ ಸನ್ನಿವೇಶವಿರಲಿಲ್ಲ. ಅವರ ತಂದೆ ತಾಯಿ ಕುಟುಂಬದಲ್ಲಿ ಯಾರಿಗೂ ಹೃದಯರೋಗದ ಸಮಸ್ಯೆ ಇರಲಿಲ್ಲ.

"ಈ ಬಾರಿ ನೂರುನ್ನೀಸ್ಸಾಗೆ ಎರಡು ದಿನದಿಂದ ವಿಪರೀತ ಸುಸ್ತು ನಿದ್ದೆ ಇಲ್ಲದಿರುವುದು ಕಂಡು ಬಂದಿದೆ. ಎದೆ ನೋವು ಉಸಿರಾಟದ ತೊಂದರೆ ಕಾಲೂತ ಏನೂ ಕಂಡು ಬಂದಿರಲಿಲ್ಲ" ಎಂದು ಇಬ್ರಾಹಿಂ ಹೇಳಿದರು. "ಆತಂಕದಿಂದ್ದೀರೇ"ನೆಂದು ಕೇಳಿದಾಗ "ಏನೂ ಇಲ್ಲ" ಅಂದರು. ಆಗಲೂ ನನಗೆ ಹೃದಯ ರೋಗವೋ, ಮಾನಸಿಕ ಸಮಸ್ಯೆಯೋ ತಿಳಿದುಬರಲಿಲ್ಲ. ನಂತರ ಅವರಿಗೆ ಮಾನಸಿಕ ಸಮಸ್ಯೆ ಇದೆಯೇ ಎಂಬ ಅನುಮಾನದಿಂದ ವಿವರವಾಗಿ ಪಶ್ನೆ ಮಾಡಿದ ನಂತರ ಹೊರಬಿದ್ದ ವಿಷಯ ಈ ರೀತಿ ಇದೆ. ಆತಂಕವಿದೆಯೇ ಎಂದು ಕೇಳಿದಾಗ ಇಲ್ಲ ಎಂದರೂ ನನಗೆ ಮಾನಸಿಕ ಒತ್ತಡದಿಂದಾದ, ಖಿನ್ನತೆ, ನಿಶ್ಯಕ್ತಿ ಬಂದಿರುವುದು ಸ್ಪಷ್ಟವಾಯಿತು.

ನೂರುನ್ನೀಸ್ಸಾ ತನ್ನ ಗಂಡ ಹಾಗೂ ಇಬ್ಬರು ಮಕ್ಕಳೊಂದಿಗೆ ಬೆಂಗಳೂರಿನಲ್ಲಿಯೇ ಜೀವನ ಮಾಡಿಕೊಂಡಿದ್ದಳು. ಇತ್ತೀಚೆಗೆ ಅವಳ ತಂದೆ ತಾಯಿ ನೂರುನ್ನಿಸ್ಸಾಗೆ ತಮ್ಮ ಮಗನಿಗೆ ಮದುವೆ ಮಾಡಲು ಒಂದು ಹೆಣ್ಣು ತೋರಿಸಲು ಕೇಳಿದ್ದರು ಹಾಗೂ ಜವಾಬ್ದಾರಿ ವಹಿಸಿದ್ದರು. ಅಂದಿನಿಂದ ನೂರಿನ್ನೀಸಾ ತನ್ನ ತಮ್ಮನಿಗೆ ಮದುವೆ ಮಾಡಲು ಒಂದು ಹೆಣ್ಣು ಹುಡುಕಲು ಪ್ರಾರಂಭಿಸಿದ್ದಳು. ಹಲವು ತಿಂಗಳುಗಳ ನಂತರ ಅವಳಿಗೆ ಪರಿಚಯದ ಒಂದು ಹೆಣ್ಣು ಹುಡುಗಿಯ ಬಗ್ಗೆ ತಿಳಿದುಬಂದಿತು. ಕೂಡಲೇ ತನ್ನ ತಾಯಿಗೆ ವಿವರಗಳನ್ನು ನೀಡಿ ಮುಂದುವರಿಯಲು ಹೇಳಿದಳು. ನಂತರ ಅವಳ ತಮ್ಮನ ಮದುವೆ ಅದೇ ಹುಡುಗಿಯೊಂದಿಗೆ ನಡೆಯಿತು.

ಕೆಲವು ತಿಂಗಳುಗಳ ನಂತರ ಅವಳ ತಂದೆ ತಾಯಿಯರು ತಮ್ಮ ಸೊಸೆಯ ಬಗ್ಗೆ ದೂರು ಹೇಳಲು ನೂರಿನ್ನೀಸಾ ಬಳಿಗೆ ಬಂದಿದ್ದರು. ಆ ಹುಡುಗಿ ಬೇರೆ ಯಾರೊಂದಿಗೋ ಸಂಬಂಧವಿಟ್ಟುಕೊಂಡಿರುವುದಾಗಿ ಆತಂಕದಿಂದ ಹೇಳಿದರು. ಇದು ಗೊತ್ತಾದಾಗ ಅವರ ತಂದೆ ತಾಯಿ, ಆ ಸಂಬಂಧವನ್ನು ನಿರಾಕರಿಸಿ ಅವಳಿಗೆ ತಲಾಖ್ ನೀಡಿ ಅವನಿಗೆ ಬೇರೆ ಹುಡುಗಿಯನ್ನು ನೋಡಲು ತಮ್ಮ ಮಗಳಿಗೆ ಹೇಳಿದ್ದರು. ಆದರೆ ಇಬ್ರಾಹಿಂ, "ಮದುವೆಗೆ ಮುಂಚೆ ಫ್ರೆಂಡ್‌ಷಿಪ್ ಇದ್ದರೆ ಪರವಾಗಿಲ್ಲ, ಈಗೇಕೆ ನಿರಾಕರಿಸುತ್ತೀರಿ, ನಾವು ಅವರೊಂದಿಗೆ ಮಾತನಾಡಿ ನಿಜಾಂಶ ತಿಳಿದು ನಿಮಗೆ ಹೇಳುತ್ತೇವೆ, ಅಲ್ಲಿಯವರೆಗೆ ಕಾಯಬೇಕಾಗುತ್ತದೆ" ಎಂದು ಹೇಳಿದ್ದರು. ಆ ಹುಡುಗಿಯನ್ನು ವಿಚಾರಿಸಲು ಹೋದಾಗ ಇಬ್ರಾಹಿಂ ಹಾಗೂ ನೂರುನ್ನೀಸಾಳಿಗೆ ಗೊತ್ತಾದ ವಿಷಯವೇನೆಂದರೆ, ಅವಳು ಎರಡು ತಿಂಗಳ ಗರ್ಭಿಣಿಯೆಂದು. ಆಗ ಅವರಿಬ್ಬರು ತಲಾಖ್ ಮಾಡುವುದು ಬೇಡ, ಕಾನೂನಾತ್ಮಕ ಹಾಗೂ ಮಾನವೀಯತೆಯಿಂದ ತಪ್ಪಾಗುತ್ತದೆ ಆ ಹುಡುಗಿಯ ಜೊತೆಗೆ ಹೊಂದಾಣಿಕೆಯಿಂದ ಇರಲು ಸಾಧ್ಯ. ಹಿಂದಿನದು ಈಗ ಪ್ರಮುಖವಲ್ಲವೆಂದು ಹೇಳಿದ್ದರು.

ಇದಕ್ಕೆ ಅವರ ತಂದೆ ತಾಯಿ ನೂರುನ್ನೀಸ್ಸಾ ಮೇಲೆ ಕೋಪಗೊಂಡು ನೀನು ತಲಾಖ್‌ಗೆ ಅಡ್ಡಿಬರುತ್ತಿರುವೆ ಹಾಗೂ ಒಳ್ಳೆ ಹುಡುಗೀನ ತೋರಿಸಲಿಲ್ಲ. ಎಲ್ಲ ನಿಂದೇ ತಪ್ಪು ಇಟ್ಟುಕೊಂಡು, ನಿನ್ನ ತಮ್ಮನ ಬಾಳು ಹಾಳು ಮಾಡುತ್ತಿರುವೆಯೆಂದು ಹೇಳಿ ಹೊರಟು ಹೋದರು.

ಅನೇಕ ಬಾರಿ ಈ ದೊಡ್ಡ ಆಸ್ಪತ್ರೆಗಳು ದೊಡ್ಡ ದೊಡ್ಡ ಸಮಸ್ಯೆಗಳನ್ನು ಉದಾ ಕ್ಯಾನ್ಸರ್, ಹೃದಯ ರೋಗ ಇತ್ಯಾದಿಗಳನ್ನು ಗುರುತಿಸಿ ದುಬಾರಿ ಚಿಕಿತ್ಸೆ ನೀಡುತ್ತವೆ. ಆದರೆ ಎರಡು ವಿಷಯವನ್ನು ಇಲ್ಲಿ ಗಮನಿಸಬೇಕು, 1) ಚಿಕಿತ್ಸೆ ದುಬಾರಿಯಾಗಿರುತ್ತದೆ, 2) ಚಿಕಿತ್ಸೆ ಬಗ್ಗೆ ಮಾಹಿತಿ ನೀಡುವುದೇ ಇಲ್ಲ. ಇದು ಒಂದು ಪ್ರಮುಖ ಸಮಸ್ಯೆ ಆದರೆ ದೊಡ್ಡ ಆಸ್ಪತ್ರೆಗಳು ಹಾಗೂ ವೈದ್ಯರು ಇದನ್ನು ನಿರಾಕರಿಸುತ್ತಾರೆ! ಅವರು ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆ ಇದೆ. ಸಣ್ಣ ಸಣ್ಣ ಸಮಸ್ಯೆಗಳಿಗೆ ಜನರು ದೊಡ್ಡ ಆಸ್ಪತ್ರೆಗೆ ಹೋದಾಗಲೂ ಇದೇ ಸಮಸ್ಯೆ. ಅನೇಕ ಬಾರಿ ಮುಂದೇನು ಮಾಡಬೇಕೆಂಬುದು ಜನರಿಗೆ ಸಮಸ್ಯೆ. ಇದೇ ಸ್ಥಿತಿಯಲ್ಲಿ ನೂರುನ್ನಿಸ್ಸಾ ಅವರು ನನ್ನಲ್ಲಿಗೆ ಬಂದಿದ್ದರು.

ನೂರುನ್ನೀಸ್ಸಾ ತಂದೆ ತಾಯಿಯರ ತೀರ್ಮಾನದಿಂದ ಆಘಾತಗೊಂಡಳು. ಅಂದಿನಿಂದ ನೂರುನ್ನೀಸ್ಸಾಗೆ ಮಾನಸಿಕ ಅಸಮಾಧಾನ, ದುಃಖ, ಅಳು ಬರುವುದು, ಕೀಳರಿಮೆ, ತಪ್ಪು ಮಾಡಿದ ಭಾವನೆ ಇತ್ಯಾದಿಗಳು ಕಾಡಲು ಪ್ರಾರಂಭವಾಯಿತು. ಅವಳಿಗೆ ಹಸಿವು, ನಿದ್ರೆ, ಉತ್ಸಾಹ ಕ್ರಮೇಣ ಕಡಿಮೆಯಾದವು. ಮಕ್ಕಳ ಮೇಲೆ, ಮನೆಯ ದಿನನಿತ್ಯದ ಕೆಲಸಗಳ ಮೇಲೆ ಆಸಕ್ತಿ ಕಡಿಮೆಯಾಯಿತು. ಗಂಡ ಇಬ್ರಾಹಿಂಗೆ ಕೆಲಸದ ಒತ್ತಡ ಹಾಗೂ ಇದಾವುದೂ ಗೊತ್ತಿರದಿದ್ದರಿಂದ, ಅವಳ ಬಗ್ಗೆ ವಿಶೇಷ ಗಮನ ಹರಿಸದಾದನು.

ನೂರುನ್ನೀಸ್ಸಾ ತನ್ನ ಸಮಸ್ಯೆಯನ್ನು ಯಾರಿಗೂ ಹೇಳಲು ಸಾಧ್ಯವಾಗಲಿಲ್ಲ. ಈ ಸಮಸ್ಯೆ ಪ್ರಾರಂಭವಾಗುವ ಮುಂಚೆ ನೂರುನ್ನೀಸ್ಸಾ ಮಾರ್ಕೇಟಿಗೆ, ಶಾಲೆಗೆ ಹೋಗುತ್ತಿದ್ದಳು. ಆದರೆ ಈಗ ಎಲ್ಲಿಗೂ ಹೋಗದಂತೆ ಮನೆಯಲ್ಲಿಯೇ ಇರಲು ಪ್ರಯತ್ನಿಸುತ್ತಿದ್ದಳು. ಅನೇಕ ಬಾರಿ ದುಃಖದಿಂದ ಅಳುವುದು, ಮುಂದೇನು ಎಂಬ ಆತಂಕ ಅವಳನ್ನು ಕಾಡತೊಡಗಿತು.

ಒಂದು ದಿನ ಈ ಸಮಸ್ಯೆಯ ಮಧ್ಯದಲ್ಲಿ ತಲೆ ಸುತ್ತಿ ಬಿದ್ದಾಗ, ಪಕ್ಕದ ಮನೆಯವರು ನೋಡಿ ಕೂಡಲೆ ಆಸ್ಪತ್ರೆಗೆ ಹೋಗುವ ಸೂಚನೆ ನೀಡಿದ್ದರು. ಅಂದೇ ಅವರು ನರ್ಸಿಂಗ್ ಹೋಂಗೆ ಹೋಗಲು ಸಲಹೆ ನೀಡಿದರು.

ನೂರುನ್ನೀಸ್ಸಾಗೆ ಇನ್ನೊಂದು ಸಮಸ್ಯೆ ಕಾಡುತ್ತಿತ್ತು. ಅದೂ ಅಷ್ಟೆ ಆತಂಕವನ್ನುಂಟು ಮಾಡಿತ್ತು. ಅವಳ ಮಗನಿಗೆ ಶಾಲೆಯವರು ಹಲವು ವರ್ಷಗಳಿಂದ ಮೇಲಿಂದ ಮೇಲೆ ತೊಂದರೆ ಕೊಡುತ್ತಿದ್ದರು. ನೂರುನ್ನಿಸ್ಸಾಳಿಗೆ ಅವರ ಮಗನದೇ ತಪ್ಪಿದೆಯೆಂದೆನಿಸಿತ್ತು. ಮಗನೊಂದಿಗೆ ಕುಳಿತು ಮಾತಾಡಿದಾಗ ಅವನನ್ನು ಶಾಲೆಯವರು ಟಾರ್ಗೆಟ್ ಮಾಡಿದುದಾಗಿ ತಿಳಿದು ಬಂದಿತು. ಅದನ್ನು ಈಗ ದೂರವಿಟ್ಟು ನೀವು ನೆಮ್ಮದಿಯನ್ನು ಪಡೆಯಲು ಪ್ರಯತ್ನಿಸಿ ಎಂದು ನಾನು ಹೇಳಿದ್ದೆ. ಅದರಂತೆಯೇ ನೂರುನ್ನಿಸ್ಸಾಳೂ ಸಹಕರಿಸಿದ್ದಳು.

ನನ್ನ ತೀರ್ಮಾನವನ್ನು ಬದಲಾಯಿಸಿ ಇವರಿಗೆ ಹೃದಯ ರೋಗವಿಲ್ಲ, ಮಾನಸಿಕ ಒತ್ತಡ ಹಾಗೂ ಖಿನ್ನತೆಯಾಗಿದೆಯೆಂದು ತೀರ್ಮಾನಿಸಿ ಚಿಕಿತ್ಸೆ ಬರೆದು ಕೊಟ್ಟು, ಎರಡು ವಾರದ ನಂತರ ಪುನಃ ಬರಲು ಹೇಳಿದೆ. ನಂತರ ಸುಮಾರು 3–4 ಬಾರಿ ಔಷಧಿ ಚಿಕಿತ್ಸೆ ಬಂದು ಆಪ್ತಸಮಾಲೋಚನೆಯಲ್ಲಿ ಪಾಲ್ಗೊಂಡು, ನೂರುನ್ನೀಸ್ಸಾ ಮೂರು ತಿಂಗಳಲ್ಲಿ ಖಿನ್ನತೆಯಿಂದ ಹೊರಬಂದಳು.

ಅವರಿಗೆ ಮೂರು ತಿಂಗಳಿಗೊಮ್ಮೆ ಸುಮಾರು ಎರಡು ವರುಷಗಳು ಬರಲು ಹೇಳಿ, ಮುಂದೆ ಯಾವ ರೀತಿ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು, ಹೇಗೆ ಖಿನ್ನತೆಗೆ ಒಳಗಾಗದಂತೆ ಜಾಗರೂಕರಾಗಿರಬೇಕು ಮುಂತಾದವುಗಳನ್ನು ಹೇಳಿ ಕಳುಹಿಸಿದೆ. ನೂರುನ್ನೀಸಾ ಚಿಕಿತ್ಸೆ ಹಾಗೂ ಆಪ್ತಸಮಾಲೋಚನೆಯಿಂದ ಎರಡು ತಿಂಗಳಲ್ಲಿ ಚೇತರಿಸಿಕೊಂಡಳು. ●

ನೂತನ ಪಿಂಚಣಿ ಯೋಜನೆಯನ್ನು ವಿರೋಧಿಸಿ...... ಪುಟ 8 ರಿಂದ

ಪ್ರತಿನಿಧಿಗಳು ಸ್ಥಳಕ್ಕೆ ಧಾವಿಸದೇ ಇರುವುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ, ಒಂದೆಡೆ ನೌಕರರ ಬೇಡಿಕೆಗಳ ಕುರಿತು ಗಮನ ಹರಿಸಿದ ಸರ್ಕಾರ, ಮತ್ತೊಂದೆಡೆ ನೌಕರರ ಹೋರಾಟ ಮತ್ತು ಒಗ್ಗಟ್ಟನ್ನು ಒಡೆಯುವ ಸಂಘಟನೆಯನ್ನು ಎದುರಿಸಿ ಬೃಹತ್ ಪ್ರಮಾಣದ ಒಗ್ಗಟ್ಟನ್ನು ಪ್ರದರ್ಶಿಸುವ ಮೂಲಕ ನೌಕರರ ಬಲಿಷ್ಠ ಸಂಘಟನೆ ಕಟ್ಟುವುದರ ಮೂಲಕ ಮಾತ್ರವೇ ನೌಕರರಿಗೆ ಪಿಂಚಣಿಯನ್ನು ಖಾತರಿಗೊಳಿಸಲು ಸಾಧ್ಯ.

ಬೇಡಿಕೆಗಳು:

1) 2006ರ ನಂತರ ಸೇವೆಗೆ ಸೇರಿರುವ ಎಲ್ಲಾ ನೌಕರರಿಗೂ ಹಳೆ ಪಿಂಚಣಿ ನೀತಿಯನ್ನೇ ಅನ್ವಯಿಸಬೇಕು,
2) ನೌಕರರ ವೇತನದಿಂದ ಕಟಾವು ಮಾಡುತ್ತಿರುವ ಶೇ.10 ರಷ್ಟು ಹಣವನ್ನು ತಕ್ಷಣವೇ ನಿಲ್ಲಿಸಬೇಕು.
3) ಈಗಾಗಲೇ ಕಟಾವು ಮಾಡಿರುವ ಹಣವನ್ನು ಬಡ್ಡಿ ಸಮೇತ ನೌಕರರಿಗೆ ಹಿಂದಿರುಗಿಸಬೇಕು
4) ನೌಕರರಿಗೆ ನೀಡುವ ಸಾಮಾನ್ಯ ಭವಿಷ್ಯ ನಿಧಿ (ಜಿ.ಪಿ.ಎಫ್) ಸೌಲಭ್ಯವನ್ನು ಹೊಸ ನೌಕರರಿಗೂ ಅನ್ವಯಿಬೇಕು.
5) ನೌಕರರ ಉಳಿತಾಯದ ಹಣವನ್ನು ಖಾಸಗೀ ಕಂಪನಿಗಳ ಬದಲಾಗಿ ಸಾರ್ವಜನಿಕ ಉದ್ಯಮಗಳಲ್ಲಿ ಹೂಡಿಕೆ ಮಾಡಬೇಕು. ●

2019 ರ ವೇಳೆಗೆ ದೇಶದ 77% ಕಾರ್ಮಿಕರಿಗೆ ಕಳಪೆ ಉದ್ಯೋಗಗಳೇ ಗತಿ: ಐಎಲ್‌ಒ

ದೇಶ 69ನೇ ಗಣತಂತ್ರ ದಿನವನ್ನು ಆಚರಿಸುವ ಒಂದು ವಾರದ ಹಿಂದೆ ಎರಡು ಸುದ್ದಿಗಳು ಬಂದವು–ಒಂದು, ಪಕೋಡ ಮಾರಿ 200ರೂ. ಸಂಪಾದಿಸಿದರೆ, ಅದು ಕೂಡ ಉದ್ಯೋಗವೇ ಎಂಬ ಪ್ರಧಾನ ಮಂತ್ರಿಗಳ ಉದ್ಗಾರ. ಎರಡನೆಯದು, ದೇಶದ ರಾಜಧಾನಿಯಲ್ಲಿ ಕಾರ್ಖಾನೆಯೊಂದರಲ್ಲಿ 17 ಕಾರ್ಮಿಕರು ಬೆಂಕಿಗಾಹುತಿಯಾದರು ಎಂಬುದು. ಬವಾನ ಕೈಗಾರಿಕಾ ಪ್ರದೇಶದಲ್ಲಿರುವ ಒಂದು ಕಾರ್ಖಾನೆಯ ಕಾರ್ಮಿಕರಿವರು. 150–200ರೂ. ದಿನಗೂಲಿಗೆ 10 ಗಂಟೆಗಳ ಶಿಫ್ಟ್‌ನಲ್ಲಿ ಕೆಲಸ ಮಾಡುತ್ತಿದ್ದವರು. ಬೇರೆ ಯಾವುದೇ ಸೌಲಭ್ಯಗಳಿಲ್ಲ, ಸಾಮಾಜಿಕ ಭದ್ರತೆಯಂತೂ ಇಲ್ಲವೇ ಇಲ್ಲ. ಸುರಕ್ಷಾ ವ್ಯವಸ್ಥೆಗಳಿಲ್ಲ–ಇವನ್ನೆಲ್ಲ ಒದಗಿಸಬೇಕಾಗಿದ್ದ ಕಾರ್ಮಿಕ ಕಾನೂನುಗಳ ಅನ್ವಯವೇ ಇಲ್ಲ.

ಇಂತಹ ಉದ್ಯೋಗಗಳನ್ನು **'ವಲ್ನರೇಬಲ್ ಎಂಪ್ಲಾಯ್‌ಮೆಂಟ್'** ಎಂದು ಕಾರ್ಮಿಕ ವಿಷಯಗಳ ತಜ್ಞರು ಮತ್ತು ಆರ್ಥಿಕತಜ್ಞರು ಹೆಸರಿಸಿದ್ದಾರೆ– ಶಾಸನಬದ್ದ ಕನಿಷ್ಟ ಕೂಲಿಗಳೂ ಸಿಗದ, ಕಷ್ಟಕರ, ಅಭದ್ರ ಮತ್ತು ಅಸುರಕ್ಷಿತ ದೀರ್ಘಾವಧಿ ಕೆಲಸದ ಪರಿಸ್ಥಿತಿಗಳಿರುವ, ಯಾವಾಗ ಬೇಕಾದರೂ ಇಲ್ಲವಾಗಬಹುದಾದ. ಕಾರ್ಮಿಕ ಕಾನೂನುಗಳ ಅನ್ವಯವಿಲ್ಲದ ಉದ್ಯೋಗಗಳನ್ನು ಅವರು ಈ ರೀತಿ ಹೆಸರಿಸುತ್ತಾರೆ. ಒಟ್ಟಿನಲ್ಲಿ ಹೇಗೋ ಬದುಕು ಸಾಗಿಸಬಹುದಾದ ಕಳಪೆ ಉದ್ಯೋಗ.


ನಿಜ, ಅಚ್ಛೇ ದಿನ್‌ವಾಲಾಗಳು ತಮ್ಮ ಇತರ ಹಲವಾರು ಭರವಸೆಗಳಂತೆ, ಈ ಕಳಪೆ ಉದ್ಯೋಗಗಳ ಪ್ರಮಾಣವನ್ನು ಕಡಿಮೆ ಮಾಡುವ ವಚನವನ್ನೇನೂ ಕೊಟ್ಟಿರಲಿಲ್ಲ. ಬದಲಿಗೆ, ಅವರ ಅಚ್ಛೇ ದಿನ್ ಧೋರಣೆಗಳು ಇಂತಹ ಕಳಪೆ ಉದ್ಯೋಗಗಳ ಪ್ರಮಾಣವನ್ನು ಹೆಚ್ಚಿಸುವುದೇ ಅಚ್ಛೇ ದಿನ್ ಗಳ ಸಾಧನೆ ಎಂದು ಬಗೆದಂತಿದೆ. ಪ್ರಧಾನಿಗಳ ಉದ್ಗಾರವಂತೂ ಅದನ್ನೇ ಧ್ವನಿಸುತ್ತದೆ ತಾನೇ?

ಇಲ್ಲ ಪ್ರಧಾನಿಗಳೇ, ದಿನಕ್ಕೆ 200ರೂ(ಅದೂ ಪ್ರತಿದಿನವೂ ಸಿಕ್ಕರೆ) ಒಂದು ಘನತೆಯ ಬದುಕನ್ನು ನೀಡಲಾರದು,; ಅದು ಅರೆ–ಉದ್ಯೋಗ, ಸರಿಯಾದ ಉದ್ಯೋಗವನ್ನು ಒದಗಿಸಲು ಸರಕಾರಕ್ಕೆ ಸಾಧ್ಯವಾಗಿಲ್ಲ ಎಂಬುದನ್ನೇ ತೋರಿಸುತ್ತದೆ ಎಂದು ರಾಜ್ಯಸಭಾ ಟಿವಿಯ ಮಾಜಿ ಮುಖ್ಯಾಧಿಕಾರಿ ಗುರುದೀಪ್ ಸಪ್ಪಲ್(ದಿವೈರ್.ಇನ್ ಜನವರಿ 22) ಹೇಳುತ್ತಾರೆ. ಪ್ರಧಾನಿಗಳ ಬಾಯಿಂದ ಇಂತಹ ಮಾತು ನಿಜಕ್ಕೂ ಬೇಸರ ಉಂಟು ಮಾಡುವಂತದ್ದು ಎಂದು ಅವರು ಹೇಳುತ್ತಾರೆ.

ವಿಶ್ವ ಸಂಸ್ಥೆಯ ಅಂಗಸಂಘಟನೆಯಾದ ಐಎಲ್‌ಒ, ಅಂದರೆ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ, ಕಳಪೆ ಉದ್ಯೋಗದ ಮೇಲೆ ಹೇಳಿದ ಪರಿಣಿತರ ನಿರೂಪಣೆಯನ್ನು ಸಂಕುಚಿತಗೊಳಿಸಿದ್ದರೂ, ಅದು ಕೂಡ ಪಕೋಡ ಮಾರಿ 200ರೂ.ಗಳಿಸುವುದನ್ನು ಕಳಪೆ ಉದ್ಯೋಗ ಎಂದೇ ಪರಿಗಣಿಸುತ್ತದೆ. ಅಂದರೆ ಸ್ವ–ಉದ್ಯೋಗಿ ಅಥವ ಕುಟುಂಬದ ಸದಸ್ಯರ ಜತೆಗೂಡಿ ಜೀವನಾಧಾರಕ್ಕೆ ಮಾಡುವ ಕೆಲಸ ಅದರ ನಿರೂಪಣೆಯ ಪ್ರಕಾರ 'ವಲ್ನರೇಬಲ್ ಎಂಪ್ಲಾಯ್‌ಮೆಂಟ್'. ಅಂದರೆ ಶಾಸನಬದ್ದ ಕನಿಷ್ಟ ಕೂಲಿಗಳೂ ಸಿಗದ, ಕಷ್ಟಕರ, ಅಭದ್ರ ಮತ್ತು ಅಸುರಕ್ಷಿತ ದೀರ್ಘಾವಧಿ ಕೆಲಸದ ಪರಿಸ್ಥಿತಿಗಳಿರುವ, ಯಾವಾಗ ಬೇಕಾದರೂ ಇಲ್ಲವಾಗಬಹುದಾದ, ಕಾರ್ಮಿಕ ಕಾನೂನುಗಳ ಅನ್ವಯವಿಲ್ಲದ ಉದ್ಯೋಗ.


ಐಎಲ್‌ಒ ಅಂದಾಜಿನ ಪ್ರಕಾರ ುದ್ಯೋಗಾವಕಾಶಗಳಲ್ಲಿ ಹೆಚ್ಚುವುದು ಇಂತಹ ಕಳಪೆ ಉದ್ಯೋಗಗಳ ಪ್ರಮಾಣ ಮಾತ್ರ. 2019 ರ ವೇಳೆಗೆ, ಅಂದರೆ ಅಚ್ಛೇ ದಿನ್‌ಗಳ ಪರಿಷ್ಕೃತ ಚುನಾವಣಾ ಅವತಾರ ಪ್ರಕಟವಾಗುವ ವೇಳೆಗೆ, ದೇಶದ 77% ಕಾರ್ಮಿಕರ ಪಾಲಿಗೆ ಜೀವನಾಧಾರಕ್ಕೆ ಇಂತಹ ಕಳಪೆ ಉದ್ಯೋಗಗಳೇ ಗತಿ. ಹೆಚ್ಚೆಂದರೆ ಅಚ್ಛೇ ದಿನ್‌ಗಳ ಮಂದಿ ಅದಕ್ಕೂ ತಮ್ಮ 'ದಿವ್ಯಾರ್ಥ'ಗಳನ್ನು ಹಚ್ಚಬಹುದು.

ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ಒದಗಿಸುವ ಭರವಸೆಯ ಅಚ್ಛೇ ದಿನ್‌ಗಳಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚುತ್ತಿರುವ ಕೆಲವು ಕಳವಳಕಾರೀ ಅಂಕಿ–ಅಂಶಗಳನ್ನು ನೋಡಿ:



2017ರಲ್ಲಿ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ 1 ಕೋಟಿ 83ಲಕ್ಷ. 2018ರಲ್ಲಿ ಇದು 1 ಕೋಟಿ 86 ಲಕ್ಷವಾಗಲಿದೆ, 2019ರಲ್ಲಿ 1 ಕೋಟಿ 89ಲಕ್ಷ. ಅನುಕ್ರಮವಾಗಿ ಇದು ಜಗತ್ತಿನ ನಿರುದ್ಯೋಗಿಗಳ ಸಂಖ್ಯೆಯ 9.49%, 9.67% ಮತ್ತು 9.76%. ಅಂದರೆ 2017ರಿಂದ ಇನ್ನೆರಡು ವರ್ಷದಲ್ಲಿ ಇದು 9.49%ದಿಂದ 9.76%ಕ್ಕೇರಲಿದೆ.

ಅದರಲ್ಲೂ ಯುವ ನಿರುದ್ಯೋಗಿಗಳ, ಅಂದರೆ 15 ರಿಂದ 24 ವರ್ಷದ ಯುವಜನರ ನಡುವೆ ನಿರುದ್ಯೋಗ ಸುಮಾರು ಮೂರು ಪಟ್ಟು ಹೆಚ್ಚು, ಅದು ಹೆಚ್ಚಿನ ವೇಗದಲ್ಲಿ 10% ದಿಂದ 10.7%ಕ್ಕೆ ಏರಲಿದೆ.






ಅಚ್ಛೇ ದಿನ್‌ಗಳ ಎಕ್ಸ್‌ಕ್ಲೂಸಿವ್ ಇಂಟರ್‌ವ್ಯೂಗಳು

ಪ್ರಧಾನಿಗಳು ಅಚ್ಛೇದಿನ್ ವಚನಗಳ ಬಗ್ಗೆ ಪ್ರಶ್ನೆಗಳಿಂದ ತಪ್ಪಿಸಿಕೊಳ್ಳಲು ಪತ್ತಿಕಾಸಮ್ಮೇಳನಗಳನ್ನೇ ನಡೆಸುತ್ತಿಲ್ಲ ಎಂದು ಕಳೆದ ಮೂರು ವರ್ಷಗಳಲ್ಲಿ ಒಂದೂ ಪತ್ರಿಕಾಸಮ್ಮೇಳನ ಎದುರಿಸದ ಬಗ್ಗೆ ಬಹಳಷ್ಟು ಟೀಕೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ಕಳೆದ ವಾರ ಪ್ರಧಾನಿಗಳ ಎರಡು ಇಂಟರ್‌ವ್ಯೂಗಳು ನಡೆದವು. ಆದರೆ ಇಂಟರ್‌ವ್ಯೂಗಳು ನಡೆದ ರೀತಿ ಇನ್ನಷ್ಟು ಟೀಕೆ–ಟಿಪ್ಪಣಿಗಳಿಗೆ ಒಳಗಾಗಿದೆ. ಇದಕ್ಕೆ ಕಾರಣ ಈ 'ಎಕ್ಸ್‌ಕ್ಲೂಸಿವ್ ಇಂಟರ್‌ವ್ಯೂ' ತಗೊಂಡದ್ದು(ಕೊಟ್ಟದ್ದು?)ಝೀ ನ್ಯೂಸ್ ಮತ್ತು ಟೈಮ್ಸ್ ನೌ. ಇವೆರಡೂ ಆಳುವ ಪಕ್ಷದ ಪ್ರೀತಿಯ ಚಾನೆಲ್‌ಗಳು ಎಂದು ಎಲ್ಲರಿಗೂ ತಿಳಿದ ವಿಷಯವೇ. ತಮ್ಮ ಎದುರಿರುವವರ ಮೇಲೆ ಕಿರಿಚಾಡುವ ಸ್ಪರ್ಧೆ ನಡೆಸಿರುವ ದಾಖಲೆಯ ಈ ಸಂದರ್ಶಕರು ಅತಿ ವಿನಯದಿಂದ ಪ್ರಶ್ನೆಗಳೇ ಅಲ್ಲದ ಪ್ರಶ್ನೆಗಳನ್ನು ಕೇಳಿದ್ದು, ಅದಕ್ಕೆ ಉತ್ತರಗಳೇ ಅಲ್ಲದ ಉತ್ತರಗಳನ್ನು ಪಡೆದದ್ದು ಯಾರಿಗೂ ಆಶ್ಚರ್ಯ ತರಲಿಲ್ಲ ಎನ್ನುತ್ತಾರೆ ಒಬ್ಬ ಹಿರಿಯ ಪತ್ರಕರ್ತರು. ಆದರೆ ರಿಪಬ್ಲಿಕ್ ಟಿವಿಯನ್ನು ಏಕೆ ಆರಿಸಿಕೊಳ್ಳಲಿಲ್ಲ ಎಂದು ತಲೆಕಡಿಸಿಕೊಂಡವರಿಗೆ ಈಗ ಸಂದರ್ಶನ ಮಾಡಿರುವವರು ಇಬ್ಬರೂ ಅವರ ಗರಡಿಯಲ್ಲೆ ಬೆಳೆದವರು ಎಂಬುದರಲ್ಲಿ ಉತ್ತರ ಸಿಕ್ಕಿದೆಯಂತೆ.

ಈ ಇಂಟರ್‌ವ್ಯೂಗಳ ಸರಣಿ ಮುಂದುವರೆಯುತ್ತದೆ, ಇದನ್ನು ಸ್ವತಃ ಆಳುವ ಪಕ್ಷದ ಅಧ್ಯಕ್ಷರೇ ಒಂದು ದೊಡ್ಡ 'ಸಾರ್ವಜನಿಕ ಸಂಪರ್ಕ'ದ ಲೆಕ್ಕಾಚಾರದ ಭಾಗವಾಗಿ ನಿರ್ವಹಿಸುತ್ತಾರೆ ಎನ್ನಲಾಗಿದೆ. ಇದು ಹಲವು ಮಾಧ್ಯಮಗಳಿಗೆ ರೊಟ್ಟಿ ತುಣುಕುಗಳೂ ಆಗಬಹುದು, ಪ್ರಧಾನ ಮಂತ್ರಿ ಕಚೇರಿ ಮುಂದೆ ಮುಖ್ಯಧಾರೆಯ ಮಾಧ್ಯಮಗಳು ಕ್ಯೂ ನಿಲ್ಲಬಹುದು, ಇಂತಹ ಕೃಪಾಕಟಾಕ್ಷ ಖಂಡಿತ ತಮಗೆ ಸಿಗದು ಎಂದು ಖಾತ್ರಿಯಾಗಿರುವ ಇತರರು ಕಾಶ್ಮೀರದ ಬಗ್ಗೆ, ಕೊಚ್ಚಿ ಹಾಕುತ್ತಿರುವ ಬಗ್ಗೆ, ಇತರ ಇಂತಹ ಪ್ರಶ್ನೆಗಳ ಬಗ್ಗೆ ನಿರ್ಭಯವಾಗಿ ಪ್ರಶ್ನೆಗಳನ್ನು ಕೇಳಬಹುದಾದ ಒಂದು ಬಹಿರಂಗ ಮುಕ್ತ ಪತ್ರಿಕಾಸಮ್ಮೇಳನಕ್ಕೆ ಆಗ್ರಹಪಡಿಸುತ್ತಲೇ ಇರಬಹುದು ಎಂದು ಪ್ರಖ್ಯಾತ ಪತ್ರಕರ್ತೆ ಸೀಮಾ ಮುಸ್ತಫಾ ಹೇಳುತ್ತಾರೆ.



"ಭಾರತದ ಪಾಸ್‌ಪೋರ್ಟಿನ ತಾಕತ್ತು ಹೆಚ್ಚಿದೆ"?

ಟೈಮ್ಸ್ ನೌನ ಸಂದರ್ಶಕ ವಿದೇಶ ಪ್ರವಾಸಕ್ಕೆ ಹೋಗಿ ತೆಗಳುವ ಪ್ರತಿಪಕ್ಷದ ಮುಖಂಡರನ್ನು ಗೇಲಿ ಮಾಡುತ್ತ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಪ್ರಧಾನಿಗಳು ಭಾರತದ ಪಾಸ್‌ಪೋರ್ಟ್‌ನ ತಾಕತ್ತು ಈ ಮೂರು ವರ್ಷಗಳಲ್ಲಿ ಹೆಚ್ಚಿದೆ, ಹಿಂದೆಂದೂ ಈ ಶಕ್ತಿ ಯಾರ ಅನುಭವಕ್ಕೂ ಬಂದಿರಲಿಲ್ಲ, ಇದೇ ಸತ್ಯ ಎಂದು ತನ್ನ ಭಾವನೆ ಎಂದರಂತೆ. ಇದು ನಿಜಕ್ಕೂ ಸತ್ಯವೇ?

ಪಾಸ್‌ಪೋರ್ಟಿನ ತಾಕತ್ತನ್ನು ಸೂಚಿಸುವ ಒಂದು ಸೂಚ್ಯಂಕವೂ ಇದೆಯಂತೆ. ಇದನ್ನು ಅಂತರ್ರಾಷ್ಟ್ರೀಯ ವಿಮಾನ ಸಾರಿಗೆ ಸಂಘ(ಐಎಟಿಎ) ಸಹಕಾರದಿಂದ ರಚಿಸಲಾಗುತ್ತಿದೆಯಂತೆ. ಅದರ ಪ್ರಕಾರ 2013 ರಲ್ಲಿ ಭಾರತದ ಶ್ರೇಯಾಂಕ 93 ದೇಶಗಳಲ್ಲಿ 72ನೇಯದಾಗಿತ್ತು. 2014ರಲ್ಲಿ 94 ದೇಶಗಳಲ್ಲಿ 76ಕ್ಕಿಳಿಯಿತು, 2015ರಲ್ಲಿ 106ರಲ್ಲಿ 84, 2016ರಲ್ಲಿ 104ರಲ್ಲಿ 85ಕ್ಕೆ, 2017ರಲ್ಲಿ 86ಕ್ಕೆ ಇಳಿಯಿತು. 2013ರಲ್ಲಿ 52 ದೇಶಗಳಲ್ಲಿ ಭಾರತೀಯರು ವೀಸಾ ಇಲ್ಲದೆ ಪ್ರವೇಶಿಸಬಹುದಾಗಿತ್ತು, 2017ರಲ್ಲಿ ಅದು 49ಕ್ಕೆ ಇಳಿದಿದೆ!

600 ಕೋಟಿ ಮತದಾರರ ಬೆಂಬಲ!

ಇದನ್ನೂ ಮೀರಿಸಿದ ಈ ವಾರದ ಮಹಾ ಉದ್ಗಾರ ನೋಡಿ!

"2014ರಲ್ಲಿ ಮೂರು ದಶಕಗಳ ನಂತರ ಮೊದಲ ಬಾರಿಗೆ 600 ಕೋಟಿ ಭಾರತೀಯ ಮತದಾರರು ಕೇಂದ್ರದಲ್ಲಿ ಒಂದು ರಾಜಕೀಯ ಪಕ್ಷಕ್ಕೆ ಸರಕಾರ ರಚಿಸಲು ಸಂಪೂರ್ಣ ಬಹುಮತ ನೀಡಿದರು" ಇದು ಪ್ರಧಾನಿಗಳು ದಾವೊಸ್‌ನಲ್ಲಿ ನೆರೆದಿದ್ದ ಜಗತ್ತಿನ ಸೂಪರ್ ಶ್ರೀಮಂತರನ್ನು ಉದ್ದೇಶಿಸಿ ಹೇಳಿದ ಮಾತುಗಳು. ಪ್ರಧಾನ ಮಂತ್ರಿಗಳ ಕಚೇರಿಯ ಮತ್ತು ಬಿಜೆಪಿಯ ಟ್ವಿಟರ್‌ಗಳು ಇದನ್ನು ಯಥಾವತ್ ಹಾಕಿದವು, ಕೆಲವೇ ಸಮಯದಲ್ಲಿ ತೆಗೆದು ಬಿಟ್ಟವು!

'ಏಳಿಗೆ ಕಾಣು'ತ್ತಿರುವವರ ಪ್ರಮಾಣ 14% ದಿಂದ 3%ಕ್ಕೆ ಇಳಿಕೆ
10% ಶ್ರೀಮಂತರ ಪಾಲು 58% ದಿಂದ 73% ಕ್ಕೆ ಏರಿಕೆ

ಅಮೆರಿಕಾದ ಒಂದು ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಸಂಸ್ಥೆ ಗ್ಯಾಲಪ್ ಮಾಡಿದ ಸರ್ವೆಯ ಪ್ರಕಾರ ಭಾರತದಲ್ಲಿ ತಮ್ಮ 'ಏಳಿಗೆ' ಆಗುತ್ತಿದೆ ಎಂದು ಭಾವಿಸಿರುವವರ ಪ್ರಮಾಣ 'ಅಚ್ಛೇದಿನ್' ಆರಂಭದಲ್ಲಿ ಅಂದರೆ 2014ರಲ್ಲಿ 14% ಇತ್ತು, ಅದೀಗ 2017ರಲ್ಲಿ 3%ಕ್ಕೆ ಇಳಿದಿದೆಯಂತೆ. ವಾಸ್ತವವಾಗಿ ಇದು ಜಾಗತಿಕ ಆರ್ಥಿಕ ಬಿಕ್ಕಟ್ಟು ಸಂಭವಿಸುವ ಮೊದಲು 2008ರಲ್ಲಿ 19%ಕ್ಕೇರಿತ್ತು. ನಂತರ ಸತತವಾಗಿ ಇಳಿಯುತ್ತ ಬಂದಿದೆ. ಆದರೆ ಕಳೆದ ಮೂರು ವರ್ಷಗಳಲ್ಲಿ ತೀವ್ರ ಇಳಿಕೆ ಕಂಡಿದೆ. 2014ರಲ್ಲಿ 14% ಇದ್ದದ್ದು 2015ರಲ್ಲಿ 8%ಕ್ಕೆ, 2016ರಲ್ಲಿ 5% ಕ್ಕೆ ಮತ್ತು 2017ರಲ್ಲಿ 3%ಕ್ಕೆ ಇಳಿದಿದೆಯಂತೆ.

ಇದರೊಂದಿಗೇ ಜಗತ್ತಿನಲ್ಲಿ ಅಸಮಾನತೆಯ ಲೆಕ್ಕ ಹಾಕುವ ಒಕ್ಸ್‌ಫಾಮ್ ಸಂಸ್ಥೆಯ ಈ ವರ್ಷದ ವರದಿ ದಾವೊಸ್‌ನಲ್ಲಿ 'ವಿಶ್ವ ಆರ್ಥಿಕ ವೇದಿಕೆ'(ಡಬ್ಲ್ಯುಇಎಫ್) ಹಸರಲ್ಲಿ ನಡೆಯುವ ಜಗತ್ತಿನ ಅತಿ ಶ್ರೀಮಂತರ ವಾರ್ಷಿಕ ಮೇಳ ಆರಂಭವಾಗುವ ಮುನ್ನಾದಿನ ಪ್ರಕಟವಾಗಿದೆ. ಅದರ ಪ್ರಕಾರ ಭಾರತದಲ್ಲಿ 2017ರ ಆದಾಯಗಳಲ್ಲಿ 73% ಕೇವಲ 1% ಅತಿಶ್ರೀಮಂತರ ಪಾಲಾಗಿದೆ. 2014ರಲ್ಲಿ ಇವರು ಬಾಚಿಕೊಂಡಿದ್ದದ್ದು 22%.

2014ರಲ್ಲಿ 10% ಶ್ರೀಮಂತ ಭಾರತೀಯರು ಒಟ್ಟು ರಾಷ್ಟ್ರೀಯ ಸಂಪತ್ತಿನ 56% ಹೊಂದಿದ್ದರು. ಕಳೆದ ವರ್ಷದ ವರದಿಯ ಪ್ರಕಾರ ಇದು 58% ಆಯಿತು. 2017ರಲ್ಲಿ ಇದು 73%! ಬಿಲಿಯಾಧಿಪತಿಗಳ ಸಂಖ್ಯೆ ಇನ್ನೂ 17 ಸೇರಿ 101 ಆಗಿದೆ.

ಬಿಲಿಯಾಧಿಪತಿಗಳ ಸಂಖ್ಯೆಯಲ್ಲಿ ಏರಿಕೆ ದೇಶದ ಆರ್ಥಿಕ ಏಳಿಗೆಯನ್ನು ತೋರಿಸುತ್ತಿಲ್ಲ, ವಿಫಲತೆಯನ್ನು ತೋರಿಸುತ್ತಿದೆ; ಹೆಚ್ಚು ಉದ್ಯೋಗಾವಕಾಶಗಳನ್ನು ನಿರ್ಮಿಸುವ ವಲಯಗಳತ್ತ ಗಮನ ಕೊಡಿ, ಕೃಷಿಯಲ್ಲಿ ಹೂಡಿಕೆ ಮಾಡಿ, ಸಾಮಾಜಿಕ ಭದ್ರತೆಯ ಕ್ರಮಗಳನ್ನು ಸರಿಯಾಗಿ ಜಾರಿ ಮಾಡಿ ಎಂದು ಕಿವಿಮಾತು ಹೇಳಿರುವ ಒಕ್ಸ್‌ಫಾಮ್‌ನ ಅಸಮಾನತೆಯ ವರದಿಯ ಬಗ್ಗೆ ಸ್ವಲ್ಪವೂ ತಲೆ ಕೆಡಿಸಿಕೊಳ್ಳದ ಅಚ್ಛೇದಿನ್ ರೂವಾರಿ ದಾವೊಸ್‌ನಲ್ಲಿ ನೆರೆದಿದ್ದ ಸೂಪರ್ ಶ್ರೀಮಂತರನ್ನು ಉದ್ದೇಶಿಸಿ ಮಾತನಾಡುತ್ತ ತಮ್ಮ ಸರಕಾರ 'ಕೆಂಪು ಪಟ್ಟಿ'ಯ ಬದಲು ಹಾರ್ದಿಕ ಸ್ವಾಗತದ ಕೆಂಪುಗಂಬಳಿ ಹಾಸಿದೆ, ಬನ್ನಿ, ನಿಮ್ಮ ಹೂಡಿಕೆಗಳನ್ನು ತನ್ನಿ ಎಂದು ಹೇಳಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದಾರೆ. ಆಳುವ ಪಕ್ಷದ ಅಧ್ಯಕ್ಷರೂ ಸೇರಿದಂತೆ ಅವರ ಭಕ್ತರುಗಳು ಅವರ 'ಅದ್ಭುತ ರಾಷ್ಟ್ರಭಾಷೆ'ಯ ಭಾಷಣದಿಂದ ಪುಳಕಿತರಾಗಿದ್ದಾರೆ.

"ಯಾರೂ, ನಮ್ಮ ಪೂರ್ವಜರೂ, ಲಿಖಿತವಾಗಿಯಾಗಲೀ ಅಥವ ಮೌಖಿಕವಾಗಿಯಾಗಲೀ ತಾವು ಮಂಗ ಮಾನವನಾದದ್ದನ್ನು ಕಂಡಿದ್ದೇವೆ ಎಂದು ಹೇಳಿಲ್ಲ. ಡಾರ್ವಿನ್ ಸಿದ್ಧಾಂತ ವೈಜ್ಞಾನಿಕವಾಗಿ ತಪ್ಪು. ಶಾಲಾ ಕಾಲೇಜ್ ಪಠ್ಯಗಳಲ್ಲಿ ಅದನ್ನು ಬದಲಿಸಬೇಕಾಗಿದೆ" ಎಂದು ಮಾನ್ಯ ಮಾನವ ಸಂಪನ್ಮೂಲ ಅಭಿವೃದ್ಧಿ ರಾಜ್ಯಮಂತ್ರಿಗಳು ಹೇಳಿರುವುದಾಗಿ ವರದಿಯಾಗಿದೆ. ಈತ ರಸಾಯನಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದಿರುವ ಐಪಿಎಸ್ ಅಧಿಕಾರಿಗಳಾಗಿದ್ದವರು. – ಸುದ್ದಿ



ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಶ್ರೇಯಾಂಕಗಳ (ರ್‍ಯಾಂಕಿಂಗ್) ದಬ್ಬಾಳಿಕೆ



ಅರ್ಥಶಾಸ್ತ್ರದಲ್ಲಿ ಮತ್ತು ಅಂಕಿಅಂಶ ಶಾಸ್ತ್ರದಲ್ಲಿ ಸೂಚ್ಯಂಕಗಳನ್ನು ರೂಪಿಸುವುದು ಒಂದು ಬಗೆಯ ಜಾಣತಂತ್ರವಾಗಿದೆ. ಸೂಚ್ಯಂಕಗಳ ಶಕ್ತಿಯೇನೆಂದರೆ ಒಂದು ಸಂಕೀರ್ಣ ವಿದ್ಯಮಾನವನ್ನು ಅದು ತುಲನಾತ್ಮಕವಾಗಿ ಹೋಲಿಸಬಹುದಾದ ಸಂಖ್ಯೆಗಳಾಗಿ ಸರಳೀಕರಿಸುತ್ತದೆ. ಆದರೆ ಈ ಸರಳತೆ ಅದರ್ನ ಶಕ್ತಿಶಾಲಿಯಾಗಿರುವಂತೆ, ಅಪಾಯಕಾರಿಯೂ ಆಗುತ್ತದೆ. ಇದರ ಆಧಾರದಲ್ಲಿ ನೀಡುವ ಶ್ರೇಯಾಂಕಗಳಲ್ಲಿ ಮೇಲ್ಚಲನೆಯನ್ನು ಪಡೆಯಬೇಕೆಂಬ ಉಮೇದಿನಲ್ಲಿ ಸರ್ಕಾರಗಳು ತಮ್ಮ ದೇಶದ ಜನತೆಯ ಆರ್ಥಿಕ ಅಗತ್ಯಗಳನ್ನು ಮರೆತು ಈ ಶ್ರೇಯಾಂಕದ ಸೂಚ್ಯಂಕಗಳನ್ನು ಉತ್ತಮಗೊಳಿಸಿಕೊಳ್ಳುವ ಕಡೆ ಮಾತ್ರ ಗಮನ ನೀಡುತ್ತವೆ. ಈಗ ಹುಟ್ಟಿಕೊಂಡಿರುವ ಹೊಸ ವಿವಾದದಿಂದಾಗಿ ವಿಶ್ವಬ್ಯಾಂಕು ತನ್ನ ಈ ಪದ್ಧತಿಯ ಬಗ್ಗೆ ಮತ್ತೊಮ್ಮೆ ಪುನರಾವಲೋಕನಮಾಡಿ ಇಡಿಬಿ ಸೂಚ್ಯಂಕವನ್ನೇ ಸಾರಾಸಗಟಾಗಿ ಕೈಬಿಡುವಂತಾಗಬೇಕು.

ಕೃಪೆ: ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಇಪಿಡಬ್ಲ್ಯು)
ಸಂಪಾದಕೀಯ, ಜನವರಿ 20, 2018, ಅನುವಾದ: ಶಿವಸುಂದರ್

ವಿಶ್ವಬ್ಯಾಂಕು ಪ್ರಕಟಿಸುವ ಜನಪ್ರಿಯವಾದ ಆದರೆ ಗಟ್ಟಿತರ್ಕವಿಲ್ಲದ “ಸುಲಭವಾಗಿ ಉದ್ಯಮ ಮಾಡಬಲ್ಲ ಸೂಚ್ಯಂಕ” (ಈಸ್ ಆಫ ಡೂಯಿಂಗ್ ಬಿಸಿನೆಸ್ ಇಂಡೆಕ್ಸ್- ಇಡಿಬಿ)ವು ಮತ್ತೊಮ್ಮೆ ತೀವ್ರವಾದ ವಿಮರ್ಶೆಗೆ ಗುರಿಯಾಗಿದೆ. ವಿಶ್ವಬ್ಯಾಂಕಿನ ಮುಖ್ಯ ಅರ್ಥಶಾಸ್ತ್ರಜ್ಞ ಪಾಲ್ ರೋಮೆರ್ ಅವರು ಈ ಇಡಿಬಿ ಸೂಚ್ಯಂಕವನ್ನು ಒಳಗೊಂಡಂತೆ ವಿಶ್ವಬ್ಯಾಂಕು ಹೊರತರುವ “ವ್ಯವಹಾರೋದ್ಯಮ ನಿರ್ವಹಣೆ” (ಡೂಯಿಂಗ್ ಬಿಸಿನೆಸ್)ವರದಿಯ ಬಗ್ಗೆ ತೀವ್ರವಾದ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಅವರು ವಿಶೇಷವಾಗಿ ಈ ಸೂಚ್ಯಂಕದಲ್ಲಿ ಚಿಲಿಯ ಸ್ಥಾನಮಾನ ಕುಸಿದಿರುವ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ.

ಇದಕ್ಕೆ ಒಂದಷ್ಟು ಕಾರಣ ಕಳೆದ ಕೆಲವು ವರ್ಷಗಳಲ್ಲಿ ಈ ಸೂಚ್ಯಂಕವನ್ನು ತಯಾರು ಮಾಡುವ ವಿಧಾನದಲ್ಲಿ ಬಂದಿರುವ ಬದಲಾವಣೆಗಳು. 2006ರಿಂದ ಈ ಸೂಚ್ಯಂಕದಲ್ಲಿ ಚಿಲಿಯ ಸ್ಥಾನವು 25–57ರ ನಡುವೆ ಹೊಯ್ದಾಡುತ್ತಿದೆ. ಚಿಲಿಯ ಸಮಾಜವಾದಿ ಪಕ್ಷದ ಮಿಚೆಲ್ ಬ್ಯಾಷೆಲಿಯ ಅಧಿಕಾರವಿದ್ದಾಗ ಸೂಚ್ಯಂಕವು ಕುಸಿದಿದ್ದು, ಸಾಂಪ್ರದಾಯಿಕ ಪಕ್ಷದ ಸೆಬಾಸ್ಟಿನ್ ಪಿನೇರಾದ ಆಡಳಿತದಲ್ಲಿ ಸೂಚ್ಯಂಕವು ಸುಧಾರಣೆಯನ್ನು ತೋರಿಸಿದೆ. ರೋಮೆರ್ ನಿರೀಕ್ಷಿತವಾದದ್ದನ್ನೇ ಪ್ರತಿಪಾದಿಸಿದ್ದಾರೆ: ಒಂದು ಸೂಚ್ಯಂಕದ ಲೆಕ್ಕಾಚಾರವನ್ನು ಮಾಡುವ ಅಂಶಗಳು ಬದಲಾದರೆ ಅಂದರೆ ಗಣನೆ ಮಾಡುವ ವಿಧಾನವು ಬದಲಾದರೆ ಅಂಥಾ ಶ್ರೇಯಾಂಕವನ್ನು ಹಳೆಯ ಪದ್ಧತಿಯನ್ನು ಆಧರಿಸಿರುವ ಹಿಂದಿನ ವರ್ಷಗಳ ಶ್ರೇಯಾಂಕಗಳ ಜೊತೆ ಹೋಲಿಸಲು ಸಾಧ್ಯವಿಲ್ಲ. ಆದ್ದರಿಂದ ವಿಶ್ವಬ್ಯಾಂಕು ಒಂದು ನಿರ್ದಿಷ್ಟ ಪದ್ಧತಿಯನ್ನೇ ಅನುಸರಿಸಿ ಕಳೆದ ನಾಲ್ಕು ವರ್ಷಗಳ ಸೂಚ್ಯಂಕಗಳನ್ನು ತಯಾರಿಸಿ ಆಯಾ ದೇಶಗಳ ನಾಲ್ಕು ವರ್ಷಗಳ ಶ್ರೇಯಾಂಕಗಳನ್ನು ಬಿಡುಗಡೆ ಮಾಡಲಿದೆ ಎಂದು ಘೋಷಿಸಿದ್ದಾರೆ. ರೋಮರ್ ಅವರು ವ್ಯಕ್ತಪಡಿಸಿರುವ ಈ ಅನುಮಾನವು ಸ್ವಾಗತಾರ್ಹವಾದುದಾಗಿದೆ. ಆದರೂ ವಿಶ್ವಬ್ಯಾಂಕ್ ಹೊರತರುವ ಈ ವರದಿಯ ಬಗ್ಗೆ ಮತ್ತು ಅದರಲ್ಲೂ ನಿರ್ದಿಷ್ಟವಾಗಿ ಇಡಿಬಿ ಸೂಚ್ಯಂಕದ ಲೆಕ್ಕಾಚಾರದಲ್ಲಿ ಗಂಭೀರವಾದ ಸಮಸ್ಯೆಗಳಿರುವ ಬಗ್ಗೆ ಈಗಾಗಲೇ ಸಾಕಷ್ಟು ಸಂಶೋಧನೆಗಳು ನಡೆದಿವೆ.


ಈ “ವ್ಯವಹಾರೋದ್ಯಮ ನಿರ್ವಹಣೆ” (ಡೂಯಿಂಗ್ ಬಿಸಿನೆಸ್) ವರದಿಯನ್ನು ವಿಶ್ವಬ್ಯಾಂಕು ಮೊಟ್ಟಮೊದಲು ಪ್ರಕಟಿಸಿದ್ದು 2003ರಲ್ಲಿ. ಒಂದು ದೇಶದಲ್ಲಿ ಉದ್ಯಮ ನಡೆಸಲು ಸೂಕ್ತವಾದ ಸನ್ನಿವೇಶವಿದೆಯೇ ಎಂಬುದನ್ನು ಅಳೆಯಲು ಅದು ಆಯಾ ದೇಶಗಳ ಉದ್ಯಮಗಳ ಬಗೆಗಿನ ಕಾನೂನುಗಳು ಮತ್ತು ಇತರ ಪ್ರಕ್ರಿಯೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುತ್ತದೆ. ಒಂದು ದೇಶದಲ್ಲಿನ ಅತಿದೊಡ್ಡ ಅಥವಾ ಎರಡನೇ ಅತಿದೊಡ್ಡ ಉದ್ಯಮ ನಗರಿಯಲ್ಲಿ ಒಂದು ಮಧ್ಯಮ ಗಾತ್ರದ ಉದ್ಯಮವೊಂದಕ್ಕೆ ಅನ್ವಯವಾಗುವ ನೀತಿ ನಿಯಮಗಳನ್ನು ವರದಿಯು ಗಣನೆಗೆ ತೆಗೆದುಕೊಳ್ಳುತ್ತದೆ.

ಅದು ಸಂಘಟಿತ ಕ್ಷೇತ್ರದ ಬಗ್ಗೆ ಘೋಷಿತವಾದ ನೀತಿಗಳನ್ನು ಅಭ್ಯಸಿಸುತ್ತದೆಯೇ ವಿನಃ ದೇಶ-ದೇಶಗಳ ನಡುವೆ ಇರುವ ಭಿನ್ನತೆಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಆ ನೀತಿಗಳ ಅನುಷ್ಠಾನದ ಪರಿಯನ್ನೂ ಅಥವಾ ಉದ್ಯಮಗಳ ದೈನಂದಿನ ರೂಢಿಪದ್ಧತಿಯನ್ನು ಪರಿಗಣಿಸುವುದಿಲ್ಲ. ಈ ಎಲ್ಲಾ ಸೂಚ್ಯಂಕಗಳನ್ನು ಒಟ್ಟುಮಾಡಿ ಪ್ರತಿದೇಶಕ್ಕೆ ಸುಲಭವಾಗಿ ವ್ಯವಹಾರೋದ್ಯಮ ನಡೆಸಬಲ್ಲ ಇಡಿಬಿ-ಶ್ರೇಯಾಂಕಗಳನ್ನು ಕೊಡುವುದನ್ನು ವಿಶ್ವಬ್ಯಾಂಕು 2006ರಿಂದ ಪ್ರಾರಂಭಿಸಿತು. ತಾನು ವಿವಿಧ ದೇಶಗಳಿಗೆ ಕೊಡುತ್ತಿದ್ದ ಶರತ್ತಿನ ಸಾಲ ಸಹಕಾರಕ್ಕೂ ವಿಶ್ವಬ್ಯಾಂಕು ಈ ಶ್ರೇಯಾಂಕಗಳನ್ನೇ ಆಧರಿಸಲು ಪ್ರಾರಂಭಿಸಿತು. ಆದರೆ ಇದರ ಬಗ್ಗೆ ತೀವ್ರವಾದ ವಿಮರ್ಶೆಗಳು ಪ್ರಾರಂಭವಾದ ಮೇಲೆ 2009ರಿಂದ ಆ ಪದ್ಧತಿಯನ್ನು ನಿಲ್ಲಿಸಿತು. ವಾಸ್ತವವಾಗಿ 2013ರಲ್ಲಿ ವಿಶ್ವಬ್ಯಾಂಕಿನ ಆಗಿನ ಅಧ್ಯಕ್ಷರಾದ ಜಿಮ್ ಯಾಂಗ್ ಕಿಮ್ ಅವರು ಈ ವ್ಯವಹಾರ ನಿರ್ವಹಣಾ ವರದಿಯ ಕ್ಷಮತೆಯ ಬಗ್ಗೆ ಅಧ್ಯಯನ ಮಾಡಲು ಒಂದು ಸ್ವತಂತ್ರ ಸಮಿತಿಯನ್ನು ನೇಮಿಸಿದರು ಮತ್ತು ಇನ್ನುಮುಂದೆ ಆ ‘ಡೂಯಿಂಗ್ ಬಿಸಿನೆಸ್’ ವರದಿಯನ್ನು ಪ್ರಕಟಿಸಬಾರದೆಂದೂ ಹೇಳಿದ್ದರು. ಈ ಬಗೆಯ ಸೂಚ್ಯಂಕಗಳು ದೇಶಗಳ ನಡುವಿನ ಪರಿಸ್ಥಿಗಳನ್ನು ತುಲನಾತ್ಮಕವಾಗಿ ಅಧ್ಯಯನ ನಡೆಸಲು ಸಹಕಾರಿಯಾಗಬಲ್ಲದೇ ವಿನಃ, ಆ ಎಲ್ಲಾ ಸೂಚ್ಯಂಕಗಳನ್ನು ಒಟ್ಟುರಾಶಿಮಾಡಿ ಯಾವುದೇ ಶ್ರೇಯಾಂಕ ಕೊಡುವುದು ಸರಿಯಾದುದಲ್ಲ ಎಂದು ಆ ಸ್ವತಂತ್ರ ವರದಿಯು ಸ್ಪಷ್ಟವಾಗಿ ಹೇಳಿತ್ತು. ಆದರೂ ಶ್ರೇಯಾಂಕಗಳನ್ನು ಕೊಡುವ ಪದ್ಧತಿ ಮುಂದುವರೆಯಿತು.

ಅರ್ಥಶಾಸ್ತ್ರದಲ್ಲಿ ಮತ್ತು ಅಂಕಿಅಂಶ ಶಾಸ್ತ್ರದಲ್ಲಿ ಸೂಚ್ಯಂಕಗಳನ್ನು ರೂಪಿಸುವುದು ಒಂದು ಬಗೆಯ ಜಾಣತಂತ್ರವಾಗಿದೆ. ವಿಭಿನ್ನ ಬಗೆಯ ಗುಣಾಂಶಗಳುಳ್ಳ ವಿದ್ಯಮಾನದ ಬಗ್ಗೆ ಒಟ್ಟಂದದ ಚಿತ್ರಣವನ್ನು ಈ ಶ್ರೇಯಾಂಕಗಳು ನೀಡುತ್ತವೆ. ಪ್ರತಿಯೊಂದು ಗುಣಾಂಶದ ಆಯಾಮ ಮತ್ತು ತೂಕಗಳ ಬಗ್ಗೆ ಭಿನ್ನಭಿನ್ನ ಅಂದಾಜುಗಳು ಸಾಧ್ಯವಿರುವುದರಿಂದ ಎರಡು ಅಂಶಗಳ ಹೋಲಿಕೆಯಲ್ಲಿ ವಸ್ತುನಿಷ್ಟತೆ ಕಷ್ಟವಾಗುತ್ತದೆ. ಹಾಗೆಂದ ಮಾತ್ರಕ್ಕೆ ಎರಡು ಭಿನ್ನ ಅಂಶಗಳನ್ನು ಹೋಲಿಸುವ ಉತ್ತಮ ಹಾದಿಯಿಲ್ಲವೆಂದಲ್ಲ. ಆದರೂ ವ್ಯಕ್ತಿಯ ಮನೋನಿಷ್ಟ ಧೋರಣೆಗಳು ಪರಿಣಾಮಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಹೆಚ್ಚಿರುತ್ತದೆ. ಅದೇನೇ ಇದ್ದರೂ ಸೂಚ್ಯಂಕಗಳ ಶಕ್ತಿಯೇನೆಂದರೆ ಒಂದು ಸಂಕೀರ್ಣ ವಿದ್ಯಮಾನವನ್ನು ಅದು ತುಲನಾತ್ಮಕವಾಗಿ ಹೋಲಿಸಬಹುದಾದ ಸಂಖ್ಯೆಗಳಾಗಿ ಸರಳೀಕರಿಸುತ್ತದೆ.

ಇದರ ಈ ಸರಳತೆಯೇ ಅದನ್ನು ಜನಪ್ರಿಯಗೊಳಿಸಿದೆ ಮತ್ತು ಶಕ್ತಿಶಾಲಿಯಾಗಿಸಿದೆ. ಆದರೆ ಅದೇ ವೇಳೆಯಲ್ಲಿ ಅಪಾಯಕಾರಿಯೂ ಆಗಿದೆ ಮತ್ತು ಹಲವೊಮ್ಮೆ ನೀತಿನಿರ್ಣಯಗಳನ್ನು ಕೈಗೊಳ್ಳುವ ಸಮಯದಲ್ಲಿ ತಪ್ಪಾದ ಉಪಕರಣವಾಗಿಯೂ ಬಳಸಲ್ಪಡುತ್ತಿದೆ. ಇದರರ್ಥ ಸಂಬಂಧಪಟ್ಟವರೆಲ್ಲಾ ಈ ಶ್ರೇಯಾಂಕಗಳನ್ನು ನಂಬುತ್ತಾರೆಂದೇನೂ ಅಲ್ಲ. ಆದರೂ ಇದನ್ನು ಎಷ್ಟು ವಿಸ್ತೃತವಾಗಿ ಪ್ರಚಾರ ಮಾಡಲಾಗುತ್ತದೆಯೆಂದರೆ ಅದನ್ನು ಉಪೇಕ್ಷೆ ಮಾಡಲು ಸಾಧ್ಯವೇ ಆಗುವುದಿಲ್ಲ. ಶ್ರೇಯಾಂಕಗಳಲ್ಲಿ ಆಗುವ ಅರ್ಥರಹಿತ ಬದಲಾವಣೆಗಳು ಎಷ್ಟು ಪ್ರಚಾರವನ್ನು ಪಡೆದುಕೊಳ್ಳುತ್ತವೋ ಅಷ್ಟು ಪ್ರಚಾರವನ್ನು ಶ್ರೇಯಾಂಕಗಳನ್ನು ನಿರ್ಧರಿಸುವ ಪದ್ಧತಿಯ ಬಗ್ಗೆ ನಡೆಯುವ ಚರ್ಚೆಗಳು ಪಡೆದುಕೊಳ್ಳುವುದಿಲ್ಲ.

ಈ ಶ್ರೇಯಾಂಕಗಳಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಳ್ಳಲು ಸರ್ಕಾರಗಳು ತಮ್ಮನೀತಿಗಳಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು ಇವೆಲ್ಲಕ್ಕಿಂತ ಆತಂಕಕಾರಿ ಸಂಗತಿಯಾಗಿದೆ. ಭಾರತ ಸರ್ಕಾರವು ತನ್ನ 2017-18ರ ಕೈಗಾರಿಕಾ ನೀತಿ ಮತ್ತು ಪ್ರಚಾರದ ದಸ್ತಾವೇಜಿನಲ್ಲಿ ತನ್ನ ಮುಖ್ಯ ಗುರಿಯು ಇಡಿಬಿ ಸೂಚ್ಯಂಕದಲ್ಲಿ 2017-18ರಲ್ಲಿ 90ನೇ ಸ್ಥಾನವನ್ನು ಮತ್ತು 2020ರ ವೇಳೆಗೆ 30ನೇ ಸ್ಥಾನವನ್ನೂ ಪಡೆಯುವುದಾಗಿದೆ ಎಂದು ಘೋಷಿಸಿಕೊಂಡಿದೆ. ಈ ಶ್ರೇಯಾಂಕದಲ್ಲಿ ಕಳೆದ ವರ್ಷ ಭಾರತದ ಸ್ಥಾನ 130 ಇತ್ತು. ಈಗಾಗಲೇ ವರದಿಯಾಗಿರುವಂತೆ ಈ ವರ್ಷ ಭಾರತ 100ನೇ ಸ್ಥಾನಕ್ಕೆ ಬಡ್ತಿಯನ್ನು ಪಡೆದುಕೊಂಡಿದೆ.



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

> ಈ ಶ್ರೇಯಾಂಕಗಳಲ್ಲಿ ಉತ್ತಮ ಸ್ಥಾನವನ್ನು ಪಡೆದುಕೊಳ್ಳಲು ಸರ್ಕಾರಗಳು ತಮ್ಮನೀತಿಗಳಲ್ಲಿ ತಿದ್ದುಪಡಿ ಮಾಡಿಕೊಳ್ಳುವುದು ಎಲ್ಲಕ್ಕಿಂತ ಆತಂಕಕಾರಿ ಸಂಗತಿಯಾಗಿದೆ. ಈ ವರ್ಷ ಶ್ರೇಯಾಂಕದಲ್ಲಿ 130ರಿಂದ 100ಕ್ಕೆ ಬಡ್ತಿ ಪಡೆದಿರುವ ಭಾರತದ ಸರ್ಕಾರವು ತನ್ನ 2017-18ರ ಕೈಗಾರಿಕಾ ನೀತಿ ಮತ್ತು ಪ್ರಚಾರದ ದಸ್ತಾವೇಜಿನಲ್ಲಿ ತನ್ನ ಮುಖ್ಯ ಗುರಿಯು ಇಡಿಬಿ ಸೂಚ್ಯಂಕದಲ್ಲಿ 2017-18ರಲ್ಲಿ 90ನೇ ಸ್ಥಾನವನ್ನು ಮತ್ತು 2020ರ ವೇಳೆಗೆ 30ನೇ ಸ್ಥಾನವನ್ನೂ ಪಡೆಯುವುದಾಗಿದೆ ಎಂದು ಘೋಷಿಸಿಕೊಂಡಿದೆ.

ಈಗ ಉದಾಹರಣೆಗೆ “ಉದ್ಯಮ ವ್ಯವಹಾರ ನಿರ್ವಹಣೆ” ವರದಿಯಲ್ಲಿ ಉದ್ಯಮಿಗಳು ಸಾಲವನ್ನು ಸಲೀಸಾಗಿ ಪಡೆದುಕೊಳ್ಳುವ ಸೂಚ್ಯಂಕದಲ್ಲಿ ಭಾರತದ ಸ್ಥಾನ 29ನೆಯದು. ಈ ಸೂಚ್ಯಂಕವು ಭಾರತದಲ್ಲಿ ಉದ್ಯಮಗಳಿಗೆ ಸುಲಭವಾಗಿ ಸಾಲ ದೊರೆಯುತ್ತದೆಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಆದರೆ ವ್ಯವಹಾರೋದ್ಯಮಿಗಳ ಸಮೀಕ್ಷೆಯಲ್ಲಿ ಮತ್ತು ಸಂಶೋಧನಾತ್ಮಕ ಅಧ್ಯಯನಗಳಲ್ಲಿ ಇದಕ್ಕೆ ತದ್ವಿರುದ್ಧವಾದ ಸಂಗತಿ ಕಂಡುಬಂದಿದೆ. ವಾಸ್ತವವಾಗಿ ಈ ಸೂಚ್ಯಂಕವು ಸಾಲದ ಲಭ್ಯತೆಯನ್ನು ಮಾಪನ ಮಾಡುವ ಸೂಚ್ಯಂಕವೇ ಅಲ್ಲ. ಅದು “ಸಾಲ ನೀತಿಗಳ ವರದಿಗಾರಿಕಾ ವ್ಯವಸ್ಥೆಗಳ ಮತ್ತು ಸಾಲವನ್ನು ನೀಡುವಲ್ಲಿ ಸಹಪ್ರಮಾಣದ ಮತ್ತು ದಿವಾಳಿತನಕ್ಕೆ ಸಂಬಂಧಪಟ್ಟ ಕಾನೂನುಗಳ” ಮಾಪನವನ್ನಷ್ಟೇ ಮಾಡುತ್ತದೆ. ಈ ವರದಿಯ ಬಗ್ಗೆ ನಡೆದ ಸ್ವತಂತ್ರ ಅಧ್ಯಯನವೂ ಸಹ ಅದು ದಾರಿತಪ್ಪಿಸುವಂಥ ಶೀರ್ಷಿಕೆಗಳನ್ನು ಬಳಸುವ ಮೂಲಕ ಆರ್ಥಿಕತೆಗಳ ಬಗ್ಗೆ ಜನರಲ್ಲಿ ತಪ್ಪಾದ ಅಭಿಪ್ರಾಯವನ್ನು ಮೂಡಿಸುತ್ತಿದೆ ಎಂದು ದೂರಿದೆ. ಈ ವರದಿಯಲ್ಲಿ ಬಳಸಲಾಗಿರುವ ಶೀರ್ಷಿಕೆಗಳನ್ನು ನೋಡಿದರೆ ಅವು ಆಯಾ ದೇಶಗಳ ಉದ್ಯಮ ಸಂಬಂಧೀ ವಾತಾವರಣದ ಬಗ್ಗೆ ಸಮಗ್ರ ಚಿತ್ರಣವನ್ನು ಕೊಡುತ್ತದೆಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಆದರೆ ವಾಸ್ತವದಲ್ಲಿ ಅದು ಆಯಾ ದೇಶಗಳ ಅಧಿಕೃತ ನೀತಿನಿಯಮಗಳ ಬಗ್ಗೆಯಷ್ಟೇ ಹೇಳುತ್ತದೆ.

ಈ ಶ್ರೇಯಾಂಕಗಳಲ್ಲಿ ಮೇಲ್ಚಲನೆಯನ್ನು ಪಡೆಯಬೇಕೆಂಬ ಉಮೇದಿನಲ್ಲಿ ಸರ್ಕಾರಗಳು ತಮ್ಮ ದೇಶದ ಜನತೆಯ ಆರ್ಥಿಕ ಅಗತ್ಯಗಳನ್ನು ಮರೆತು ಈ ಶ್ರೇಯಾಂಕದ ಸೂಚ್ಯಂಕಗಳನ್ನು ಉತ್ತಮಗೊಳಿಸಿಕೊಳ್ಳುವ ಕಡೆ ಮಾತ್ರ ಗಮನ ನೀಡುತ್ತವೆ. ಉತ್ತಮ ಶ್ರೇಯಾಂಕವಿದ್ದರೆ ಸುಲಭವಾಗಿ ವಿದೇಶಿ ನೇರ ಹೂಡಿಕೆಗಳು ಹರಿದು ಬರುತ್ತವೆ ಎಂಬ ತಿಳವಳಿಕೆಯೂ ಸಹ ಈ ಬಗೆಯ ಶ್ರೇಯಾಂಕದ ಅಡ್ಡಪರಿಣಾಮವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಯಾವುದೇ ದೇಶದಲ್ಲಿ ಸುಲಭವಾಗಿ ವ್ಯವಹಾರ ಉದ್ಯಮ ನಡೆಸಲು ಜಗತ್ತಿನಾದ್ಯಂತ ಒಂದೇ ನಿರ್ದಿಷ್ಟ ಬಗೆಯ ನೀತಿಯಿರಬೇಕು ಎಂಬ ತಿಳವಳಿಕೆಯು ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ಬಗೆಯ ಅಭಿವೃದ್ಧಿ ಸನ್ನಿವೇಶಗಳಿರುತ್ತವೆ ಎಂಬುದನ್ನು ಕಡೆಗಣಿಸುತ್ತದೆ. ಒಂದು ವೇಳೆ ದೇಶಗಳು ತಮ್ಮ ದೇಶಗಳ ಅಗತ್ಯವನ್ನು, ಅಭಿವೃದ್ಧಿ ಮಾದರಿಯನ್ನೂ ಮರೆತು ಸೂಚ್ಯಂಕಗಳ ಅಗತ್ಯವನ್ನು ಪೂರೈಸಿದರೆ ಉತ್ತಮ ಶ್ರೇಯಾಂಕವು ದೊರೆಯಬಹುದು. ಇದು ಒಂದು ಫೂಟ್‌ಬಾಲ್ ಪಂದ್ಯದಲ್ಲಿ ಜಗತ್ತಿನ ಎಲ್ಲಾ ದೇಶಗಳು ಒಂದೇ ಬಗೆಯ ನಿಯಮವನ್ನು ಪಾಲಿಸಬೇಕು ಎಂದು ಕಡ್ಡಾಯ ಮಾಡಿದಂತಿದೆ. ಈ “ವ್ಯವಹಾರ ಉದ್ಯಮ ನಿರ್ವಹಣೆ” ವರದಿಯು ನೀತಿಗಳು ಒಂದು ದೇಶದ ನೀತಿ ಹೀಗೆ ಇರಬೇಕೆಂದಾಗಲೀ, ಮತ್ತು ಒಟ್ಟಾರೆ ಧೋರಣೆಯನ್ನಾಗಲೀ ಕಡ್ಡಾಯ ಮಾಡುವುದಿಲ್ಲವಾದರೂ ಶ್ರೇಯಾಂಕಗಳು ಮಾತ್ರ ನಿರ್ದಿಷ್ಟವಾಗಿ ಅದನ್ನೇ ಮಾಡುತ್ತವೆ. ಈಗ ಹುಟ್ಟಿಕೊಂಡಿರುವ ಹೊಸ ವಿವಾದದಿಂದಾಗಿ ವಿಶ್ವಬ್ಯಾಂಕು ತನ್ನ ಈ ಪದ್ಧತಿಯ ಬಗ್ಗೆ ಮತ್ತೊಮ್ಮೆ ಪುನರಾವಲೋಕನಮಾಡಿ ಇಡಿಬಿ ಸೂಚ್ಯಂಕವನ್ನೇ ಸಾರಾಸಗಟಾಗಿ ಕೈಬಿಡುವಂತಾಗಬೇಕು. ●

ತ್ರಿಪುರ: ಹಿಂಸಾಕೂಟದ ಸವಾಲನ್ನು ಎದುರಿಸಿ 8ನೇ ಎಡರಂಗ ಸರಕಾರ ರಚನೆಗೆ ಚುನಾವಣಾ ಹೋರಾಟ ಆರಂಭ

ಚುನಾವಣಾ ಆಯೋಗ ತ್ರಿಪುರಾದಲ್ಲಿ ಚುನಾವಣಾ ವೇಳಾಪಟ್ಟಿ ಪ್ರಕಟಿಸುತ್ತಿರುವಂತೆ ಅಲ್ಲಿಯ ಎಡರಂಗ ತನ್ನ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಒಟ್ಟು 60 ಸೀಟುಗಳಲ್ಲಿ ಸಿಪಿಐ(ಎಂ) 57ರಲ್ಲಿ ಮತ್ತು ಸಿಪಿಐ, ಆರ್‌ಎಸ್‌ಪಿ ಮತ್ತು ಫಾರ್ವರ್ಡ್ ಬ್ಲಾಕ್ ತಲಾ ಒಂದೊಂದು ಸೀಟುಗಳಲ್ಲಿ ಸ್ಪರ್ಧಿಸುತ್ತಿವೆ.

ಇವರಲ್ಲಿ 7 ಮಹಿಳಾ ಅಭ್ಯರ್ಥಿಗಳು

ಕಳೆದ ಬಾರಿಗೆ ಹೋಲಿಸಿದರೆ 12 ಹೊಸ ಮುಖಗಳಿವೆ. ಇವರಲ್ಲಿ ಇಬ್ಬರು ಈ ಮೊದಲು ಸ್ಪರ್ಧಿಸಿ ಗೆದ್ದವರು. ಉಳಿದವರು ಮೊದಲ ಬಾರಿಗೆ ಸ್ಪರ್ಧಿಸುವವರು. ಕಳೆದ ಬಾರಿ ಗೆದ್ದಿರುವ ಐದು ಮಂದಿಯನ್ನು ಈ ಬಾರಿ ಕೈಬಿಡಲಾಗಿದೆ.

ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗುತ್ತಿದ್ದಂತೆ ಹೇಗಾದರೂ ತ್ರಿಪುರಾದಲ್ಲಿ ತನ್ನ ಸರಕಾರ ತಂದೇ ತರಬೇಕು ಎಂದು ಹಟ ತೊಟ್ಟಂತಿರುವ ಬಿಜೆಪಿಯ ಸವಾಲನ್ನು ಎದುರಿಸಿ ಸತತ ಎಂಟನೇ ಬಾರಿಗೆ ಎಡರಂಗ ಸರಕಾರವನ್ನು ತರಲೇಬೇಕೆಂಬ ಹುರುಪಿನ ಹೊನಲೂ ಹರಿಯಲಾರಂಭಿಸಿದೆ. ಇದಕ್ಕೆ ಮುಖ್ಯಮಂತ್ರಿ ಮಾಣಿಕ್ ಸರಕಾರ ಅವರೇ ಮುಂಚೂಣಿಯಲ್ಲಿ ನಿಂತು ನೇತೃತ್ವ ನೀಡುತ್ತಿದ್ದಾರೆ. ಹಪಾನಿಯಾದ ದುಕ್ಲಿ ಸಬ್ ಡಿವಿಜನ್‌ನಲ್ಲಿ ನಡೆದ ಒಂದು ಬೃಹತ್ ಸಭೆಯುನ್ನುದ್ದೇಶಿಸಿ ಮಾತನಾಡುವುದರೊಂದಿಗೆ ಚುನಾವಣಾ ಹೋರಾಟ ಆರಂಭವಾಗಿದೆ.

ಕಮಲಸಾಗರ್ ಕ್ಷೇತ್ರದಲ್ಲಿ ಇನ್ನೊಂದು ಭಾರೀ ಸಭೆಯುನ್ನುದ್ದೇಶಿಸಿ ಮಾತಾಡಿ ಸಿಪಿಐ(ಎಂ) **ಪೊಲಿಟ್‌ಬ್ಯುರೊ ಸದಸ್ಯೆ ಸುಭಾಷಿಣಿ ಅಲಿ ಮುಖವಾಡಗಳ ಹಿಂದಿರುವ ನಿಜವಾದ ಮುಖಗಳನ್ನು ಬಯಲಿಗೆಳೆಯಿರಿ, ಪ್ರತಿಭಟನೆಯ ಬಲವಾದ ತಡೆಗೋಡೆಯನ್ನು ಕಟ್ಟಿ, ಎಂಟನೇ ಎಡರಂಗ ಸರಕಾರವನ್ನು ಆರಿಸಿ ಇಡೀ ಭಾರತಕ್ಕೆ ಸಂದೇಶ ನೀಡಿ ಎಂದು ತ್ರಿಪುರಾದ ಮತದಾರರಿಗೆ ಕರೆ ನೀಡಿದರು.**



ಬಿಶಾಲ್‌ಗಡ್ ಕ್ಷೇತ್ರದಲ್ಲಿ ಮಾತಾಡುತ್ತ ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ **ಬೃಂದಾ ಕಾರಟ್ ಎಂಟನೇ ಎಡರಂಗ ಸರಕಾರದ ರಚನೆ ಮತ್ತು ಬಿಜೆಪಿಯ ಸೋಲು ದೇಶಕ್ಕೆ ತ್ರಿಪುರಾದ ಒಂದು ಕೊಡುಗೆಯಾಗಲಿದೆ ಎಂದರು.** ಇದು ಎಂಬತ್ತರ ದಶಕದಲ್ಲಿ ಕಾಂಗ್ರೆಸ್–ಟಿಯುಜೆಎಸ್ ಕೂಟದ ಹಿಂಸಾತ್ಮಕ ಚಟುವಟಿಕೆಗಳು ಬಹಳಷ್ಟು ಬಾಧಿಸಿದ ಕ್ಷೇತ್ರಗಳಲ್ಲಿ ಒಂದು. ಆಗಿನ ಶಾಸಕ ಗೌತಮ್ ದೇಬ್ ರನ್ನು ಆ ಪಡೆಗಳು ಬಲಿ ತೆಗೆದುಕೊಂಡಿದ್ದವು. ಈಗ ಬಿಜೆಪಿ ಇತಿಹಾಸವನ್ನು ಪುನರಾವರ್ತಿಸುವ ಹವಣಿಕೆಯಲ್ಲಿದೆ. ಅದರ ಮುಖಂಡರಿಗೆ, ಎಲ್ಲ ಸಾಮಾಜಿಕ ಸೂಚ್ಯಂಕಗಳಲ್ಲೂ ತ್ರಿಪುರಾದ ಸಾಧನೆಗಳನ್ನು ಸರಿಗಟ್ಟುವ ಒಂದಾದರೂ ರಾಜ್ಯವನ್ನು ತೋರಿಸಿ ಎಂದು ಬೃಂದಾ ಕಾರಟ್ ಸವಾಲು ಹಾಕಿದರು.



ಕಳೆದ ಸಂಚಿಕೆಯಲ್ಲಿ ಈ ಅಂಕಣದಲ್ಲಿ ನೆನಪಿಸಿದಂತೆ ಎಂಭತ್ತರ ದಶಕದಲ್ಲಿ ಆಗಿನ ಕೇಂದ್ರದಲ್ಲಿ ಆಳುವ ಪಕ್ಷ ನಡೆಸಿದ ವ್ಯಾಪಕ ಹಿಂಸಾಚಾರದ ಪುನರಾವರ್ತನೆಗೆ ಈಗಿನ ಕೇಂದ್ರದಲ್ಲಿ ಆಳುತ್ತಿರುವ ನೀತಿಬಾಹಿರ ಪಕ್ಷ ಶತಪಯ್ರಯತ್ನ ನಡೆಸುತ್ತಿರುವ ಸಂದರ್ಭದಲ್ಲಿ ಈ ಚುನಾವಣೆ ನಡೆಯುತ್ತಿದೆ. ಆಗಿನ ಕಾಂಗ್ರೆಸಿನಂತೆ ಈಗ ಬಿಜೆಪಿ ಕೂಡ ದುಷ್ಕೃತ್ಯಗಳಿಗೆ ಹೆಸರಾದ ಇನ್ನೊಂದು ಪ್ರತ್ಯೇಕತಾವಾದಿ, ಉಗ್ರಗಾಮಿ ಸಂಘಟನೆಯೊಡನೆ ನೀತಿಬಾಹಿರ ಮೈತ್ರಿ ಮಾಡಿಕೊಂಡಿದೆ. ಕೇಂದ್ರ ಮಂತ್ರಿಗಳು ಮತ್ತೆ–ಮತ್ತೆ ಇಲ್ಲಿಗೆ ಭೇಟಿ ನಿಡಿ ಎಡರಂಗದ ಬಗ್ಗೆ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಹಣದ ಹೊಳೆ ಹರಿದು ಬರುತ್ತಿದೆ. ಸ್ಥಳೀಯ ಅಧಿಕಾರಶಾಹಿಯ ಮತ್ತು ಭದ್ರತಾಪಡೆಗಳ ದುರ್ಬಳಕೆಯ ಪ್ರಯತ್ನ ಆರಂಭವಾಗಿದೆ. ವಾಸ್ತವವಾಗಿ ಆಗ ಕಾಂಗ್ರೆಸ್ ಲೇಬಲ್‌ನಲ್ಲಿ ಹಿಂಸಾಚಾರ ನಡೆಸಿದವರು ಈಗ ಬಿಜೆಪಿ ಲೇಬಲ್ ಹಚ್ಚಿಕೊಂಡಿದ್ದಾರೆ.



ಬಿಜೆಪಿಯ ಆರು ಶಾಸಕರು ಈ ಹಿಂದೆ ಕಾಂಗ್ರೆಸ್ ಶಾಸಕರಾಗಿದ್ದವರು. 2016ರಲ್ಲಿ ಇವರು ತೃಣಮೂಲ ಕಾಂಗ್ರೆಸಿಗೆ ಪಕ್ಷಾಂತರ ಮಾಡಿದರು, 2017ರಲ್ಲಿ ಬಿಜೆಪಿಗೆ ಪಕ್ಷಾಂತರ ಮಾಡಿದರು. ಈಗಿನ ಈ ಘಟಾನುಘಟಿ ಬಿಜೆಪಿ ಶಾಸಕರ ದಾಖಲೆಗಳನ್ನು ನೋಡಿ:



* ಆಶೀಷ್ ಕುಮಾರ್ ಸಾಹಾ 1984ರಲ್ಲಿ ಅಗರ್ತಲಾ ಯುವ ಕಾಂಗ್ರೆಸ್ ಮುಖ್ಯಸ್ಥರು, 1985–89ರಲ್ಲಿ ತ್ರಿಪುರ ಯುವ ಕಾಂಗ್ರೆಸ್ ಮುಖಂಡರು, 1990–99ರ ವರೆಗೆ ತ್ರಿಪುರಾ ಪದೇಶಕಾಂಗ್ರೆಸ್ ಸಮಿತಿ(ಟಿಪಿಸಿಸಿ) ಸದಸ್ಯರಾಗಿದ್ದವರು.
* ಬಿಶ್ವಬಂಧು ಸೇನ್ 1982ರಲ್ಲಿ ಧರ್ಮನಗರಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರು, 1984ರಲ್ಲಿ ಅಲ್ಲಿಯ ಸಬ್ ಡಿವಿಶನ್ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ, 1988ರಲ್ಲಿ ತ್ರಿಪುರ ಯುವ ಕಾಂಗ್ರೆಸ್ ಉಪಾಧ್ಯಕ್ಷರು ಇತ್ಯಾದಿ.
* ದಿಲೀಪ್ ಸರಕಾರ್ ಯುವ ಕಾಂಗ್ರೆಸ್ ಮುಖಂಡರು, ಟಿಪಿಸಿಸಿ ಸದಸ್ಯರು ಮತ್ತು 1988ರಲ್ಲಿ ಕಾಂಗ್ರೆಸ್ ಶಾಸಕರಾಗಿದ್ದವರು.
* ಸುದೀಪ್ ರಾಯ್ ಬರ್ಮನ್ 1986ರಲ್ಲಿ ಎನ್‌ಎಸ್‌ಯುಐ ನ ರಾಜ್ಯ ಪ್ರಧಾನ ಕಾರ್ಯದರ್ಶಿ, 1993ರಲ್ಲಿ ತ್ರಿಪುರ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಆಗಿನ ಎಡರಂಗ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಎದುರು ಸ್ಪರ್ಧಿಸಿ ಸೋತಿದ್ದರು.
* ದಿಬಚಂದ್ರ ಹ್ರಂಗ್ಖಾವ್ಲ್ 1983 ಮತ್ತು 1988ರಲ್ಲಿ ಟಿಯುಜೆಎಸ್ ಶಾಸಕರು, 2013ರಲ್ಲಿ ಕಾಮಗ್ರೆಸ್ ಶಾಸಕರು. ಈಗ...

ಕಳೆದ ಎರಡು ವರ್ಷಗಳಲ್ಲಿ ನೂರಾರು ಇಂತಹ ಕಾಂಗ್ರೆಸ್ ಮಂದಿ ಬಿಜೆಪಿ ಸೇರಿ ಅದರ ಹಣಬಲಕ್ಕೆ ತೋಳ್ಬಲ ಜೋಡಿಸಿದ್ದಾರೆ. ಭಯೋತ್ಪಾದನೆ ನಡೆಸಲು ಸಜ್ಜಾಗಿದ್ದಾರೆ. ಆದರೆ ಇವು ಯಾವುದರಿಂದಲೂ ಧೃತಿಗೆಡದೆ ಎಡರಂಗ ಕಾರ್ಯಕರ್ತರು ಹುರುಪಿನಿಂದ ಹೋರಾಟದ ಕಣಕ್ಕಿಳಿದಿದ್ದಾರೆ.

ಉತ್ತರ ಪ್ರದೇಶ: ಸಾಲ ತೀರಿಸಲಾಗದ ರೈತನ ಕೊಲೆ ಮತ್ತು......



ಇದು ಉತ್ತರಪ್ರದೇಶದ ಮುಖ್ಯ ಮಂತ್ರಿಗಳು ಮತ್ತು ಕಾನೂನು ವ್ಯವಸ್ಥೆಯ ಬಗ್ಗೆ ವ್ಯಂಗ್ಯಚಿತ್ರಕಾರರೊಬ್ಬರ ವ್ಯಂಗ್ಯ.

10 ತಿಂಗಳಲ್ಲಿ 923 ಎನ್‌ಕೌಂಟರ್‌ಗಳು, 33 ಸಾವುಗಳು. ಆದರೆ ಹೊಣೆ ನಿರ್ವಹಿಸ ಬೇಕಾದವರು ತಮ್ಮ ಪೀಠದಲ್ಲಿಲ್ಲ, ಚುನಾವಣೆ ನಡೆಯುವ ರಾಜ್ಯಗಳಲ್ಲಿ ಮೊಕ್ಕಾಂ ಹೂಡಿದ್ದಾರೆ. ಇದು ಅಕ್ಷರಶಃ ಮಾತ್ರವಲ್ಲ, ಅದನ್ನೂ ಮೀರಿ ನಿಜವಾಗುತ್ತಿದೆ.

ಕಳೆದ ವಾರದ ಎರಡು ಘಟನೆಗಳಿವು. ಸೀತಾಪುರ ಜಿಲ್ಲೆಯ ರೈತ ಗ್ಯಾನ್‌ಚಂದ್ರನನ್ನು ಖಾಸಗಿ ಲೇವಾದೇವಿಗಾರರ ಗೂಂಡಾಗೂ ಸಾಯಿಸಿದರು. ಆತನ ಹೆಂಡತ–ಮಕ್ಕಳ ಎದುರೇ ಇದು ನಡೆದಿದೆ.ಗ್ಯಾನ್ ಚಂದ್ರ ಟ್ರಾಕ್ಟರ್ ಖರಿದಿಗೆಂದು ಪೆರದ 5ಲಕ್ಷ ರೂ, ಸಾಲದಲ್ಲಿ 1.25ಲಕ್ಷ ಬಾಕಿ ವಸೂಲಿಗೆ ಬಂದ ಗೂಂಡಾಗಳೂ ಬೀಗದ ಕೈಗಳನ್ನು ಬಲವಂತದಿಂದ ಪಡೆದು ಟ್ರಾಕ್ಟರನ್ನು ಒಯ್ಯುವಾಗ ಅಂಗಲಾಚಿದ ರೈತನನನ್ನು ಚಲಿಸುತ್ತಿದ್ದ ಟ್ರಾಕ್ಟರ್ ಎದುರೇ ನೂಕಿ ಜಜ್ಜಿ ಹೋಗುವಂತೆ ಮಾಡಿದ ಕ್ರಿಮಿನಲ್‌ಗಳ ಬಂಧನ ಇನ್ನೂ ಆಗಿಲ್ಲ.

ಇದನ್ನು ಬಲವಾಗಿ ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ ಕಳೆದ ವರ್ಷ ವಿಧಾನಸಭಾ ಚುನಾವಣೆಗಳಲ್ಲಿ ರೈತರ ಸಾಲಮನ್ನಾದ ಭರವಸೆ ನೀಡಿದ ಪ್ರಧಾನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಇದಕ್ಕೆ ಜನಗಳ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದೆ. ಇದು ನಾಚಿಕೆಗೇಡಿನ ಸಂಗತಿ ಎಂದು ಹೇಳಿರುವ ಅದು ಈ ರೈತನ ಕುಟುಂಬಕ್ಕೆ 25ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆ.

.....ನ್ಯಾಯಕ್ಕಾಗಿ ರಕ್ತಾಕ್ಷರಗಳಲ್ಲಿ ಅತ್ಯಾಚಾರ ಪೀಡಿತೆಯ ಪತ್ರ

ಕಳೆದ ವರ್ಷ ಮಾರ್ಚ್‌ನಲ್ಲಿ ಬಾರಾಬಂಕಿಯಲ್ಲಿ ಇಂಜಿನಿಯರಿಂಗ್ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ದಿವ್ಯಾ ಪಾಂಡೆ ಮತ್ತು ಅಂಕಿತ್ ವರ್ಮ ಎಂಬವರ ಮೇಲೆ ಎಫ್‌ಐಆರ್ ಹಾಕಲಾಗಿತ್ತು. **"ಆದರೆ ಅವರ ಬಲಿಷ್ಟ ಸಂಪರ್ಕಗಳಿಂದಾಗಿ ಯಾವ ಕ್ರಮವನ್ನೂ ಕೈಗೊಳ್ಳಲಾಗಿಲ್ಲ, ಬದಲಿಗೆ ದೂರು ಹಿಂತೆಗೆದು ಕೊಳ್ಳುವಂತೆ ಪೀಡಿಸುತ್ತಿದ್ದಾರೆ. ನನಗೆ ನ್ಯಾಯ ಕೊಡಿಸಿ, ಇಲ್ಲವಾದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ"** ಎಂದು ಆಕೆ ರಾಜ್ಯದ ಮುಖ್ಯಮಂತ್ರಿಗಳಿಗೆ ಮತ್ತು ಬೇಟಿ ಬಚಾವೋ ಎಂಬ ಘೋಷಣೆ ಕೊಟ್ಟಿರುವ ದೇಶದ ಪ್ರಧಾನ ಮಂತ್ರಿಗಳಿಗೆ ತನ್ನ ರಕ್ತದಲ್ಲಿ ಬರೆದ ಪತ್ರವನ್ನು ಕಳಿಸಿದ್ದಾಳೆ ಎಂದು ಪಿಟಿಐ ಜನವರಿ 23ರಂದು ವರದಿ ಮಾಡಿದೆ.

ಲಾಭದ ಹುದ್ದೆ :ಎಎಪಿ ಶಾಸಕರ ಮೇಲಷ್ಟೇ ಕ್ರಮ, ಬಿಜೆಪಿ ಶಾಸಕರ ಮೇಲಿಲ್ಲ

ಚುನಾವಣಾ ಆಯೋಗ 20 ಎಎಪಿ ಶಾಸಕರನ್ನು ಅನರ್ಹಗೊಳಿಸುವ ನಿರ್ಣಯವನ್ನು ಪ್ರಕಟಿಸಿದೆ. ಇದಕ್ಕೆ ಕೊಟ್ಟಿರುವ ಕಾರಣ ಅವರು "ಲಾಭದ ಹುದ್ದೆ" ಯಲ್ಲಿದ್ದರು ಎಂಬುದು. ಇದನ್ನು ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ಬಲವಾಗಿ ಖಂಡಿಸಿದೆ.

ಇದೇ ಪ್ರಶ್ನೆಯಾದರೆ, ಹರ್ಯಾಣ , ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡದ ಶಾಸಕರ ವಿರುದ್ಧವೂ ಹಲವು ಕೇಸುಗಳು ಆಯೋಗದ ಮುಂದಿವೆ. ಆದರೆ ಅವನ್ನು ಬಗೆಹರಿಸುವ ಬಗ್ಗೆ ಆಯೋಗ ಯಾವ ಆಸಕ್ತಿಯನ್ನೂ ತೋರಿಸಿಲ್ಲವೇಕೆ ಎಂದು ಸಿಪಿಐ(ಎಂ) ಪ್ರಶ್ನಿಸಿದೆ. ಏಕೆಂದರೆ ಅವೆಲ್ಲ ಬಿಜೆಪಿ ಶಾಸಕರ ವಿರುದ್ಧ ಕೇಸುಗಳು. ಎಎಪಿ ಶಾಸಕರ ವಿರುದ್ಧ ಅತ್ಯಂತ ತುರ್ತಿನಿಂದ ಕೈಗೊಂಡ ಕ್ರಮ ವಾಸ್ತವವಾಗಿ ಕೇಂದ್ರದಲ್ಲಿನ ರಾಜಕೀಯ ಯಜಮಾನರುಗಳ ಪ್ರೀತ್ಯರ್ಥ ಕೈಗೊಂಡಿರುವಂತದ್ದು, ಎಂದಿರುವ ದಿಲ್ಲಿ ಸಿಪಿಐ(ಎಂ) ಈ ನಿರ್ಧಾರ ಅನುಮಾನಗಳಿಗೆ ಎಡೆ ಮಾಡಿಕೊಡುವಂತದ್ದು ಎಂದಿದೆ. ಏಕೆಂದರೆ ಈ ನಿರ್ಧಾರವನ್ನು ಮುಖ್ಯ ಚುನಾವಣಾ ಆಯುಕ್ತರು ನಿವೃತ್ತರಾಗುವ ಹಿಂದಿನ ದಿನವಷ್ಟೇ ಕೈಗೊಳ್ಳಲಾಗಿದೆ. ಇದು ಭಾರತದ ಚುನಾವಣಾ ಆಯೋಗ ಆಳುವ ಪಕ್ಷದ ಒತ್ತಡದ ಅಡಿಯಲ್ಲಿ ಕೆಲಸ ಮಾಡುತ್ತಿದೆಯೇ ಎಂಬ ಅನುಮಾನವನ್ನು ಮೂಡಿಸಿದೆ ಎಂದು ಅದು ಹೇಳಿದೆ. ರಾಷ್ಟ್ರಪತಿಗಳು ಅಷ್ಟೇ ತುರ್ತಾಗಿ ಅದಕ್ಕೆ ಅನುಮೊದನೆ ನೀಡಿರುವುದು ಇದನ್ನು ಮತ್ತಷ್ಟು ಬಲಪಡಿಸಿದೆ.

ಬಹಳ ದಿನಗಳಿಂದ ಚುನಾವಣಾ ಆಯೋಗದ ಕೆಲಸ ಕಾರ್ಯಗಳು ಸಂದೇಹಾಸ್ಪದವಾಗಿವೆ. ಗುಜರಾತ್ ಚುನಾವಣಾ ದಿನಾಂಕಗಳ ಪ್ರಕಟಣೆಯಲ್ಲಿರಬಹುದು, ಆದರೆ 'ಲಾಭದ ಹುದ್ದೆ'ಯ ವಿಷಯದಲ್ಲಾಗಿರಬಹುದು., ಚುನಾವಣಾ ಆಯೋಗ ಆರಿಸಿ–ಆರಿಸಿ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ, ಯಾವುದೇ ಗಂಭೀರ ಅಪರಾಧದ ದಾಖಲೆಯಿಲ್ಲದೆ ಶಾಸಕರನ್ನು ಅನರ್ಹಗೊಳಿಸಿರುವುದು ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

'ಲಾಭದ ಹುದ್ದೆ' ಎಂದರೆ ನಿಜವಾಗಿ ಏನು ಎಂದು ಮರು ನಿರೂಪಿಸಿ ಅದರ ಪ್ರಕಾರ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಆದ್ದರಿಂದ ಚುನಾವಣಾ ಆಯೋಗದ ನಿರ್ಧಾರ ಒಂದು ಚುನಾಯಿತ ಸರಕಾರದ ವಿರುದ್ಧ ರಾಜಕೀಯ ಪಕ್ಷಪಾತವಾಗಿಯೇ ಕಾಣುತ್ತದೆ.

ಎಲ್ಲ ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳು ಸಂವಿಧಾನಿಕ ಸಂಸ್ಥೆಗಳಲ್ಲಿ ರಾಜಕೀಯ ಹಸ್ತಕ್ಷೇಪದ ವಿರುದ್ಧ ದನಿಯೆತ್ತಬೇಕು, 'ಲಾಭದ ಹುದ್ದೆ' ಪ್ರಶ್ನೆಯ ಮೇಲೆ 'ಒಂದು ಕಾನೂನು, ಒಂದು ನಿಯಮ' ಎಂಬುದನ್ನು ಪಾಲಿಸಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಈ ಪ್ರಜಾಪ್ರಭುತ್ವ–ವಿರೋಧಿ ಕ್ರಮವನ್ನು ಹಿಂತೆಗೆದುಕೊಳ್ಳಬೇಕು, ಚುನಾಯಿತ ಶಾಸಕರು ತಮ್ಮ ಸಂವಿಧಾನಿಕ ಕರ್ತವ್ಯಗಳನ್ನು ಯಾವುದೇ ಒತ್ತಡ, ರಾಜಕೀಯ ಇಲ್ಲದೆ ನಿರ್ವಹಿಸಲು ಅವಕಾಶ ಕಲ್ಪಿಸಿ ಕೊಡಬೇಕು ಎಂದೂ ಒತ್ತಾಯಿಸಿದೆ.

ಲ್ಯಾಟಿನ್ ಅಮೆರಿಕದ ಸವಾಲುಗಳು ಈಕ್ವೇಡಾರ ಹಾಗೂ ಹ್ಯೂಂಡಾರಸ್ ನಲ್ಲಿ ಹಸ್ತಕ್ಷೇಪ

ಲ್ಯಾಟಿನ್ ಅಮೆರಿಕಾದ ಎಡ ಪ್ರಗತಿಪರ ನವಉದಾರವಾದಿ–ವಿರೋಧಿ ರಾಜಕೀಯ ಶಕ್ತಿಗಳು ಬಲವಾಗಿರುವ ದೇಶಗಳಲ್ಲಿ ರಾಜಕೀಯದಲ್ಲಿ, ಚುನಾವಣೆಗಳಲ್ಲಿ ಅಮೆರಿಕಾದ ಹಸ್ತಕ್ಷೇಪ ಮಾಡುತ್ತಿದೆ. ಕಳೆದ ವಾರ ಚಿಲಿಯಲ್ಲಿ ಈ ಶಕ್ತಿಗಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ವರದಿಯಾಗಿತ್ತು. ಈ ವಾರ ಈಕ್ವೇಡಾರ ಹಾಗೂ ಹ್ಯೂಂಡಾರಸ್ ನಲ್ಲಿ ಅಮೆರಿಕನ್ ಹಸ್ತಕ್ಷೇಪಗಳ ಬಗ್ಗೆ ವಿವರಗಳು ಮತ್ತು ಈ ಮೂರರ ಹಿಂದೆ ಇರುವ ಕೆಲವು ಸಾಮಾನ್ಯ ಬೆಳವಣಿಗೆಗಳ ಬಗ್ಗೆ ಒಂದು ವಿಶ್ಲೇಷಣೆ.



ನಾಗರಾಜ ನಂಜುಂಡಯ್ಯ


ಲೆನಿನ್ ಮೊರೆನೊ – ಜಾರ್ಜ್ ಗ್ಲಾಸ್

ಈಕ್ವೇಡಾರ್ : ಕಷ್ಟಕರ ಸನ್ನಿವೇಶದಲ್ಲಿ

ರಾಫೆಲ್ ಕೊರ್ರೆಯಾ ಸ್ವಯಂ ಪ್ರೇರಣೆಯಿಂದ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾದ ನಂತರ, ಈಕ್ವೇಡಾರ್ ತುಂಬ ಕಷ್ಟಕರವಾದ ರಾಜಕೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಇವರ ಉತ್ತರಾಧಿಕಾರಿ ಲೆನಿನ್ ಮೊರೆನೊ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೇಲೆ, ಆಡಳಿತದ ಕಾರ್ಯ ವೈಖರಿಯ ಮತ್ತು ಅದರ ರಾಜಕೀಯ ದಿಕ್ಕಿನಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಮೊರೆನೊ ರವರು, ರಾಫೆಲ್ ಕೊರ್ರೆಯಾ ರವರ ಎಲ್ಲ ನೀತಿಗಳಿಗೆ ವ್ಯತಿರಿಕ್ತ ತಿರುವು ನೀಡಿ, ಬಲಪಂಥೀಯ ರಾಜಕೀಯ ಮತ್ತು ಆರ್ಥಿಕ ಶಕ್ತಿಗಳನ್ನು ಸಂಪ್ರೀತಗೊಳಿಸುವ ಪ್ರಯತ್ನದಲ್ಲಿ ತಲ್ಲೀನರಾಗಿದ್ದಾರೆ.

ಕುರಿ ವೇಷದಲ್ಲಿರುವ ತೋಳ

ಒಂದು ದಶಕದಿಂದ ನಿರಂತರವಾಗಿ ಅಧ್ಯಕ್ಷರಾಗಿದ್ದ ರಾಫೆಲ್ ಕೊರ್ರೆಯಾ ರವರು ರಚಿಸಿದ್ದ "ಅಲಾಯನ್ಸ್ ಪೈರ್ಝ್" ಆಳುವ ಪಕ್ಷದ ಎಲ್ಲಾ ಆದರ್ಶಗಳಿಗೆ ಮೊರೆನೊ ರವರು ದ್ರೋಹ ಮಾಡುತ್ತಿದ್ದಾರೆ. ಇವರೊಬ್ಬ "ಕುರಿ ವೇಷದಲ್ಲಿರುವ ತೋಳ" ಎಂಬ ಆರೋಪವನ್ನು ರಾಫೆಲ್ ಮತ್ತು ಅವರ ಬೆಂಬಲಿಗರು ಮಾಡಿದ್ದಾರೆ. 'ನಾಗರೀಕ ಕ್ರಾಂತಿ' ಯ ನೀತಿಗಳಿಗೆ ಅವರು ದ್ರೋಹ ಬಗೆದಿದ್ದಾರೆ ಎಂದು ಉಗ್ರವಾಗಿಯೇ ರಾಫೆಲ್ ಕರೆದಿದ್ದಾರೆ. 2013 ರಿಂದ ಕೊರ್ರೆಯಾ ಜೊತೆ ಉಪಾಧ್ಯಕ್ಷರಾಗಿದ್ದ ಜಾರ್ಜ್ ಗ್ಲಾಸ್ ರನ್ನು ಭ್ರಷ್ಟಾಚಾರದ ಸುಳ್ಳು ಆರೋಪದಲ್ಲಿ ಆರು ವರ್ಷಗಳ ಕಾಲ ಜೈಲು ಶಿಕ್ಷೆಗೆ ಒಳಪಡಿಸಿದಾಗಿನಿಂದಲೂ ಆಡಳಿತ ಮೈತ್ರಿಕೂಟದ ಭಿನ್ನಾಭಿಪ್ರಾಯಗಳು ಬೀದಿ ರಂಪವಾಗಿ ರಾಜಕೀಯ ಸಮಸ್ಯೆಗಳು ಹೆಚ್ಚಾಗಿದ್ದವು.

ಜಾರ್ಜ್ ಗ್ಲಾಸ್ 'ತಾನು ನಿರ್ದೋಷಿ, ತನ್ನ ಮೇಲಿನ ಭ್ರಷ್ಟಾಚಾರದ ಆರೋಪಗಳು ರಾಜಕೀಯ ಪ್ರೇರಿತವಾಗಿವೆ' ಎಂದಿದ್ದಾರೆ. ಬ್ರೆಜಿಲ್ ನಿರ್ಮಾಣ ಕಂಪನಿ 'ಓಡೆಬ್ರೆಕ್ಟ್'ನ ಗುತ್ತಿಗೆ ಹಗರಣದಲ್ಲಿ ಇವರು ಭಾಗಿಯಾಗಿದ್ದರು ಎಂಬ ಆರೋಪ ಮಾಡಲಾಗಿದೆ.

ಕೊರೆಯಾ ರವರು ಕೂಡಾ, ಇದು ರಾಜಕೀಯ ಪ್ರೇರಿತವಾದದ್ದು, ಅವರು 'ಮುಗ್ದ'ರೆಂದು ಗ್ಲಾಸ್ ರವರ ಬೆಂಬಲಕ್ಕೆ ನಿಂತಿದ್ದಾರೆ. ಅವರ ಮೇಲಿನ ಆರೋಪಗಳಲ್ಲಿ ಹುರುಳಿಲ್ಲ, ಈ ಗುತ್ತಿಗೆ ಒಪ್ಪಂದದಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಬದಲಿಗೆ ಬಲ–ಪಂಥಿಯರ ಮಧ್ಯಪ್ರವೇಶದಿಂದ, ವಿಚಾರಣೆಗಳಲ್ಲಿ ಅಕ್ರಮಗಳು ನಡೆದಿವೆ. ಗ್ಲಾಸ್ ರವರು ಎಡಪಕ್ಷದ ಬೆಂಬಲದಿಂದ ಉಪಾಧ್ಯಕ್ಷರಾಗಿದ್ದು ರಾಫೆಲ್ ನಂತರ ಈಕ್ವೇಡಾರ್ ನ ಅಧ್ಯಕ್ಷರಾಗಬೇಕಿತ್ತು. ಇದನ್ನು ತಡೆಹಿಡಿಯಲು ವಿಚಾರಣೆಗಳಲ್ಲಿ ಬಲಪಂಥೀಯರು ಶಾಮೀಲಾಗಿ, ಇದರ ಮೇಲೆ ಆರೋಪವರಿಸಿ ಜೈಲಿಗೆ ತಳ್ಳಿದ್ದಾರೆ ಎಂದೂ ಕೊರ್ರೆಯಾ ಮತ್ತು ಬೆಂಬಲಿಗರ ವಾದವಾಗಿದೆ. ಬ್ರೆಜಿಲ್‌ನ ಲೂಲಾ, ದಿಲ್ಮಾ ಮತ್ತು ಅರ್ಜೆಂಟಿನಾದ ಕ್ರಿಸ್ಮಿನಾ ಮೇಲೆಯೂ ಇದೇ ರೀತಿಯ ಆರೋಪ ಮಾಡಿ, ಅವರುಗಳನ್ನು ಅಧ್ಯಕ್ಷ ಸ್ಥಾನದಿಂದ ಹೊರ ಹಾಕಿದ್ದಾರೆ. ಅಂತಹದ್ದೇ ಮಾದರಿಯ ತಂತ್ರವನ್ನು ಈಕ್ವೇಡಾರ್‌ನಲ್ಲಿಯೂ ಹೂಡಲಾಗಿದೆ. ಈಕ್ವೇಡಾರ್‌ನ್ನು ಅಸ್ಥಿರಗೊಳಿಸುವ ಅಮೆರಿಕಾದ ಹಸ್ತಕೇಪದ ಒಂದು ಯೋಜನೆ ಸದ್ಯಕ್ಕೆ ಫಲಕಾರಿಯಾಗಿದೆ. ಆದರೆ ಇಲ್ಲಿನ ಜನ ಸರಿಯಾದ ಸಮಯದಲ್ಲಿ ಪ್ರತಿಕ್ರಿಯಿಸುತ್ತಾರೆ ಎಂಬ ಆಶಾಭಾವನೆಯನ್ನು ರಾಫೆಲ್ ಕೊರ್ರೆಯಾ ರವರು ವ್ಯಕ್ತಪಡಿಸಿದ್ದಾರೆ.

ಎಡ ಪಕ್ಷಗಳನ್ನು ಸರಕಾರದಿಂದ ಹೊರಹಾಕುವಲ್ಲಿ ಹಾಗೂ ಅದರ 'ನಾಗರಿಕ ಕ್ರಾಂತಿ' ಯ ಮೂಲಕ, ರಾಫೆಲ್ ನೇತೃತ್ವದಲ್ಲಿ ಮಾಢದ ಸಾಧನೆಗಳನ್ನು ಅಳಿಸಿಹಾಕುವಲ್ಲಿ ಯು.ಎಸ್.ನ ಯೋಜನೆಯ ಬಗ್ಗೆ ರಾಶಿ ರಾಶಿ ದಾಖಲೆಗಳನ್ನು ವಿಕಿಲೀಕ್ಸ್ ಬಿಡುಗಡೆಗೊಳಿಸಿದೆ. ಜನರಿಗೆ ಸತ್ಯದ ಅರಿವುಂಟಾಗಿದೆ. ಹಾಗಾಗಿ ಜನಪರ ಶಕ್ತಿಗಳು ಒಂದಾಗಿ ಸಜ್ಜುಗೊಂಡು 'ಯು.ಎಸ್'ನ ಯೋಜನೆಗಳಿಗೆ ಹೇಗೆ ಪ್ರತಿರೋಧ ಒಡ್ಡುತ್ತಾರೆ ಎಂಬುದನ್ನು ಕಾದುನೋಡಬೇಕು.

ಹೊಂಡುರಾಸ್ : ಎಡ–ಅಭ್ಯರ್ಥಿ ನಸ್ರಲ್ಲಾಗೆ ಅಧ್ಯಕ್ಷ ಸ್ಥಾನ ನಿರಾಕರಣೆ

ಹೊಂಡುರಾಸ್‌ನಲ್ಲಿ ಇತ್ತೀಚೆಗೆ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಮೈತ್ರಿಕೂಟದ ಎಡ ಅಭ್ಯರ್ಥಿಯಾದ ಸಾಲ್ವಡಾರ್ ನಸ್ರಿಲ್ಲಾರವರು ಪ್ರತಿಸ್ಪರ್ಧಿ ಆಡಳಿತದಲ್ಲಿದ್ದ ಬಲ–ಪಂಥೀಯ ಮೈತ್ರಿಕೂಟದ ಅಭ್ಯರ್ಥಿ ನಸ್ರಲ್ಲಾ ಜ್ಯುನ್ ಒಲ್ಯಾಂಡೋ ಹೆರ್ನಾಂಡ್ಝೆ ಗಿಂತಲೂ ಹೆಚ್ಚು ಮತಗಳನ್ನು ಪಡೆದಿದ್ದರೂ ಸಹ ವಿಜಯಿ ಎಂದು ಘೋಷಿಸಲಿಲ್ಲ. ಸುಪ್ರೀಂ ಎಲೆಕ್ಟೋರಲ್ ಟ್ರಿಬ್ಯೂನಲ್ (ಟಿ.ಎಸ್.ಇ) ಫಲಿತಾಂಶವನ್ನು ಹಿಂಪಡೆದು, ಅಧ್ಯಕ್ಷ ಒಲ್ಯಾಂಡೋ ಹೆರ್ನಾಂಡ್ಝ್ ರವರನ್ನು ಶೇ. 42.95 ರಷ್ಟು ಮತಗಳನ್ನು ಪಡೆದು ವಿಜಯಿಯಾಗಿದ್ದಾರೆ ಎಂದು ಘೋಷಿಸಿತು.

ಅಧ್ಯಕ್ಷ ಒಲ್ಯಾಂಡೋ ಹೆರ್ನಾಂಡ್ಝ್ ಸರ್ಕಾರವು ಅಧಿಕಾರದಲ್ಲಿ ಮುಂದುವರಿಯಲಿ ಎಂಬ ಕಾರಣದಿಂದ, ಚುನಾವಣೆಯಲ್ಲಿ ಮತಗಳ ವಂಚನೆ ನಡೆದಿದೆ ಎಂದು ಹೊಂಡುರಾಸ್ ನ ಬಹುಪಾಲು ಜನರು, ಟ್ರಿಬ್ಯೂನಲ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾತ್ರವಲ್ಲದೆ ಈ ಆಡಳಿತಕ್ಕೆ ಸಹಾನುಭೂತಿಯೊಂದಿರುವ ಬಲ–ಪಂಥೀಯ ಅಮೆರಿಕಾದ ಸರಕಾರಗಳ ಒಕ್ಕೂಟಕ್ಕೆ (ಓ.ಎ.ಎಸ್) ಕೂಡಾ, ಚುನಾವಣೆಗಳಲ್ಲಿ ವಂಚನೆ ನಡೆದಿಲ್ಲವೆಂಬುದನ್ನು ತಳ್ಳಿ ಹಾಕಲು ಸಾಧ್ಯವಾಗಿಲ್ಲ ಎಂದು ಗಮನಿಸಬೇಕು.

ಇದೆಲ್ಲಾ ಅಮೆರಿಕಾದ ಹಸ್ತಕ್ಷೇಪದಿಂದಲೇ ನಡೆದಿದೆ ಎಂದು ಎಡ ಅಭ್ಯರ್ಥಿ ಸಾಲ್ವಾಡಾರ್ ನಸ್ರಲ್ಲಾ ಆರೋಪಿಸಿದ್ದಾರೆ. ಇದರಿಂದಾಗಿ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಅಪಾಯದ ಹಾಗೂ ಚುನಾವಣಾ ಆಕ್ರಮಗಳ ವಿರುದ್ಧ ನ್ಯಾಯಕ್ಕಾಗಿ ಹೊಂಡುರಾಸ್ ಜನ ಬೀದಿಗಿಳಿದು ಹೋರಾಡುತ್ತಿದ್ದಾರೆ. ನ್ಯಾಯಸಿಗುವ ವರೆವಿಗೂ ಈ ಹೋರಾಟ ಮುಂದುವರಿಸಲು ನಸ್ರಲ್ಲಾ ತೀರ್ಮಾನಿಸಿದ್ದಾರೆ.

ಹೊಂಡುರಾಸ್ ನಲ್ಲಿನ ಪ್ರಸ್ತುತ ರಾಜಕೀಯ ಬಿಕ್ಕಟ್ಟು ವಾಸ್ತವವಾಗಿ 2009 ರಲ್ಲಿ ಯು.ಎಸ್. ಬೆಂಬಲದಿಂದ ಚುನಾಯಿತರಾಗಿದ್ದ ಆಗಿನ ಅಧ್ಯಕ್ಷ ಝೆಲಾಯಿ ಅವರನ್ನು ಕ್ಷಿಪ್ರಕ್ರಾಂತಿಯ ಮೂಲಕ ಉರುಳಿಸಿದ್ದರ ಮುಂದುವರಿಕೆ. ದೇಶದ ಆರ್ಥಿಕ ಮತ್ತು ಸಾಮಾಜಿಕ ನೀತಿಗಳ ಮೇಲೆ ಪ್ರಭಾವ ಬೀರುವ ಸಲುವಾಗಿ ಯು.ಎಸ್. ಲಕ್ಷಾಂತರ ಡಾಲರ್‌ಗಳನ್ನು ಬಲಪಂಥೀಯ ಶಕ್ತಿಗಳ ಮೇಲೆ ಸುರಿಯುತ್ತಿತ್ತು. ಬಲಪಂಥಿಯ ಅಧ್ಯಕ್ಷ ಹೆರ್ನಾಂಡ್ಝ್ ರ ವಿಜಯವನ್ನು ಖಚಿತ ಪಡಿಸಲು ಅಂತಿಮವಾಗಿ ಚುನಾವಣೆಗಳಲ್ಲಿ ಹಸ್ತಕ್ಷೇಪ ಮಾಡಿರುವುದು, ಹೊಂಡುರಾಸ್ ಜನತೆಯ ಆಕ್ರೋಶಕ್ಕೆ ಕಾರಣವಾಗಿದೆ. ಎದುರಾಗಿರುವ ಹಸ್ತಕ್ಷೇಪದ ಸವಾಲಿಗೆ ಪ್ರತಿಸವಾಲು ಒಡ್ಡುವ ನಿಟ್ಟಿನಲ್ಲಿ ನಸ್ರಲ್ಲಾ ನೇತೃತ್ವದಲ್ಲಿ ಇಲ್ಲಿನ ಜನರು ಸಜ್ಜುಗೊಳ್ಳುತ್ತಿದ್ದಾರೆ. ಮರು ಚುನಾವಣೆ ನಡೆಸುವವರಿಗೂ ಹೋರಾಟ ಮುಂದುವರಿಸುವುದಾಗಿ ಜನರು ಬೀದಿಗಿಳಿದಿದ್ದಾರೆ.

ಲ್ಯಾಟಿನ್ ಅಮೆರಿಕಾದ ಮೂರು ದೇಶಗಳ (ಚಿಲಿ, ಈಕ್ವಾಡರ್, ಹೊಂಡುರಸ್) ರಾಜಕೀಯದಲ್ಲಿ ಅಮೆರಿಕಾದ ನೇರ ರಾಜಕೀಯ ಹಸ್ತಕ್ಷೇಪ ದಾಖಲೆಗಳ ಸಮೇತ ಸಾಭೀತಾಗಿದೆ. ಈ ಖಂಡದ ಬಹುತೇಕ ಎಲ್ಲಾ ಪ್ರಗತಿಪರ ಆಡಳಿತಗಳು ಅಮೆರಿಕಾದ ಕುತಂತ್ರಗಳನ್ನು ವಿರೋಧಿಸುತಿವೆ. ನವ–ಉದಾರವಾದದ ನೀತಿಗಳ ಪರಿಣಾಮದಿಂದಾಗಿ ಜನರ ಬದುಕು ಕುಸಿದಿದೆ. ಅದಕ್ಕಾಗಿ ಪರ್ಯಾಯ ನೀತಿಗಳಿಗಾಗಿ ಜನಪರ ಹೋರಾಟಗಳು ಬಲಿಷ್ಠಗೊಳ್ಳುತ್ತಿವೆ. ಆದರೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ, ಈ ಪ್ರಗತಿಪರ ಶಕ್ತಿಗಳ ರಾಜಕೀಯ ಹಾಗೂ ಸೈದ್ಧಾಂತಿಕ ಯೋಜನೆಗಳಲ್ಲಿ ಇರುವ ಇತಿ–ಮಿತಿಗಳು, ಸಾಮಾಜಿಕ ವೈರುಧ್ಯಗಳು ಬಯಲುಗೊಳ್ಳುತ್ತಿವೆ. ಇದಕ್ಕೆ ಪರಿಹಾರ ಮಾರ್ಗಗಳನ್ನು ಹುಡುಕಿಕೊಳ್ಳದೆ, ಬಂಡವಾಳಶಾಹಿಗೆ ಗಟ್ಟಿಯಾದ ಪರ್ಯಾಯ ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸದೆ, ತಾವು ಬೋಧಿಸುವ ಆದರ್ಶಗಳು ಕಾರ್ಯಸಾಧ್ಯವೆಂದು ತೋರಿಸುವುದು ಮತ್ತು ಜನರ ನಂಬಿಕೆಯನ್ನು ಉಳಿಸಿಕೊಳ್ಳುವುದು ಈ ಶಕ್ತಿಗಳಿಗೆ ಕಷ್ಟವಾಗಲಿದೆ. ●


ನಸ್ರಲ್ಲಾ ಜ್ಯುನ್ – ಹೆರ್ನಾಂಡ್ಝೆ – ಒಲ್ಯಾಂಡೋ

JANASHAKTHI KANNADA VARA PATRIKE Jan 29 - Feb 4, 2018 Price: Rs. 10/- Date of Publication: 26 January 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಜನವರಿ 30ರ ಮಾನವ ಸರಪಳಿಗೆ ಸಮಾವೇಶಗಳು ಸಿದ್ಧತೆಗಳಲ್ಲದೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರಾಂದೋಲನ ಮುಂದುವರೆದಿದೆ. ಕಳೆದ ಸಂಚಿಕೆಯಲ್ಲಿ ಅವುಗಳ ಕೆಲವು ಜಲಕ್ ಕೊಡಲಾಗಿತ್ತು. ಇಲ್ಲಿ ಇನ್ನೂ ಕೆಲವು ಇವೆ. ಇದಲ್ಲದೆ ಸಾಂಸ್ಕೃತಿಕ ಲೋಕದ ಹಲವು ಪ್ರಮುಖರು ವಿಡಿಯೋ ಹೇಳಿಕೆಗಳನ್ನು ನೀಡಿ ಬೆಂಬಲಿಸಿದ್ದಾರೆ. ಅವುಗಳಲ್ಲಿ ಆಯ್ದವೂ ಕೆಲವು ಇಲ್ಲಿವೆ. ಪುಟ 5 ರಲ್ಲಿ ವರದಿ ಮಾಡಲಾದ ಸೂಚಿಸಿದ ಕೆಲವು ಸಿದ್ಧತೆಗಳ ಸ್ಯಾಂಪಲ್ (ಬೆಂಗಳೂರು ಉತ್ತರ ಜಿಲ್ಲಾ ಸಮಾವೇಶ, (ಬೆಂಗಳೂರು ಉತ್ತರ ಬೈಕ್ ರ್‍ಯಾಲಿ, ಹೊಸಪೇಟೆ ತಾಲೂಕು ಸಮಾವೇಶ, ಬೆಂಗಳೂರಿನ ಯಾರಬ್‌ನಗರದಲ್ಲಿ ಸಿದ್ಧತಾ ಸಭೆ, ಪೀಣ್ಯದಲ್ಲಿ ಕಾರ್ಮಿಕರ ನಡುವೆ ಸಿದ್ಧತಾ ಸಭೆಗಳ) ಫೋಟೋಗಳೂ ಇವೆ.



ಸೌಹಾರ್ದತೆಗಾಗಿ ನಿಮ್ಮ ಹತ್ತು ನಿಮಿಷ ಕೊಡಿ

ಜನವರಿ 30 ಸೌಹಾರ್ದತೆಗಾಗಿ ಬದುಕಿದ ಗಾಂಧಿಯವರು ಹುತಾತ್ಮರಾದ ದಿನ. ಅಂದು ನಾವೆಲ್ಲರೂ ಕೇವಲ ಮನುಷ್ಯರಾಗಿ, ಕರ್ನಾಟಕದ ನಾಗರೀಕರಾಗಿ ಬರೀ ಹತ್ತು ನಿಮಿಷ ಒಂದು ಕಡೆಗೆ ಸೇರಿ ಪರಸ್ಪರ ಕೈ ಹಿಡಿದು ಮಾನವ ಸರಪಳಿ ನಿರ್ಮಿಸಿ ಸೌಹಾರ್ದ, ಸಾಮರಸ್ಯ, ಸಹಬಾಳ್ವೆಯಲ್ಲಿ ನಮಗಿರುವ ಶ್ರದ್ಧೆಯನ್ನು ತೋರಿಸೋಣ. ಯಾವ ಘೋಷಣೆಗಳು ಬೇಡ. ಯಾವ ಪಕ್ಷಗಳ ಗೊಡವೆಯೂ ಬೇಡ. ಅಪರಾಹ್ನ 4 ರಿಂದ 4.10 ರವರೆಗೆ ಹತ್ತು ನಿಮಿಷಗಳ ಕಾಲ ಸಾಮರಸ್ಯದ ಹೊಸ ನಕಾಶೆಯನ್ನು ಹಿಡಿದುಕೊಂಡ ಕೈಗಳಿಂದ ಬರೆಯೋಣ.

~ *ಡಾ.ರಾಜೇಂದ್ರ ಚೆನ್ನಿ*





ಶತಮಾನಗಳ ಇತಿಹಾಸವಿರುವ ಭಾರತವು ಮಾನವನ ಘನತೆಯನ್ನು ಎತ್ತಿ ಹಿಡಿಯಲು ಮಾಡಿದ ಪ್ರಯತ್ನಗಳು ಬಹಳ ಕಡಿಮೆ. ಅದು ಮತ ಧರ್ಮಗಳ ಹಾಗೂ ಜಾತಿಗಳ ನಡುವೆ ಭೇದವನ್ನು ಕಲ್ಪಿಸಿತು. ಭಾಷೆ, ಆಹಾರ, ಬಣ್ಣ ಮತ್ತಿತರವುಗಳ ನಡುವೆ ತಾರತಮ್ಯಗಳನ್ನೂ ಸೃಷ್ಟಿಸಲಾಯಿತು. . ಇಟ್ಟುಕೊಳ್ಳುವ ಹೆಸರಗಳೂ ಶ್ರೇಣೀಕರಣಕ್ಕೆ ಒಳಗಾದುವು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ ಆನಂತರ ರೂಪಿಸಿಕೊಂಡ ಸಂವಿಧಾನವು ಮೊದಲಬಾರಿಗೆ ಸರ್ವ ಸಮಾನತೆಯ ಬಗ್ಗೆ ಮಾತಾಡಿತು. ಆದರೆ ಕಳೆದ ಕೆಲವು ವರ್ಷಗಳಿಂದ ಸಂವಿಧಾನವನ್ನೇ ಪ್ರಶ್ನಿಸಲಾಗುತ್ತಿದೆ. ಇಂಥ ಸಂದರ್ಭದಲ್ಲಿ ಜನವರಿ 30ರಂದು ರಾಜ್ಯದಾದ್ಯಂತ ಮಾನವ ಸರಪಳಿಯನ್ನು ಹಮ್ಮಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ.

– *ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಧ್ಯಯನ ಪೀಠ, ಜೆ.ಎನ್.ಯು.*

ಒಡೆಯುವವರು ಬಹಳ ಬೇಗ ಒಂದಾಗುತ್ತಿದ್ದಾರೆ, ಕಟ್ಟುವವರು ಅಷ್ಟೇ ಬೇಗ ಒಡೆದು ಹೋಗುತ್ತಿದ್ದಾರೆ. ಇದೊಂದು ನಿರಂತರ ಸಂಘರ್ಷ. ಜಾತ್ಯತೀತರು ನಮ್ಮಲ್ಲಿ ಬಹುಸಂಖ್ಯೆಯಲ್ಲಿದ್ದಾರೆ, ಕೋಮುವಾದಿಗಳ ಸಂಖ್ಯೆ ಸಣ್ಣದು. ಒಡೆಯುವ ಪ್ರಯತ್ನ ನಡೆದಾಗೆಲ್ಲ ಕಟ್ಟುವ ಕೈಗಳು ಒಂದಾಗಬೇಕು ನಾವು ಕೂಡಿ ಕಟ್ಟುತ್ತಲೇ ಇರೋಣ, ಮನುಷ್ಯತ್ವದ ಮನಸ್ಸುಗಳನ್ನು, ಸೌಹಾರ್ದತೆಯ ನಾಡನ್ನು.

– *ದಿನೇಶ್ ಅಮ್ಮಿನ ಮಟ್ಟು, ಹಿರಿಯ ಪತ್ರಕರ್ತರು.*







ಧರ್ಮ, ಭಾಷೆಗಳ ಬಹುತ್ವ ಮತ್ತು ಭ್ರಾತೃತ್ವಗಳು ನಮ್ಮ ದೇಶವನ್ನು ಜಾಗತಿಕವಾಗಿ ಉನ್ನತ ಸ್ಥಾನದಲ್ಲಿ ಇರಿಸಿವೆ. ಇಂದು ಕೆಲವು ವಿಧ್ವಂಸಕ ಶಕ್ತಿಗಳು ದ್ವೇಷದ ಬೀಜವನ್ನು ಬಿತ್ತಿ ಒಡಕನ್ನು ಮೂಡಿಸಲು ಹೊರಟಿವೆ. ಈ ಸಂದರ್ಭದಲ್ಲಿ ನಾವು ಕೈ ಕೈ ಬೆಸೆದು ಮಾನವ ಸರಪಳಿ ಹೊಸೆದು ನಿಲ್ಲೋಣ, ಮಾನವೀಯತೆಯನ್ನು ಮೆರೆಯೋಣ.
ಬನ್ನಿ... ಬೆಂಗಳೂರಿನಲ್ಲಿ ನನ್ನೊಂದಿಗೆ ಕೈ ಜೋಡಿಸಿ...

– *ಚೇತನ್ ಅಹಿಂಸಾ, ನಟ.*

JANASHAKTHIKANNADAVARAPATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**